KA / BG - GPO/ 2515 /WPP-47/ 2009 - 2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೬ | ಬೆಂಗಳೂರು, ಗುರುವಾರ, ಮೇ ೫, ೨೦೧೧ (ವೈಶಾಖ ೧೫, ಶಕ ವರ್ಷ ೧೯೩೩) | ಸಂಚಿಕೆ ೧೮

ವಿಷಯಸೂಚಿ

ವಿಶೇಷ ರಾಜ್ಯಪತ್ರಗಳು

ದಿನಾಂಕ 05-05-2011

ವಿಶೇಷ ರಾಜ್ಯಪತ್ರ ಸಂಖ್ಯೆ	ಪ್ರಕಟಣೆ ದಿನಾಂಕ	ಅಧಿಸೂಚನೆ ಸಂಖ್ಯೆ ಮತ್ತು ದಿನಾಂಕ
422	19-04-2011	ಸಂಖ್ಯೆ : ಲೋಇ : 58 : ಇಎಪಿ : 2011, ಬೆಂಗಳೂರು, ದಿನಾಂಕ: 19-04-2011
424	19-04-2011	ಸಂಖ್ಯೆ : ಲೋಇ : 60 : ಇಎಪಿ : 2011, ಬೆಂಗಳೂರು, ದಿನಾಂಕ. 19-04-2011
425	19-04-2011	**No. SARIE 94 SAEPA 2010, Bangalore, Dated: 19-4-2011**
426	20-04-2011	ಸಂಖ್ಯೆ: ಸಿಐ 10 ಎಸ್.ಪಿ.ಕ್ಯೂ 2011, ಬೆಂಗಳೂರು, ದಿನಾಂಕ: 19ನೇ ಏಪ್ರಿಲ್, 2011
427	20-04-2011	ಸಂಖ್ಯೆ: ಸಿಐ 10 ಎಸ್.ಪಿ.ಕ್ಯೂ 2011, ಬೆಂಗಳೂರು, ದಿನಾಂಕ: 19ನೇ ಏಪ್ರಿಲ್, 2011
428	23-04-2011	ಸಂ. ಇಡಿ 37 ಇಟಿಆರ್ 2009, ಬೆಂಗಳೂರು, ದಿನಾಂಕ: 23ನೇ ಏಪ್ರಿಲ್ 2011
429	23-04-2011	ಸಂಖ್ಯೆ: ಕ.ಲೋ./ಸಿಬ್ಬಂದಿ-1/81/2008-09, ದಿನಾಂಕ: 21/04/2011
430	25-04-2011	ನಂ : ಚು (2) ವಿವ 33/2010-11, ದಿನಾಂಕ: 25.04.2011

ಕರ್ನಾಟಕ ರಾಜ್ಯಪತ್ರವನ್ನು ಅಂತರಜಾಲದಲ್ಲಿ ವೀಕ್ಷಿಸಬಹುದು.
http//www.Kar.nic.in/gazette.

ಕರ್ನಾಟಕ ರಾಜ್ಯಪತ್ರವನ್ನು ಅಂತರಜಾಲದಲ್ಲಿ ವೀಕ್ಷಿಸಬಹುದು.
http//www.Kar.nic.in/gazette.

೨೦೧೧-೨೦೧೨ನೇ ಇಸವಿಯ ಕರ್ನಾಟಕ ರಾಜ್ಯಪತ್ರದ ಪರಿಷ್ಕೃತ ಚಂದಾ ದರ

ಕ್ರಮ ಸಂಖ್ಯೆ	ರಾಜ್ಯಪತ್ರದ ಭಾಗಗಳು	ಪ್ರತಿ ಒಂದಕ್ಕೆ ರೂ. ಪೈ.	ವಾರ್ಷಿಕ ಚಂದಾ ದರ ರೂ. ಪೈ.
1.	ಭಾಗ – 1	21-00	831-00
2.	ಭಾಗ – 2	5-00	182-00
3.	ಭಾಗ – 3	10-00	411-00
4.	ಭಾಗ – 4	3-00	109-00
5.	ಭಾಗ – 4ಎ	11-00	435-00
6.	ಭಾಗ – 5	22-00	879-00
7.	ಭಾಗ – 6 (ಬೆಂಗಳೂರು)........................	9-00	363-00
8.	ಭಾಗ – 6ಎ (ಮೈಸೂರು)........................	25-00	964-00
9.	ಭಾಗ – 6ಬಿ (ಧಾರವಾಡ)	45-00	1763-00
10.	ಭಾಗ – 6ಸಿ (ಗುಲ್ಬರ್ಗ)	29-00	1162-00
11.	ಸಂಪೂರ್ಣ ಕರ್ನಾಟಕ ರಾಜ್ಯಪತ್ರ ಕ್ರಸ. 1 ರಿಂದ 7 .... (ಭಾಗ–1 ರಿಂದ 6) ವಿಶೇಷ ರಾಜ್ಯಪತ್ರವನ್ನು ಹೊರತುಪಡಿಸಿ	81-00	3210-00
12.	ವಿಶೇಷ ರಾಜ್ಯಪತ್ರಗಳನ್ನು ಸಂಬಂಧಪಟ್ಟ ಇಲಾಖೆಗಳಿಂದ ಪಡೆಯಿರಿ ಮತ್ತು ಸರ್ಕಾರಿ ಪುಸ್ತಕ ಮಳಿಗೆಗಳಲ್ಲಿ ಮಾರಾಟಕ್ಕೆ ಲಭ್ಯವಿರುತ್ತವೆ.		

೨೦೧೧-೨೦೧೨ನೇ ಇಸವಿಯ ಕರ್ನಾಟಕ ರಾಜ್ಯಪತ್ರದ ಪ್ರಕಟಣೆ ದರ

ಕ್ರಮ ಸಂಖ್ಯೆ	ಪ್ರಕಟಣೆ ದರಗಳು		ಮೊತ್ತ ರೂ. ಪೈ.
1.	ಸ್ಥಳೀಯ / ಸ್ಥಾನಿಕ ಸಂಸ್ಥೆ ಮತ್ತು ಸರ್ಕಾರದ ಇಲಾಖೆ ಎ–4 ಅಳತೆಯ ಪ್ರತಿ ಪುಟಕ್ಕೆ	...	500-00
2.	ಪ್ರತಿ ಸಾಲಿನ 43 ಎಮ್ಸ್ ಅಥವಾ 2 ಸಾಲಿನ 21 ಎಮ್ಸ್	...	11-00
3.	ಖಾಸಗಿ ಸಂಸ್ಥೆ ಮತ್ತು ವಾಣಿಜ್ಯಕ್ಕೆ ಸಂಬಂಧಿಸಿದಂತೆ (ಕೆಪಿಟಿಸಿಎಲ್, ಕೆಎಸ್‌ಆರ್‌ಟಿಸಿ ತರಹ ಇತ್ಯಾದಿ ಪ್ರತಿ ಪುಟಕ್ಕೆ)	...	750-00
4.	ಪ್ರತಿ ಸಾಲಿನ 43 ಎಮ್ಸ್ ಅಥವಾ 2 ಸಾಲಿನ 21 ಎಮ್ಸ್	...	16-50
5.	ಅರ್ಧ ಪುಟಕ್ಕೆ ಅಥವಾ ಕಾಲು ಪುಟಕ್ಕೆ ಬರುವ ವಿಷಯ	...	½ ಅಥವಾ ¼ ಪುಟಕ್ಕೆ ದರ ನಿಗಧಿ
6.	ಕಾಲು ಪುಟಕ್ಕಿಂತ ಕಡಿಮೆ ಇರುವ ವಿಷಯಕ್ಕೆ	...	ಕ್ರಮ ಸಂಖ್ಯೆ 1 ಮತ್ತು 3 ಕ್ರಮ ಸಂಖ್ಯೆ 2 ಮತ್ತು 4ರಲ್ಲಿ ನಮೂದಿಸಿರುವಂತೆ ಪ್ರತಿ ಸಾಲಿಗೆ ದರ ನಿಗದಿಪಡಿಸಿರುವುದು
7.	ಹೆಚ್ಚಾಗಿ ಬೇಕಾಗಿರುವ ಪ್ರತಿ ಹಾಳೆಯ ಬೆಲೆ (ಮುದ್ರಿಸಿರುವ ಹಾಳೆಯ ಅಳತೆಯನ್ನು ನಿರೂಪಿಸಿ)	...	1-00

ಸೂಚನೆ :– 1. ಚಂದಾ ಹಣದ / ಪ್ರಕಟಣಾ ವೆಚ್ಚದ ಮೊತ್ತವನ್ನು **"0058 ಲೇಖನ ಸಾಮಗ್ರಿ ಮತ್ತು ಮುದ್ರಣ (1) ರಾಜ್ಯಪತ್ರ ಮತ್ತು ಇತರ ಪ್ರಕಟಣಾ ವೆಚ್ಚಗಳು"** ಖಜಾನೆಗೆ ಸಲ್ಲಿಸಿ, ಮೂಲ ಚಲನನ್ನು ಮುಂದಿನ ಕ್ರಮಕ್ಕಾಗಿ ಈ ಕಛೇರಿಗೆ ಕಳುಹಿಸಬೇಕು.

2. ಭಾಗ VI–ಎ, VI–ಬಿ, VI–ಸಿ ಗಳನ್ನು ಅನುಕ್ರಮವಾಗಿ ಮೈಸೂರು, ಧಾರವಾಡ ಮತ್ತು ಗುಲ್ಬರ್ಗಾದ ಶಾಖಾ ಮುದ್ರಣಾಲಯಗಳಿಂದ ಪಡೆಯಬಹುದು.

3. ಕರ್ನಾಟಕ ರಾಜ್ಯಪತ್ರಕ್ಕಾಗಿ ಈ ಕೆಳಕಂಡ ವಿಳಾಸದಲ್ಲಿ ಪತ್ರ ವ್ಯವಹರಿಸತಕ್ಕದ್ದು.

ಸಂಕಲನಾಧಿಕಾರಿಗಳು,
ಕರ್ನಾಟಕ ರಾಜ್ಯಪತ್ರ,
ಸರ್ಕಾರಿ ಹೊರವಲಯ ಮುದ್ರಣಾಲಯ,
ಮೈಸೂರು ರಸ್ತೆ, ಬೆಂಗಳೂರು–59

ಮುದ್ರಕರು :–ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ, ಬೆಂಗಳೂರು–59

KA / BG-GPO / 2515 / WPP-47 / 2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೬	ಬೆಂಗಳೂರು, ಗುರುವಾರ, ಮೇ ೫, ೨೦೧೧, (ವೈಶಾಖ ೧೫, ಶಕ ವರ್ಷ ೧೯೩೩)	ಸಂಚಿಕೆ ೧೮

ಭಾಗ – ೧

ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾದ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು

ಇಂಧನ ಸಚಿವಾಲಯ

ವಿಷಯ : ಮೆ॥ ಭದ್ರಗಿರಿ ಪವರ್ ಪ್ರೈವೇಟ್ ಲಿಮಿಟೆಡ್ ಇವರಿಗೆ 3.00 ಮೆಗಾ ವ್ಯಾಟ್ ಸಾಮರ್ಥ್ಯದ ಗೋಂದಿ ಕಿರುಜಲ ವಿದ್ಯುತ್ ಯೋಜನೆಗಾಗಿ ಕಾಲಾವಕಾಶ ವಿಸ್ತರಣೆ ಬಗ್ಗೆ.

ಓದಲಾಗಿದೆ :

1. ಸರ್ಕಾರಿ ಆದೇಶ ಸಂಖ್ಯೆ : ಡಿಇ 111 ಎನ್‌ಸಿಇ 2001 ದಿನಾಂಕ : 08–10–2001.
2. ಸರ್ಕಾರದ ಆದೇಶ ಸಂಖ್ಯೆ : ಇಎನ್ 449 ಎನ್‌ಸಿಇ 2004 ದಿನಾಂಕ : 30–12–2004.
3. ಸರ್ಕಾರದ ಆದೇಶ ಸಂಖ್ಯೆ : ಇಎನ್ 255 ಎನ್‌ಸಿಇ 2005 ದಿನಾಂಕ : 16–12–2005.
4. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ : ಕೆಆರ್‌ಇಡಿ/06/ಶೋಕಾಸ್ ನೋಟೀಸ್/2010 ದಿನಾಂಕ : 17–04–2010.
5. ಕಾರಣ ಕೇಳುವ ನೋಟೀಸು ಸಂಖ್ಯೆ : ಇಎನ್ 167 ಎನ್‌ಸಿಇ 2010, ದಿನಾಂಕ : 26–04–2010.
6. ಮೆ॥ ಭದ್ರಗಿರಿ ಪವರ್ ಪ್ರೈವೇಟ್ ಲಿಮಿಟೆಡ್ ಇವರ ಪತ್ರ ಸಂಖ್ಯೆ : BPPL/GM-A/77/2010-11, ದಿನಾಂಕ : 27–04–2010.
7. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ : ಕೆಆರ್‌ಇಡಿ/06/ಗೋಂದಿ ಕಿಜವಿ/2010/2019, ದಿನಾಂಕ : 30–06–2010/06–07–2010.
8. ದಿನಾಂಕ : 07–08–2010 ರಂದು ನಡೆದ ನಿರೂಪಣಾ ಸಭೆಯ ನಡವಳಿ.
9. ಸರ್ಕಾರದ ಪತ್ರ ಸಂಖ್ಯೆ : ಇಎನ್ 167 ಎನ್‌ಸಿಇ 2010 ದಿನಾಂಕ : 06–10–2010.
10. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ : ಕೆಆರ್‌ಇಡಿ/06/ಎಸ್‌ಹೆಚ್ 66/ಗೋಂದಿ/08, ದಿನಾಂಕ : 29–12–2010/01–01–2011.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಆದೇಶದಲ್ಲಿ ಮೆ॥ ಭದ್ರಗಿರಿ ಪವರ್ ಪ್ರೈವೇಟ್ ಲಿಮಿಟೆಡ್ ಇವರಿಗೆ ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲ್ಲೂಕಿನ ಸಿದ್ಲಾಪುರ ಗ್ರಾಮದ ಗೋಂದಿ ಅಣೆಕಟ್ಟಿನ ಎಡದಂಡೆಗೆ ಅಡ್ಡಲಾಗಿ 1.00 ಮೆಗಾ ವ್ಯಾಟ್ ಸಾಮರ್ಥ್ಯದ ಗೋಂದಿ ಕಿರುಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಆದೇಶದಲ್ಲಿ ಮೆ॥ ಭದ್ರಗಿರಿ ಪವರ್ ಪ್ರೈವೇಟ್ ಲಿಮಿಟೆಡ್ ಇವರಿಗೆ ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲ್ಲೂಕಿನ ಸಿದ್ಲಾಪುರ ಗ್ರಾಮದ ಗೋಂದಿ ಅಣೆಕಟ್ಟಿನ ಎಡದಂಡೆಗೆ ಅಡ್ಡಲಾಗಿ ಹಂಚಿಕೆ ಮಾಡಿರುವ 1.00 ಮೆಗಾ ವ್ಯಾಟ್ ಸಾಮರ್ಥ್ಯದ ಗೋಂದಿ ಕಿರುಜಲ ವಿದ್ಯುತ್ ಯೋಜನೆಯನ್ನು 3.00 ಮೆಗಾ ವ್ಯಾಟ್ ಸಾಮರ್ಥ್ಯಕ್ಕೆ ಹೆಚ್ಚಿಸಿ ಅನುಷ್ಠಾನ ಮಾಡಲು ಅನುಮತಿ ನೀಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಆದೇಶದಲ್ಲಿ ಮೆ॥ ಭದ್ರಗಿರಿ ಪವರ್ ಪ್ರೈವೇಟ್ ಲಿಮಿಟೆಡ್ ಇವರ ಮೇಲಿನ ಯೋಜನೆಯ ಸ್ಥಳವನ್ನು ಶಿವಮೊಗ್ಗ ಜಿಲ್ಲೆಯ ಭದ್ರಾವತಿ ತಾಲ್ಲೂಕಿನ ಚಿಕ್ಕಗೊಪ್ಪೇನಹಳ್ಳಿ ಗ್ರಾಮದ ಗೋಂದಿ ಅಣೆಕಟ್ಟಿನ ಎಡದಂಡೆಗೆ ಬದಲಾಯಿಸಿ ಅನುಮತಿ ನೀಡಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (4)ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಅಭಿವೃದ್ಧಿದಾರರ ಅನುಷ್ಠಾನದ ಅವಧಿಯು ಸರ್ಕಾರದ ಆದೇಶದಂತೆ ಪೂರ್ಣಗೊಂಡಿದ್ದು, ಅನುಷ್ಠಾನದ ನಿಟ್ಟಿನಲ್ಲಿ ಯಾವುದೇ ಪ್ರಗತಿಯನ್ನು ಸಾಧಿಸದೇ

(O)

ಇರುವುದರಿಂದ ಹಾಗೂ ಕಾಲಾವಕಾಶ ವಿಸ್ತರಣೆಯನ್ನು ಮಾಡಿಕೊಳ್ಳದೇ ಇರುವ ಹಿನ್ನೆಲೆಯಲ್ಲಿ ಮೆ॥ ಭದ್ರಗಿರಿ ಪವರ್ ಪ್ರೈವೇಟ್ ಲಿಮಿಟೆಡ್ ಇವರಿಗೆ ಯೋಜನೆ ಏಕೆ ರದ್ದುಪಡಿಸಬಾರದು ಎಂಬುದಕ್ಕೆ ಕಾರಣ ಕೇಳುವ ನೋಟೀಸನ್ನು ಜಾರಿ ಮಾಡಲು ಶಿಫಾರಸ್ಸು ಮಾಡಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (5)ರ ಕಾರಣ ಕೇಳುವ ನೋಟೀಸಿನಲ್ಲಿ ಯೋಜನೆಯ ಹಂಚಿಕೆ ಆದೇಶವನ್ನು ಏಕೆ ರದ್ದುಪಡಿಸಬಾರದೆಂದು ಮೆ॥ ಭದ್ರಗಿರಿ ಪವರ್ ಪ್ರೈವೇಟ್ ಲಿಮಿಟೆಡ್ ಇವರಿಗೆ ನೋಟೀಸನ್ನು ಕಳುಹಿಸಿದ 15 ದಿನಗಳೊಳಗಾಗಿ ಸಮಜಾಯಿಷಿಯನ್ನು ನೀಡುವಂತೆ ತಿಳಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (6)ರ ಅಭಿವೃದ್ಧಿದಾರರು, ಈ ಯೋಜನೆಗಾಗಿ ಕಾಲಾವಕಾಶವನ್ನು ಕೆ.ಆರ್.ಇ.ಡಿ.ಎಲ್.ಗೆ ಕೋರಲಾಗಿದ್ದರೂ ಅವರಿಂದ ಯಾವುದೇ ಪ್ರತಿಕ್ರಿಯೆ ಇಲ್ಲವೆಂದು ತಿಳಿಸಿ, ಈ ಯೋಜನೆಗಾಗಿ IREDA ದಿಂದ ಸಾಲ ಮಂಜೂರಾತಿಯಾಗಿದ್ದು, ಯೋಜನೆಯನ್ನು ಜುಲೈ 2010ರೊಳಗಾಗಿ ಪ್ರಾರಂಭಿಸಲಾಗುವುದೆಂದು ಕಾರಣ ಕೇಳುವ ನೋಟೀಸಿಗೆ ಉತ್ತರ ನೀಡಿರುತ್ತಾರೆ. ಸದರಿ ಉತ್ತರವನ್ನು ಸರ್ಕಾರದ ಪತ್ರ ಸಂಖ್ಯೆ : ಇಎನ್ 167 ಎನ್‌ಸಿಇ 2010, ದಿನಾಂಕ : 02–07–2010ರಲ್ಲಿ ಕೆ.ಆರ್.ಇ.ಡಿ.ಎಲ್.ಗೆ ಕಳುಹಿಸಿ ಅವರಿಂದ ವರದಿಯನ್ನು ಕೋರಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (7)ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ, ವ್ಯವಸ್ಥಾಪಕ ನಿರ್ದೇಶಕರು ಈ ಕಂಪನಿಯವರು ಯೋಜನೆಯನ್ನು 2010ರ ಸೆಪ್ಟೆಂಬರ್ ತಿಂಗಳಿನಲ್ಲಿ ಅನುಷ್ಠಾನಗೊಳಿಸಲು ಸಿದ್ಧತೆ ಮಾಡಿಕೊಂಡಿರುವುದರಿಂದ, ಯೋಜನೆಯ ಅನುಷ್ಠಾನದ ಕಾಲಾವಧಿಯನ್ನು ದಿನಾಂಕ : 01–10–2009 ರಿಂದ 30–09–2010ರವರೆಗೆ ವಿಸ್ತರಿಸಲು ಶಿಫಾರಸ್ಸು ಮಾಡಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (8)ರ ನಿರೂಪಣಾ ಸಭೆಯ ನಿರ್ಣಯದ ಉದ್ಧೃತ ಭಾಗವು ಈ ಕೆಳಗಿನಂತಿದೆ :–

> "ಈ ಕಂಪನಿಗೆ ದಿನಾಂಕ : 08–10–2001ರ ಸರ್ಕಾರಿ ಆದೇಶದಲ್ಲಿ ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲ್ಲೂಕಿನ ಸಿದ್ದಿಪುರ ಗ್ರಾಮದ ಬಳಿ 1.00 ಮೆ.ವ್ಯಾ. ಸಾಮರ್ಥ್ಯದ ಕಿರುಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲಾಗಿತ್ತು. ಈ ಯೋಜನೆಯ ಸಾಮರ್ಥ್ಯವನ್ನು ದಿನಾಂಕ : 30–12–2004ರ ಆದೇಶದಲ್ಲಿ 3.00 ಮೆ.ವ್ಯಾ.ಗೆ ಹೆಚ್ಚಿಸಲಾಗಿತ್ತು. ಅಭಿವೃದ್ಧಿದಾರರು ಯೋಜನೆಯನ್ನು ನಿಗದಿತ ಅವಧಿಯೊಳಗೆ ಅನುಷ್ಠಾನ ಮಾಡದಿರುವ ಹಿನ್ನೆಲೆಯಲ್ಲಿ, ಯೋಜನೆಯ ಹಂಚಿಕೆಯನ್ನು ಏಕೆ ರದ್ದುಪಡಿಸಬಾರದೆಂಬುದಕ್ಕೆ ಸಮಜಾಯಿಷಿಯನ್ನು ನೀಡುವಂತೆ ಕೋರಿ ಕಾರಣ ಕೇಳುವ ನೋಟೀಸನ್ನು ದಿನಾಂಕ : 26–04–2010ರಂದು ಜಾರಿ ಮಾಡಲಾಗಿತ್ತು.
>
> ಯೋಜನೆಯ ಅನುಷ್ಠಾನಕ್ಕಾಗಿ ಕಾಲಾವಕಾಶವನ್ನು ವಿಸ್ತರಿಸಲು ಕೆ.ಆರ್.ಇ.ಡಿ.ಎಲ್.ಗೆ ಪಾವತಿಸಬೇಕಾಗಿರುವ ಶುಲ್ಕವನ್ನು ಪಾವತಿಸಲಾಗಿದೆ ಎಂದು ತಿಳಿಸಿರುತ್ತಾರೆ. ನಿರೂಪಣೆಯ ಸಂದರ್ಭದಲ್ಲಿ ಅಭಿವೃದ್ಧಿದಾರರು ಕಾಮಗಾರಿಯ ಕೆಲಸಗಳಲ್ಲಿ ಪ್ರಗತಿಯನ್ನು ಸಾಧಿಸಲಾಗಿದೆ ಎಂದು, ಇ ಅಂಡ್ ಎಂ. ಪರಿಕರಗಳು ಯೋಜನೆಯ ಸ್ಥಳಕ್ಕೆ ತಲುಪಿರುತ್ತದೆ ಎಂದು ತಿಳಿಸಿದರು. ಈ ಯೋಜನೆಯನ್ನು 2010ರೊಳಗಾಗಿ ಪ್ರಾರಂಭಿಸಲಾಗುವುದೆಂದು ತಿಳಿಸಿದರು. ಈ ಮಾಹಿತಿಯ ಆಧಾರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಬೇಕೆಂದು ನಿರ್ಣಯಿಸಲಾಯಿತು."

ಮೇಲೆ ಓದಲಾದ ಕ್ರಮ ಸಂಖ್ಯೆ (9)ರ ಪತ್ರದಲ್ಲಿ, ದಿನಾಂಕ : 07–08–2010ರಂದು ನಡೆದ ನಿರೂಪಣಾ ಸಭೆಯ ನಿರ್ಣಯದಂತೆ, ಪ್ರಸ್ತಾವನೆಯನ್ನು ಕಳುಹಿಸಿಕೊಡಲು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರನ್ನು ಕೋರಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (10)ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು, ಅಭಿವೃದ್ಧಿದಾರರು ಯೋಜನೆಯ ಅನುಷ್ಠಾನದ ನಿಟ್ಟಿನಲ್ಲಿ ಸಾಧಿಸಿರುವ ಪ್ರಗತಿಯನ್ನು ಪಟ್ಟಿ ಮಾಡಿ ಕೆ.ಆರ್.ಇ.ಡಿ.ಎಲ್.ಗೆ ಪಾವತಿಸಬೇಕಾಗಿರುವ ಉಳಿದ ಶುಲ್ಕವನ್ನು ಪಾವತಿಸಬೇಕೆಂಬ ನಿಬಂಧನೆಯೊಂದಿಗೆ ದಿನಾಂಕ : 06–01–2008ರಿಂದ ಮುಂದಿನ ಮೂರು ವರ್ಷದ ಅವಧಿಗೆ ಕಾಲಾವಕಾಶವನ್ನು ವಿಸ್ತರಿಸಲು ಶಿಫಾರಸ್ಸು ಮಾಡಿ ಪ್ರಸ್ತಾವನೆಯನ್ನು ಕಳುಹಿಸಿಕೊಟ್ಟಿರುತ್ತಾರೆ.

ಅಭಿವೃದ್ಧಿದಾರರು ಎಲ್ಲಾ ಅನುಮೋದನೆಗಳನ್ನು ವಾಸ್ತವವಾಗಿ ಪಡೆದುಕೊಂಡಿರುವುದರಿಂದ ಹಾಗೂ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಕಾಲಾವಧಿ ವಿಸ್ತರಣೆಯನ್ನು ನೀಡಬಹುದಾಗಿದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುವ ಹಿನ್ನೆಲೆಯಲ್ಲಿ, ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ :–

ಸರ್ಕಾರಿ ಆದೇಶ ಸಂಖ್ಯೆ : ಇಎನ್ 167 ಎನ್‌ಸಿಇ 2010, ಬೆಂಗಳೂರು, ದಿನಾಂಕ: 28–02–2011

ಮೆ॥ ಭದ್ರಗಿರಿ ಪವರ್ ಪ್ರೈವೇಟ್ ಲಿಮಿಟೆಡ್ ಇವರಿಗೆ ಶಿವಮೊಗ್ಗ ಜಿಲ್ಲೆಯ ಭದ್ರಾವತಿ ತಾಲ್ಲೂಕಿನ ಚಿಕ್ಕಗೊಪ್ಪನಹಳ್ಳಿ ಗ್ರಾಮದ ಗೋಂದಿ ಅಣೆಕಟ್ಟಿನ ಎಡದಂಡೆಗೆ ಅಡ್ಡಲಾಗಿ ಅನುಮತಿಸಲಾದ 3.00 ಮೆಗಾ ವ್ಯಾಟ್ ಸಾಮರ್ಥ್ಯದ ಗೋಂದಿ ಕಿರುಜಲ ವಿದ್ಯುತ್ ಯೋಜನೆಯ ಅನುಷ್ಠಾನಕ್ಕಾಗಿ ಕೆಳಗಿನ ನಿಬಂಧನೆಗೊಳಪಟ್ಟು ದಿನಾಂಕ : 30–06–2011ರ ತನಕ ಕಾಲಾವಕಾಶವನ್ನು ವಿಸ್ತರಿಸಲಾಗಿದೆ :–

1. ಅಭಿವೃದ್ಧಿದಾರರು ಈ ಸಂಬಂಧ ಬಾಕಿ ಇರುವ ಶುಲ್ಕವನ್ನು ಕೆ.ಆರ್.ಇ.ಡಿ.ಎಲ್.ಗೆ ಪಾವತಿಸತಕ್ಕದ್ದು.
2. ಸದರಿ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.
3. ಮೇಲೆ ಓದಲಾದ (1)ರ ಹಂಚಿಕೆ ಆದೇಶದ ಇತರ ನಿಬಂಧನೆಗಳು ಯಥಾವತ್ತಾಗಿ ಮುಂದುವರೆಯುತ್ತವೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಸುರೇಶ್ ಬಿ. ಕೃಷ್ಣಪ್ಪನವರ್

ಸರ್ಕಾರದ ಅಧೀನ ಕಾರ್ಯದರ್ಶಿ

ಇಂಧನ ಇಲಾಖೆ

ಪಿ.ಆರ್. 628

ಇಂಧನ ಸಚಿವಾಲಯ

ವಿಷಯ : "ಜವಾಹರಲಾಲ್ ನೆಹರು ನ್ಯಾಶನಲ್ ಸೋಲಾರ್ ಮಿಷನ್" ಕಾರ್ಯಕ್ರಮದಲ್ಲಿ ಎನ್.ಟಿ.ಪಿ.ಸಿ. ವಿದ್ಯುತ್ ವ್ಯಾಪಾರ ನಿಗಮದ ಮುಖಾಂತರ ಕರ್ನಾಟಕದಲ್ಲಿ ಸೌರ ವಿದ್ಯುತ್ ಸ್ಥಾವರ ಯೋಜನೆಯ ವಿದ್ಯುತ್ ಖರೀದಿ ಒಪ್ಪಂದಗಳನ್ನು ಸಹಿ ಮಾಡುವ ಬಗ್ಗೆ.

ಓದಲಾಗಿದೆ :

1. ಎನ್.ಟಿ.ಪಿ.ಸಿ. ವಿದ್ಯುತ್ ವ್ಯಾಪಾರ ನಿಗಮದವರ ಪತ್ರ ಸಂಖ್ಯೆ : ಎನ್.ವಿ.ವಿ.ಎನ್./ಬಿಡಿ/ಜೆಎನ್‌ಎನ್‌ಎಸ್‌ಎಮ್/ಎನ್‌ಪಿ-ಸೋಲಾರ್/ಇಓಐ/31/11/00000001 ದಿನಾಂಕ : 26-11-2010.
2. ವ್ಯವಸ್ಥಾಪಕ ನಿರ್ದೇಶಕರು ಬೆಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತರವರ ಪತ್ರ ಸಂಖ್ಯೆ : ಜಿಎಮ್(ಪಿಪಿ)/ಡಿಜಿಎಮ್-1ಎಜಿಎಮ್-1ಬಿಸಿ-39/ಎಫ್-3811 ದಿನಾಂಕ : 04-01-2011.
3. ವ್ಯವಸ್ಥಾಪಕ ನಿರ್ದೇಶಕರು ಬೆಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತರವರ ಪ್ರ.ವ್ಯ (ವಿಖ)ಉಪ್ರವ್ಯ1/ಸಪ್ರವ್ಯ 1/ಬಿಸಿ-39/ಎಫ್-2472ಜೆ/4312-16 ದಿನಾಂಕ : 04-02-2011.

ಪ್ರಸ್ತಾವನೆ:

ರಾಷ್ಟ್ರೀಯ ಶಾಖೋತ್ಪನ್ನ ವಿದ್ಯುತ್ ನಿಗಮ ನಿಯಮಿತ (ಎನ್‌ಟಿಪಿಸಿ) ವಿದ್ಯುತ್ ವ್ಯಾಪಾರ ನಿಗಮ ನಿಯಮಿತ (ವಿವಿಎನ್‌ಎಲ್)ದ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ (ಸಿ.ಇ.ಒ) ರವರು ಮೇಲೆ ಓದಲಾದ (1)ರಲ್ಲಿ, ರಾಜ್ಯದಲ್ಲಿ ವಿದ್ಯುತ್ ವಿತರಣಾ ಕಂಪನಿಗಳು, ಸೌರ ವಿದ್ಯುತ್ ಇಂಧನವನ್ನು ಶಾಖೋತ್ಪನ್ನ ವಿದ್ಯುತ್ ಇಂಧನದೊಡನೆ ಸೇರಿಸಿ ಖರೀದಿ ಮಾಡಲು ಅಪೇಕ್ಷೆಯನ್ನು ಕೋರಿರುತ್ತಾರೆ. ಇದಕ್ಕೆ ಮೇಲೆ ಓದಲಾದ (2)ರಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ ರವರು, 100 ಮೆಗಾವ್ಯಾಟ್ ಸಾಮರ್ಥ್ಯದ ವಿದ್ಯುತ್ ಖರೀದಿ ಮಾಡುವ ವಿವರಣ ಪಟ್ಟಿಯನ್ನು Additional General Manager I/C Business Development and Solar NTPC VVNL ರವರಿಗೆ, ರಾಜ್ಯದ ಎಲ್ಲಾ ವಿದ್ಯುತ್ ವಿತರಣಾ ಕಂಪನಿಗಳ ಪರವಾಗಿ ಅಪೇಕ್ಷೆಯನ್ನು, ನಿಗಧಿತ ನಮೂನೆಯಲ್ಲಿ ಸಲ್ಲಿಸಿದ್ದರು ಮೇಲೆ ಓದಲಾದ (3)ರಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತರವರು, ಇಂಧನ ಇಲಾಖೆ ನಿರ್ದೇಶನದಂತೆ ಜವಾಹರಲಾಲ್ ನೆಹರು ನ್ಯಾಶನಲ್ ಸೋಲಾರ್ ಮಿಷನ್ ಕಾರ್ಯಕ್ರಮದಲ್ಲಿ, ಎನ್.ಟಿ.ಪಿ.ಸಿ. ವಿದ್ಯುತ್ ವ್ಯಾಪಾರ ನಿಗಮದ ಮುಖಾಂತರ, ಸೌರ ವಿದ್ಯುತ್ ಸ್ಥಾವರ ಯೋಜನೆಯ ವಿದ್ಯುತ್ ಖರೀದಿ ಒಪ್ಪಂದವನ್ನು ನವದೆಹಲಿಯಲ್ಲಿ ದಿನಾಂಕ : 07-01-2011ರಂದು, ಕರ್ನಾಟಕ ರಾಜ್ಯದ ಎಲ್ಲಾ ವಿದ್ಯುತ್ ವಿತರಣಾ ಕಂಪನಿಗಳ ಪರವಾಗಿ, ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ವತಿಯಿಂದ ಸಹಿ ಮಾಡಲಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಹಾಗೂ ಮುಂದಿನ ದಿನಗಳಲ್ಲಿ ವಿದ್ಯುತ್ ಬಿಲ್ ಪಾವತಿಸುವ ಸಂದರ್ಭದಲ್ಲಿ, ಇತರೆ ಎಲ್ಲಾ ವಿದ್ಯುತ್ ವಿತರಣಾ ಕಂಪನಿಗಳು ಸಹ ಅವರವರ ಶೇಕಡವಾರು ಭಾಗಕ್ಕೆ ವಿದ್ಯುತ್ ಬಿಲ್ ಪಾವತಿಸಬೇಕಾಗಿರುತ್ತದೆ. ಅದರಂತೆ ಎಲ್ಲಾ ವಿದ್ಯುತ್ ವಿತರಣಾ ಕಂಪನಿಗಳ ಪರವಾಗಿ ಸದರಿ ವಿದ್ಯುತ್ ಖರೀದಿ ಒಪ್ಪಂದಕ್ಕೆ ಸಹಿ ಮಾಡುವ ಅಧಿಕಾರವನ್ನು ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಗೆ ನಿಯೋಜಿಸಿರುವ ಬಗ್ಗೆ ಸರ್ಕಾರಿ ಆದೇಶವನ್ನು ಹೊರಡಿಸಲು ಕೋರಿರುತ್ತಾರೆ.

ಅದರಂತೆ ಈ ಕೆಳಗಿನ ಆದೇಶ :-

ಸರ್ಕಾರಿ ಆದೇಶ ಸಂಖ್ಯೆ : ಇಎನ್ 88 ಎನ್‌ಸಿಇ 2011, ಬೆಂಗಳೂರು, ದಿನಾಂಕ: 11-02-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, "ಜವಾಹರಲಾಲ್ ನೆಹರು ನ್ಯಾಶನಲ್ ಸೋಲಾರ್ ಮಿಷನ್" ಕಾರ್ಯಕ್ರಮದಡಿಯಲ್ಲಿ ಎನ್.ಟಿ.ಪಿ.ಸಿ. ವಿದ್ಯುತ್ ವ್ಯಾಪಾರ ನಿಗಮದ ಸೌರ ವಿದ್ಯುತ್ ಖರೀದಿ ಒಪ್ಪಂದಗಳನ್ನು(ಪಿಪಿಎ) ರಜ್ಯದ ಎಲ್ಲಾ ವಿದ್ಯುತ್ ವಿತರಣಾ ಕಂಪನಿಗಳ ಪರವಾಗಿ ಸಹಿ ಮಾಡಿರುವುದಕ್ಕೆ ಬೆಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿಗೆ ಘಟನೋತ್ತರ ಅನುಮತಿ ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಸುರೇಶ್ ಬಿ. ಕೃಷ್ಣಪ್ಪನವರ್

ಸರ್ಕಾರದ ಅಧೀನ ಕಾರ್ಯದರ್ಶಿ

ಇಂಧನ ಇಲಾಖೆ

ಪಿ.ಆರ್. 629

ಇಂಧನ ಸಚಿವಾಲಯ

ವಿಷಯ : ಮೆ॥ ದಾಬೇವಾಡಿ ಹೈಡ್ರೋ ಪವರ್ ಪ್ರೈವೇಟ್ ಲಿಮಿಟೆಡ್ ಇವರಿಗೆ ಯೋಜನೆಯ ಅನುಷ್ಠಾನಕ್ಕೆ ಕಾಲಾವಕಾಶ ವಿಸ್ತರಿಸುವ ಬಗ್ಗೆ.

ಓದಲಾಗಿದೆ :

1. ಸರ್ಕಾರಿ ಆದೇಶ ಸಂಖ್ಯೆ : ಇಂಇ 238 ಎನ್‌ಸಿಇ 2002 ದಿನಾಂಕ : 10-04-2003.
2. ಸರ್ಕಾರಿ ಆದೇಶ ಸಂಖ್ಯೆ : ಇಎನ್ 93 ಎನ್‌ಸಿಇ 2005 ದಿನಾಂಕ : 18-04-2006.
3. ಸರ್ಕಾರಿ ಆದೇಶ ಸಂಖ್ಯೆ : ಇಎನ್ 28 ಎನ್‌ಸಿಇ 2008 ದಿನಾಂಕ : 03-03-2008.
4. ಸರ್ಕಾರಿ ಆದೇಶ ಸಂಖ್ಯೆ : ಇಎನ್ 70 ಎನ್‌ಸಿಇ 2009 ದಿನಾಂಕ : 12-06-2009.
5. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ ಕೆಆರ್‌ಇಡಿ/06/ದಾಬೇವಾಡಿ/09/3575, ದಿನಾಂಕ : 28/29-10-2009 ಮತ್ತು ಕೆಆರ್‌ಇಡಿ/06/ದಾಬೇವಾಡಿ ಕಿ.ಜ.ವಿ./2010/600, ದಿನಾಂಕ : 23-02-2010/03-03-2010.

ಪ್ರಸ್ತಾವನೆ:

ಮೆ॥ ಅಜಿ ಇಂಜಿನಿಯರ್ಸ್ ಕಂಪನಿಗೆ ಉತ್ತರ ಕನ್ನಡ ಜಿಲ್ಲೆಯ ಜೋಯಿಡಾ ತಾಲ್ಲೂಕಿನ ದಾಬೇವಾಡಿ ಗ್ರಾಮದ ಬಳಿ ಪಂಡ್ರಿ ನದಿಗೆ ಅಡ್ಡಲಾಗಿ 2.00 ಮೆಗಾ ವ್ಯಾಟ್ ಸಾಮರ್ಥ್ಯದ ದಾಬೆವಾಡಿ ಕಿರು ಜಲ ವಿದ್ಯುತ್ ಯೋಜನೆಯನ್ನು ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಹಂಚಿಕೆ ಮಾಡಲಾಗಿತ್ತು.

ಸದರಿ ಕಂಪನಿಗೆ ಹಂಚಿಕೆ ಮಾಡಲಾದ ಯೋಜನೆಯ ಸಾಮರ್ಥ್ಯವನ್ನು ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಸರ್ಕಾರಿ ಆದೇಶದಲ್ಲಿ ಸೂಚಿಸಿರುವ ನಿಬಂಧನೆಗೊಳಪಟ್ಟು 12.00 ಮೆಗಾ ವ್ಯಾಟ್‌ಗೆ ಹೆಚ್ಚಿಸಲಾಗಿತ್ತು.

ಮೇಲೆ ತಿಳಿಸಿದ ಯೋಜನೆಯನ್ನು ಅನುಷ್ಠಾನ ಮಾಡಲು ಕಾಲಾವಕಾಶವನ್ನು ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ಸರ್ಕಾರಿ ಆದೇಶ ಹೊರಡಿಸಿದ ದಿನಾಂಕದಿಂದ ಒಂದು ವರ್ಷದ ಅವಧಿಗೆ ವಿಸ್ತರಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (4)ರ ಆದೇಶದಲ್ಲಿ ಮೆ॥ ಆಜಿ ಇಂಜನಿಯರ್ಸ್ ಕಂಪನಿಯ ಹೆಸರನ್ನು ಮೆ॥ ದಾಬೇವಾಡಿ ಹೈಡ್ರೋ ಪವರ್ ಪ್ರೈವೇಟ್ ಲಿಮಿಟೆಡ್ ಎಂದು ಬದಲಾಯಿಸಿ ಯೋಜನೆಯನ್ನು ಅನುಷ್ಠಾನ ಮಾಡಲು ಕಟ್ಟಕಡೆಯದಾಗಿ ದಿನಾಂಕ : 31-03-2010ರವರೆಗೆ ಕಾಲಾವಕಾಶವನ್ನು ವಿಸ್ತರಿಸಲಾಗಿತ್ತು.

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಇವರು ಮೇಲೆ ಓದಲಾದ ಕ್ರಮ ಸಂಖ್ಯೆ (5)ರ ಪತ್ರಗಳಲ್ಲಿ ಮೆ॥ ಆಜಿ ಇಂಜಿನಿಯರ್ಸ್‌ರವರು ತಮ್ಮ ಮನವಿಯಲ್ಲಿ ಅರಣ್ಯ ಜಮೀನು ಸ್ವಾಧೀನಪಡಿಸಿಕೊಳ್ಳಲು ಸಮಯಾವಕಾಶ ಬೇಕಾಗಿದ್ದು, ಯೋಜನೆಯನ್ನು ಪೂರ್ಣಗೊಳಿಸಲು ದಿನಾಂಕ : 31-03-2011ರವರೆಗೆ ಕಾಲಾವಕಾಶ ಕೋರಿರುವುದರಿಂದ, ಸದರಿ ಕಂಪನಿಗೆ ಯೋಜನೆಯನ್ನು ಪೂರ್ಣಗೊಳಿಸಲು ಕಾಲಾವಕಾಶವನ್ನು ದಿನಾಂಕ : 31-03-2011ರವರೆಗೆ ವಿಸ್ತರಿಸಲು ಶಿಫಾರಸ್ಸು ಮಾಡಿರುತ್ತಾರೆ.

ಮೇಲಿನ ಶಿಫಾರಸ್ಸನ್ನು ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಿ, ಈ ಕೆಳಗಿನಂತೆ ಆದೇಶಿಸಲಾಗಿದೆ :-

ಸರ್ಕಾರಿ ಆದೇಶ ಸಂಖ್ಯೆ : ಇಎನ್ 70 ಎನ್‌ಸಿಇ 2009, ಬೆಂಗಳೂರು, ದಿನಾಂಕ: 23-02-2011

ಮೆ॥ ದಾಬೇವಾಡಿ ಹೈಡ್ರೋ ಪವರ್ ಪ್ರೈವೇಟ್ ಲಿಮಿಟೆಡ್ ಇವರಿಗೆ ಉತ್ತರ ಕನ್ನಡ ಜಿಲ್ಲೆಯ ಜೋಯಿಡಾ ತಾಲ್ಲೂಕಿನ ದಾಬೇವಾಡಿ ಗ್ರಾಮದ ಬಳಿ ಪಂಡ್ರಿ ನದಿಗೆ ಅಡ್ಡಲಾಗಿ ಹಂಚಿಕೆಯಾಗಿರುವ 12.00 ಮೆಗಾ ವ್ಯಾಟ್ ಸಾಮರ್ಥ್ಯದ ದಾಬೇವಾಡಿ ಕಿರುಜಲ ವಿದ್ಯುತ್ ಯೋಜನೆಯನ್ನು ಅನುಷ್ಠಾನ ಮಾಡಲು ಈ ಕೆಳಕಂಡ ನಿಬಂಧನೆಗಳಿಗೊಳಪಟ್ಟು ಕೊನೆಯ ಕಾಲಾವಕಾಶವನ್ನು ದಿನಾಂಕ : 31-12-2011ರ ತನಕ ವಿಸ್ತರಿಸಲಾಗಿದೆ.

1. ಅಭಿವೃದ್ಧಿದಾರರು ಮೆಗಾ ವ್ಯಾಟ್ ಒಂದಕ್ಕೆ ರೂ. 1.00 ಲಕ್ಷದಂತೆ ಒಟ್ಟು ರೂ. 15.00 ಲಕ್ಷಗಳನ್ನು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ penalty ಪಾವತಿಸುವುದು.
2. ದಿನಾಂಕ : 31-12-2011ರೊಳಗಾಗಿ ಯೋಜನೆಯನ್ನು commission ಮಾಡದಿದ್ದಲ್ಲಿ, ಸದರಿ ಮೊತ್ತವನ್ನು "ಅಕ್ಷಯ ಶಕ್ತಿ ನಿಧಿ"ಗೆ ವರ್ಗಾಯಿಸುವುದು.

ಈ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಮೇಲೆ ಕ್ರ.ಸಂ.(1)ರಲ್ಲಿ ಓದಲಾದ ಹಂಚಿಕೆ ಆದೇಶದ ಇತರ ನಿಬಂಧನೆಗಳು ಯಥಾವತ್ತಾಗಿ ಮುಂದುವರೆಯುತ್ತವೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಸುರೇಶ್ ಬಿ. ಕೃಷ್ಣಪ್ಪನವರ್

ಸರ್ಕಾರದ ಅಧೀನ ಕಾರ್ಯದರ್ಶಿ

ಇಂಧನ ಇಲಾಖೆ

ಪಿ.ಆರ್. 630

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಶ್ರೀ ಇ. ಈಶ್ವರನಾಯಕ್, ಸರ್ಕಾರದ ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ (ಭೂ ಮಂಜೂರಾತಿ) ಇವರ ವಿರುದ್ಧ ಇಲಾಖಾ ವಿಚಾರಣೆ – ದಂಡನೆಯನ್ನು ವಿಧಿಸುವ ಬಗ್ಗೆ

ಓದಲಾಗಿದೆ :
1. ನೋಟೀಸ್ ಸಂಖ್ಯೆ ಸಿಆಸುಇ 3 ಎಸ್ ಇ ಎನ್ 2010 ದಿನಾಂಕ: 26-03-2010.
2. ನೋಟೀಸ್ ಸಂಖ್ಯೆ ಸಿಆಸುಇ 3 ಎಸ್ ಇ ಎನ್ 2010 ದಿನಾಂಕ: 06-07-2010.

ಪ್ರಸ್ತಾವನೆ:

ಶ್ರೀ ಇ. ಈಶ್ವರನಾಯಕ್, ಸರ್ಕಾರದ ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ (ಭೂ ಮಂಜೂರಾತಿ) ಇವರು ನಿಯಮಾನುಸಾರ ಸರ್ಕಾರಕ್ಕೆ ನಿಗದಿತವಾಗಿ ಅಂದರೆ 1991ನೇ ಸಾಲಿನಿಂದ 2007-08ರವರೆಗಿನ ಸಾಲುಗಳ ಆಸ್ತಿ ಮತ್ತು ಋಣ ಪಟ್ಟಿ ಸಲ್ಲಿಸದಿರುವ ಆರೋಪಗಳಿಗೆ ಸಂಬಂಧಿಸಿದಂತೆ, ಸದರಿಯವರಿಗೆ ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ನೋಟೀಸ್‌ನೊಂದಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 12 ರನ್ವಯ ದೋಷಾರೋಪಣಾ ಪಟ್ಟಿ ಜಾರಿಗೊಳಿಸಿ ವಿವರಣೆ ಕೋರಲಾಗಿತ್ತು. ದಿನಾಂಕ 26-03-2010ರ ನೋಟೀಸಿಗೆ ಅಧಿಕಾರಿಯು ಯಾವುದೇ ವಿವರಣೆ ನೀಡಿಲ್ಲವಾದ್ದರಿಂದ ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಮತ್ತೊಂದು ಜ್ಞಾಪನ ನೋಟೀಸ್‌ನ್ನು ಕೂಡಾ ಜಾರಿ ಮಾಡಿ ವಿವರಣೆ ಕೋರಲಾಗಿತ್ತು. ಜ್ಞಾಪನ ನೋಟೀಸಿಗೂ ಸಹಾ ಅಧಿಕಾರಿಯವರು ಯಾವುದೇ ಹೇಳಿಕೆ ಸಲ್ಲಿಸಿರುವುದಿಲ್ಲ.

ಶ್ರೀ ಇ. ಈಶ್ವರನಾಯಕ್, ಸರ್ಕಾರದ ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ (ಭೂ ಮಂಜೂರಾತಿ) ಇವರು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿಗಳನುಸಾರ ಆಯಾ ಸಾಲಿನಲ್ಲಿ ಆಸ್ತಿ ಮತ್ತು ಋಣ ಪಟ್ಟಿಗಳನ್ನು ಸಲ್ಲಿಸಿರುವುದಿಲ್ಲ. ಅಧಿಕಾರಿಗೆ ಆಸ್ತಿ ಮತ್ತು ಋಣ ಪಟ್ಟಿ ಸಲ್ಲಿಸುವಂತೆ ಹಲವಾರು ಬಾರಿ ಸೂಚನೆ/ನೋಟೀಸ್ ನೀಡಿ ಸೂಚಿಸಿದ್ದರೂ ಸಹಾ ಅಧಿಕಾರಿಯವರು 1991 ರಿಂದ 2007-08ನೇ ಸಾಲುಗಳ ಆಸ್ತಿ ಮತ್ತು ಋಣಪಟ್ಟಿ ಸಲ್ಲಿಸಿರುವುದಿಲ್ಲ ಹಾಗೂ ಯಾವುದೇ ವಿವರಣೆಯನ್ನು ನೀಡಿರುವುದಿಲ್ಲ. ಆದ್ದರಿಂದ ಅಧಿಕಾರಿಯ ವಿರುದ್ಧ ಹೊರಿಸಲಾದ ನಿಗದಿತವಾಗಿ ಆಸ್ತಿ ಮತ್ತು ಋಣ ಪಟ್ಟಿ ಸಲ್ಲಿಸದಿರುವ ಆರೋಪವು ನಿಸ್ಸಂಶಯವಾಗಿ ಸಾಬೀತಾಗಿರುತ್ತದೆ. ಇದರಿಂದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 3 ಸೇಇವಿ 2010, ಬೆಂಗಳೂರು, ದಿನಾಂಕ: 11-02-2011

ಶ್ರೀ ಇ. ಈಶ್ವರನಾಯಕ್, ಸರ್ಕಾರದ ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ (ಭೂ ಮಂಜೂರಾತಿ) ಇವರಿಗೆ ಮೇಲ್ಕಂಡಂತೆ ಸಾಬೀತಾದ ಆರೋಪಗಳಿಗಾಗಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 8(iv a)ರ ಅನ್ವಯ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ದಿನಾಂಕ 31-07-2011ರ ವರೆಗೆ ಜಾರಿಯಲ್ಲಿರುವಂತೆ ಇವರ ವೇತನವನ್ನು ಕಾಲಿಕ ವೇತನ ಶ್ರೇಣಿಯಲ್ಲಿ ಒಂದು ಹಂತ ಕೆಳಗೆ ಇಳಿಸಿ ಆದೇಶಿಸಿದೆ ನಂತರ ಅಧಿಕಾರಿಯು ನಿವೃತ್ತಿ ಹೊಂದುವ ತಿಂಗಳಲ್ಲಿ ಅವರ ವೇತನವನ್ನು ಅವರು ದಂಡನೆಗೆ ಮುಂಚೆ ಪಡೆಯುತ್ತಿದ್ದ ವೇತನಕ್ಕೆ ನಿಗದಿಪಡಿಸತಕ್ಕದ್ದು. ದಂಡನೆಯ ಅವಧಿಯಲ್ಲಿ ಅವರ ವೇತನವು ಸ್ಥಿರವಾಗಿರುತ್ತದೆ. ದಂಡನಾವಧಿಯಲ್ಲಿ ಅಧಿಕಾರಿಯು ವೇತನ ಬಡ್ತಿಯನ್ನು ಪಡೆಯಲು ಅರ್ಹರಾಗಿರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎ.ಆರ್. ವಿಜಯಾನಂದ ಶರ್ಮ

ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ

(ಸೇವೆಗಳು-3)

ಪಿ.ಆರ್. 483

ಉನ್ನತ ಶಿಕ್ಷಣ ಸಚಿವಾಲಯ

ವಿಷಯ : ಶಿಕ್ಷಣ ಮಹಾವಿದ್ಯಾಲಯಗಳಿಗೆ ಮತೀಯ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಯ ಸ್ಥಾನಮಾನ ನೀಡುವಂತೆ ಘೋಷಿಸುವ ಬಗ್ಗೆ.

ಓದಲಾಗಿದೆ :
1. ನಿರ್ದೇಶಕರು, ಡಿ.ಎಸ್.ಇ.ಆರ್.ಟಿ., ಇವರ ಪತ್ರಗಳ ಸಂಖ್ಯೆ: ಶಿತ3/ಭಾಷಾ ಅಲ್ಪಸಂಖ್ಯಾತ/01/10-11, ದಿ: 23-7-2010 ಮತ್ತು ಶಿತ3/ಭಾಷಾ ಅಲ್ಪಸಂಖ್ಯಾತ/04/10-11, ದಿ: 27-11-2010.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಇವರ ಅಧ್ಯಕ್ಷತೆಯಲ್ಲಿ ದಿ: 25-1-2011 ರಂದು ನಡೆದ ಸಭೆಯ ನಡವಳಿ.
3. ಸಮ ಸಂಖ್ಯೆಯ ಸರ್ಕಾರದ ಪತ್ರ ದಿ: 3-2-2011.

ಪ್ರಸ್ತಾವನೆ:

ಮೇಲೆ ಓದಲಾದ (1)ರ ಪತ್ರದಲ್ಲಿ ನಿರ್ದೇಶಕರು (ಸಂ ಮತ್ತು ತ), ಡಿ.ಎಸ್.ಇ.ಆರ್.ಟಿ., ಇವರು ಬಿಲಾಲ್ ಬಿ.ಇಡಿ. ಕಾಲೇಜು, ಬೀದರ್, ಈ ಸಂಸ್ಥೆಗೆ ಮತೀಯ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಯ ಸ್ಥಾನಮಾನ ನೀಡುವ ಬಗ್ಗೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ಸದರಿ ಪ್ರಸ್ತಾವನೆಯನ್ನು ಮೇಲೆ ಓದಲಾದ (2)ರ ದಿ: 25-1-2011 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಪರಿಶೀಲಿಸಲಾಯಿತು ಹಾಗೂ ಸದರಿ ಶಿಕ್ಷಣ ಮಹಾವಿದ್ಯಾಲಯಕ್ಕೆ ಮತೀಯ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಯ ಸ್ಥಾನಮಾನ ನೀಡಲು ತೀರ್ಮಾನಿಸಲಾಯಿತು. ಅದರಂತೆ ಈ ಆದೇಶ.

ಸರ್ಕಾರಿ ಆದೇಶ ಸಂಖ್ಯೆ: ಇಡಿ 245 ಯುಆರ್‌ಸಿ 2010 (2), ಬೆಂಗಳೂರು ದಿನಾಂಕ: 9-2-2011

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳ ಹಿನ್ನೆಲೆಯಲ್ಲಿ ಬಿಲಾಲ್ ಬಿ.ಇಡಿ. ಕಾಲೇಜು, ಬೀದರ್, ಈ ಸಂಸ್ಥೆಗೆ ಮತೀಯ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಯ ಸ್ಥಾನಮಾನವನ್ನು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ನೀಡಲಾಗಿದೆ.

ಷರತ್ತುಗಳು:

1. ಕಾಲೇಜಿಗೆ ನೀಡಲಾಗಿರುವ ಮತೀಯ ಅಲ್ಪಸಂಖ್ಯಾತ ಸ್ಥಾನಮಾನದಂತೆ ಮಂಜೂರಾದ ವಿದ್ಯಾರ್ಥಿ ಪ್ರಮಾಣಕ್ಕೆ ಶೇ. 75 ರಷ್ಟು ಸೀಟುಗಳಲ್ಲಿ ಶೇ. 50 ರಷ್ಟು ಸೀಟುಗಳನ್ನು ಸದರಿ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಂದ ಹಾಗೂ ಉಳಿದ ಶೇ. 50 ರಷ್ಟು ಸೀಟುಗಳನ್ನು ಭಾಷಾ ಅಥವಾ ಇತರೆ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಂದ ಭರ್ತಿ ಮಾಡತಕ್ಕದ್ದು. ಯಾವುದೇ ಸೀಟುಗಳು ಭರ್ತಿಯಾಗದೇ ಉಳಿದಲ್ಲಿ ಪ್ರವೇಶ ಪರೀಕ್ಷೆ ಮುಕ್ತಾಯವಾಗುವ ಮುನ್ನಾ ಕೇಂದ್ರೀಕೃತ ದಾಖಲಾತಿ ಘಟಕಕ್ಕೆ ಸರಂಡರ್ ಮಾಡತಕ್ಕದ್ದು.
2. ಕಾಲೇಜಿನ ಆಡಳಿತ ಮಂಡಳಿಯು ಮೀಸಲಿರಿಸಿದ ಸೀಟುಗಳಿಗೆ ಮತೀಯ ಅಲ್ಪಸಂಖ್ಯಾತ ವಿದ್ಯಾರ್ಥಿಗಳನ್ನು ದಾಖಲಿಸಿಕೊಂಡಿರುವ ಬಗ್ಗೆ ಮಾಹಿತಿಯನ್ನು ಡಿ.ಎಸ್.ಇ.ಆರ್.ಟಿ. ಗೆ ನೀಡತಕ್ಕದ್ದು.
3. ಕಳೆದ ಮೂರು ವರ್ಷಗಳಲ್ಲಿ ವಿದ್ಯಾರ್ಥಿಗಳ ಪ್ರವೇಶಾತಿಯಲ್ಲಿ 2008-09ನೇ ಸಾಲಿನಲ್ಲಿ 40% ಮಾತ್ರ ಇದ್ದುದರಿಂದ ಇನ್ನು ಮುಂದಿನ ಸಾಲುಗಳಲ್ಲಿ 50% ಕ್ಕಿಂತ ಕಡಿಮೆಯಿಲ್ಲದಂತೆ ಹೊಂದುವುದು.
4. ಮೇಲೆ ತಿಳಿಸಿರುವ ಷರತ್ತುಗಳನ್ನು ಕಾಲೇಜಿನ ಆಡಳಿತ ಮಂಡಳಿಯು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು ಮತ್ತು ಯಾವುದೇ ರೀತಿಯ ಉಲ್ಲಂಘನೆಯನ್ನು ಮಾಡಿದಲ್ಲಿ ಮಂಜೂರು ಮಾಡಲಾದ ಮತೀಯ ಅಲ್ಪಸಂಖ್ಯಾತ ಸ್ಥಾನಮಾನವನ್ನು ಹಿಂಪಡೆಯಲಾಗುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಬಿ.ಎಸ್. ಜಾಪಾಲಿ
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ)

ಪಿ.ಆರ್. 484

ಜಲ ಸಂಪನ್ಮೂಲ ಸಚಿವಾಲಯ

ತಿದ್ದುಪಡಿ

ಸಂಖ್ಯೆ: ಸನೀಇ 24 ಡಬ್ಲ್ಯೂಟಿಎನ್ 1988, ಬೆಂಗಳೂರು ದಿನಾಂಕ: 08-02-2011

ಸರ್ಕಾರದ ಆದೇಶ ಸಂಖ್ಯೆ: ಸನೀಇ 24 ಡಬ್ಲ್ಯೂಟಿಎನ್ 1998, ದಿನಾಂಕ 24-01-2011ರ ವಿಳಾಸ ಭಾಗದಲ್ಲಿ ಕ್ರಸಂ. 4ರ ನಂತರ ಕೆಳಕಂಡಂತೆ ಸೇರಿಸಿ ಓದಿಕೊಳ್ಳತಕ್ಕದ್ದು.

4(ಎ) ನಿರ್ದೇಶಕರು, ಖಜಾನೆ ಇಲಾಖೆ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಬೆಂಗಳೂರು.

4(ಬಿ) ನಿರ್ದೇಶಕರು, ಖಜಾನೆ ಗಣಕ ಜಾಲ ನಿರ್ವಹಣೆ ಕೇಂದ್ರ, ಖನಿಜ ಭವನ, ಬೆಂಗಳೂರು.

4(ಸಿ) ಜಿಲ್ಲಾ ಖಜಾನಾಧಿಕಾರಿಗಳು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಗೋಪಾಲ್
ಸರ್ಕಾರದ ಅಧೀನ ಕಾರ್ಯದರ್ಶಿ,
ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಪಿ.ಆರ್. 485

ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವಾಲಯ

ವಿಷಯ : ಕೇಂದ್ರ ಪುರಸ್ಕೃತ ಮಾದರಿ ಸಮೀಕ್ಷೆ ಯೋಜನೆಯಡಿ ಹೊಸದಾಗಿ ಸೃಜಿಸಲಾಗಿರುವ 64 ಹುದ್ದೆಗಳ ಕಾರ್ಯನಿರ್ವಹಣಾ ಕಛೇರಿ ಹಾಗೂ ಕಾರ್ಯವ್ಯಾಪ್ತಿಗೆ ಬರುವ ಜಿಲ್ಲೆಗಳ ಹಂಚಿಕೆ.

ಓದಲಾಗಿದೆ : (1) ಸರ್ಕಾರದ ಆದೇಶ ಸಂಖ್ಯೆ: ಪಸಂಮೀ 91 ಪಪಾಯೋ 2008. ದಿನಾಂಕ: 23-8-2010.

(2) ಪತ್ರ ಸಂಖ್ಯೆ: ಪಪಾಇ/ಅಂಅಂ/ಸಿಬ್ಬಂದಿ/ವಿವ-40/2010-11, ದಿನಾಂಕ: 09-11-2010.

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ಆದೇಶದಲ್ಲಿ ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯಲ್ಲಿನ ಸಾಂಖ್ಯಿಕ ಶಾಖೆಗೆ ಯೋಜನಾ ಶೀರ್ಷಿಕೆಯಡಿ ಮಂಜೂರಾಗಿದ್ದ 69 ಹುದ್ದೆಗಳನ್ನು ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ 64 ಹುದ್ದೆಗಳನ್ನು ಸೃಜಿಸಲಾಗಿದೆ. ಸದರಿ ಆದೇಶದಲ್ಲಿ ಭಾರತ ಸರ್ಕಾರದ ಮಾರ್ಗಸೂಚಿಯನ್ವಯ ಜಂಟಿ ನಿರ್ದೇಶಕರು (ಅಂಕಿ ಅಂಶ) ಹುದ್ದೆಯನ್ನು ಯೋಜನೇತರ ಅಡಿಯಿಂದ ಯೋಜನೆಯಡಿಗೆ ವರ್ಗಾಯಿಸಿರುವುದರಿಂದ, ಜಂಟಿ ನಿರ್ದೇಶಕರು (ಅಂಕಿ ಅಂಶ) ಇವರಿಗೆ ಹಾಲಿ ಇರುವ ಅಧಿಕಾರ ಮುಂದುವರೆಸಲು ಹಾಗೂ ಯೋಜನೆಯಡಿ ಮಂಜೂರಾದ ಇತರೆ ಹುದ್ದೆಗಳಾದ 02 ಉಪ ನಿರ್ದೇಶಕರು (ಅಂಕಿ ಅಂಶ) ಹುದ್ದೆ, 08 ಸಹಾಯಕ ನಿರ್ದೇಶಕರು (ಸಾಂಖ್ಯಿಕ) ಹುದ್ದೆ, 15 ಸಹಾಯಕ ಸಾಂಖ್ಯಿಕ ಅಧಿಕಾರಿ ಹುದ್ದೆ, 02 ಸಾಂಖ್ಯಿಕ ನಿರೀಕ್ಷಕರ ಹುದ್ದೆ ಮತ್ತು 36 ಪಶುವೈದ್ಯಕೀಯ ಪರೀಕ್ಷಕರ ಹುದ್ದೆಗಳನ್ನು ಮತ್ತು ಮಾದರಿ ಸಮೀಕ್ಷೆ ಯೋಜನೆಯಡಿ ಈಗಾಗಲೇ 4 ವಿಭಾಗ ಮಟ್ಟದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪಶುವೈದ್ಯಾಧಿಕಾರಿಗಳ ಹುದ್ದೆಗಳು ಯೋಜನೇತರಡಿಯಲ್ಲಿಯೇ ಮುಂದುವರೆಯುವುದರಿಂದ ಅವರುಗಳಿಗೆ ಹಾಲಿ ಇರುವ ಅಧಿಕಾರ ಮುಂದುವರೆಸಲು ಹಾಗೂ ಸದರಿ ಇತರೆ ಎಲ್ಲಾ ಹುದ್ದೆಗಳ ಕಾರ್ಯನಿರ್ವಹಣಾ ಕಚೇರಿ ಹಾಗೂ ಕಾರ್ಯವ್ಯಾಪ್ತಿಗೆ ಬರುವ ಜಿಲ್ಲೆಗಳಿಗೆ ಹಂಚಿಕೆಯನ್ನು ಮೇಲೆ (2)ರಲ್ಲಿ ಓದಲಾದ ಪತ್ರದೊಂದಿಗೆ ಲಗತ್ತಿಸಿರುವ ಅನುಬಂಧ-1ರಲ್ಲಿ ವಿವರಿಸಿರುವಂತೆ ಆದೇಶ ಹೊರಡಿಸಬೇಕೆಂದು ಆಯುಕ್ತರು, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆರವರು ಕೋರಿರುತ್ತಾರೆ.

ಸರ್ಕಾರಿ ಆದೇಶ ಸಂಖ್ಯೆ: ಪಸಂಮೀ 56 ಪಪಾಯೋ 2010, ಬೆಂಗಳೂರು, ದಿನಾಂಕ: 08-2-2011

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರ, ಆದೇಶ ಸಂಖ್ಯೆ:ಪಸಂಮೀ 91 ಪಪಾಯೋ 2008, ದಿನಾಂಕ: 23-08-2010ರ ಅನ್ವಯ ಕೇಂದ್ರ ಪುರಸ್ಕೃತ ಮಾದರಿ ಸಮೀಕ್ಷೆ ಯೋಜನೆಯನ್ನು ರಾಜ್ಯದ ವಿವಿಧ ಜಿಲ್ಲೆಗಳಿಗೆ ವಿಸ್ತರಿಸುವ ಸಲುವಾಗಿ ಕೇಂದ್ರ ಪುರಸ್ಕೃತ ಮಾದರಿ ಸಮೀಕ್ಷೆ ಯೋಜನೆಯಡಿ ಹೊಸದಾಗಿ ಸೃಜಿಸಲಾಗಿರುವ 64 ಹುದ್ದೆಗಳನ್ನು ಯೋಜನೆಯಡಿಯಲ್ಲಿ ಹಾಗೂ 4 ವಿಭಾಗ ಮಟ್ಟಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪಶುವೈದ್ಯಾಧಿಕಾರಿಗಳ ಹುದ್ದೆಗಳನ್ನು ಯೋಜನೇತರಡಿ ಮುಂದುವರೆಸಿ, ಈ ಆದೇಶದೊಂದಿಗೆ ಲಗತ್ತಿಸಿರುವ ಅನುಬಂಧ-1ರಲ್ಲಿ ವಿವರಿಸಿರುವಂತೆ ಕಾರ್ಯನಿರ್ವಹಣಾ ಕಛೇರಿ ಹಾಗೂ ಕಾರ್ಯವ್ಯಾಪ್ತಿಗೆ ಬರುವ ಜಿಲ್ಲೆಗಳಿಗೆ ಮರುಹಂಚಿಕೆ ಮಾಡಿ ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಬಿ.ಕೆ. ಶ್ರೀನಿವಾಸಮೂರ್ತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಪಶುಸಂಗೋಪನೆ)

ಅನುಬಂಧ-I

ಸರ್ಕಾರಿ ಆದೇಶ ಸಂಖ್ಯೆ: ಪಸಂಮೀ 91 ಪಪಾಯೋ 2008, ಬೆಂಗಳೂರು, ದಿನಾಂಕ: 23-08-2010 ರನ್ವಯ ಕೇಂದ್ರ ಪುರಸ್ಕೃತ ಮಾದರಿ ಸಮೀಕ್ಷೆ ಯೋಜನೆಯನ್ನು ರಾಜ್ಯದ ವಿವಿಧ ಜಿಲ್ಲೆಗಳಿಗೆ ವಿಸ್ತರಿಸುವ ಸಲುವಾಗಿ ಯೋಜನಾ ಲೆಕ್ಕಶೀರ್ಷಿಕೆ 2403-00-113-0-02 ಹೊಸದಾಗಿ ಸೃಜಿಸಲಾಗಿರುವ 64 ಹುದ್ದೆಗಳ ಕಾರ್ಯನಿರ್ವಹಣಾ ಕಛೇರಿ ಹಾಗೂ ಕಾರ್ಯವ್ಯಾಪ್ತಿಯ ಜಿಲ್ಲೆಗಳನ್ನು ಈ ಕೆಳಕಂಡಂತೆ ವಿವರಿಸಲಾಗಿದೆ.

ಕ್ರ.ಸಂ.	ಹುದ್ದೆಯ ಪದನಾಮ	ಹುದ್ದೆಗಳ ಸಂಖ್ಯೆ	ಕಾರ್ಯನಿರ್ವಹಣಾ ವ್ಯಾಪ್ತಿ	ಕೆಲಸ ನಿರ್ವಹಿಸಬೇಕಾದ ಕಛೇರಿ
I ಜಂಟಿ ನಿರ್ದೇಶಕರು (ಅಂಕಿಅಂಶ) ಕಛೇರಿ, ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ಬೆಂಗಳೂರು:				
1	ಜಂಟಿ ನಿರ್ದೇಶಕರು (ಅಂಕಿಅಂಶ) (ಈ ಹುದ್ದೆಯನ್ನು ಭಾರತ ಸರ್ಕಾರದ ಮಾರ್ಗಸೂಚಿಯನ್ವಯ ಯೋಜನೇತರಡಿಯಿಂದ ಯೋಜನೆಯಡಿಗೆ ವರ್ಗಾಯಿಸಲಾಗಿದೆ).	01	ಜಂಟಿ ನಿರ್ದೇಶಕರು (ಅಂಕಿಅಂಶ) ರವರ ಕಛೇರಿ, ಪಶುಪಾಲನ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, ಬೆಂಗಳೂರು. ಜಂಟಿ ನಿರ್ದೇಶಕರು (ಅಂಕಿಅಂಶ), ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, ಬೆಂಗಳೂರು ರವರಿಗೆ ಹಾಲಿ ಇರುವ ಅಧಿಕಾರ ಮುಂದುವರೆಯುತ್ತದೆ.	
2	ಉಪ ನಿರ್ದೇಶಕರು (ಅಂಕಿಅಂಶ)	02	ಜಂಟಿ ನಿರ್ದೇಶಕರು (ಅಂಕಿಅಂಶ) ರವರ ಅಧೀನದಲ್ಲಿ ಕಾರ್ಯನಿರ್ವಹಿಸುವುದು	ಜಂಟಿ ನಿರ್ದೇಶಕರು (ಅಂಕಿಅಂಶ) ಕಛೇರಿ, ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, ಬೆಂಗಳೂರು.
3	ಸಾಂಖ್ಯಿಕ ನಿರೀಕ್ಷಕರು	02	ಜಂಟಿ ನಿರ್ದೇಶಕರು (ಅಂಕಿಅಂಶ) ರವರ ಅಧೀನದಲ್ಲಿ ಕಾರ್ಯನಿರ್ವಹಿಸುವುದು	ಜಂಟಿ ನಿರ್ದೇಶಕರು (ಅಂಕಿಅಂಶ) ಕಛೇರಿ, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ಬೆಂಗಳೂರು.

4	ಪಶುವೈದ್ಯಕೀಯ ಪರೀಕ್ಷಕರು	02	ಜಂಟಿ ನಿರ್ದೇಶಕರು (ಅಂಕಿಅಂಶ) ರವರ ಅಧೀನದಲ್ಲಿ ಕಾರ್ಯನಿರ್ವಹಿಸುವುದು	ಜಂಟಿ ನಿರ್ದೇಶಕರು (ಅಂಕಿಅಂಶ) ಕಛೇರಿ, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ಬೆಂಗಳೂರು.

ಕ್ರ.ಸಂ.	ಹುದ್ದೆಯ ಪದನಾಮ	ಹುದ್ದೆಗಳ ಸಂಖ್ಯೆ	ಕಾರ್ಯನಿರ್ವಹಣಾ ವ್ಯಾಪ್ತಿಗೆ ಬರುವ ಜಿಲ್ಲೆಗಳು	ಕೆಲಸ ನಿರ್ವಹಿಸಬೇಕಾದ ಕಛೇರಿ
II ಬೆಂಗಳೂರು ವಿಭಾಗ:				
1	ಪಶುವೈದ್ಯಾಧಿಕಾರಿ (ಯೋಜನೇತರ ಹುದ್ದೆ)	01	ಪಶುವೈದ್ಯಾಧಿಕಾರಿಗಳ ಕಛೇರಿ, ಮಾದರಿ ಸಮೀಕ್ಷೆ ಯೋಜನೆ, ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, ಬೆಂಗಳೂರು ವಿಭಾಗ, ಬೆಂಗಳೂರು. ಪಶುವೈದ್ಯಾಧಿಕಾರಿ, ಮಾದರಿ ಸಮೀಕ್ಷೆ ಯೋಜನೆ, ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, ಬೆಂಗಳೂರು ವಿಭಾಗ, ಬೆಂಗಳೂರು ರವರಿಗೆ ಹಾಲಿ ಇರುವ ಅಧಿಕಾರ ಮುಂದುವರೆಯುತ್ತದೆ.	
2	ಸಹಾಯಕ ನಿರ್ದೇಶಕರು (ಸಾಂಖ್ಯಿಕ)	01	ಬೆಂಗಳೂರು ನಗರ, ಬೆಂಗಳೂರು (ಗ್ರಾ), ರಾಮನಗರ, ಕೋಲಾರ, ಚಿಕ್ಕಬಳ್ಳಾಪುರ	ಉಪ ನಿರ್ದೇಶಕರ ಕಛೇರಿ, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೆಬ್ಬಾಳ, ಬೆಂಗಳೂರು
		01	ತುಮಕೂರು, ಚಿತ್ರದುರ್ಗ, ಶಿವಮೊಗ್ಗ, ದಾವಣಗೆರೆ	ಉಪ ನಿರ್ದೇಶಕರ ಕಛೇರಿ, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ಚಿತ್ರದುರ್ಗ
3	ಸಹಾಯಕ ಸಾಂಖ್ಯಿಕ ಅಧಿಕಾರಿ	01	ಬೆಂಗಳೂರು ನಗರ, ಬೆಂಗಳೂರು (ಗ್ರಾ), ರಾಮಗನಗರ	ಪಶುವೈದ್ಯಾಧಿಕಾರಿಗಳ ಕಛೇರಿ, ಮಾದರಿ ಸಮೀಕ್ಷೆ ಯೋಜನೆ, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ಬೆಂಗಳೂರು.
		01	ಕೋಲಾರ, ಚಿಕ್ಕಬಳ್ಳಾಪುರ	ಉಪನಿರ್ದೇಶಕರ ಕಛೇರಿ, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ಕೋಲಾರ.
		01	ತುಮಕೂರು, ಚಿತ್ರದುರ್ಗ.	ಉಪ ನಿರ್ದೇಶಕರ ಕಛೇರಿ, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ತುಮಕೂರು.
		01	ಶಿವಮೊಗ್ಗ, ದಾವಣಗೆರೆ.	ಉಪ ನಿರ್ದೇಶಕರ ಕಛೇರಿ, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ಶಿವಮೊಗ್ಗ.
4	ಪಶುವೈದ್ಯಕೀಯ ಪರೀಕ್ಷಕರು	01	ಬೆಂಗಳೂರು	ಪಶುವೈದ್ಯಾಧಿಕಾರಿಗಳ ಕಛೇರಿ, ಮಾದರಿ ಸಮೀಕ್ಷೆ ಯೋಜನೆ, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ಬೆಂಗಳೂರು.
		01	ಬೆಂಗಳೂರು ನಗರ	ಉಪ ನಿರ್ದೇಶಕರ ಕಛೇರಿ, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ಬೆಂಗಳೂರು ನಗರ ಜಿಲ್ಲೆ, ಹೆಬ್ಬಾಳ, ಬೆಂಗಳೂರು.
		01	ಬೆಂಗಳೂರು ಗ್ರಾಮಾಂತರ	ಉಪ ನಿರ್ದೇಶಕರ ಕಛೇರಿ, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೆಬ್ಬಾಳ, ಬೆಂಗಳೂರು.
		01	ರಾಮನಗರ	ಉಪ ನಿರ್ದೇಶಕರ ಕಛೇರಿ, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ರಾಮನಗರ.
		01	ಕೋಲಾರ	ಉಪ ನಿರ್ದೇಶಕರ ಕಛೇರಿ, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ಕೋಲಾರ.

		01	ಚಿಕ್ಕಬಳ್ಳಾಪುರ	ಉಪ ನಿರ್ದೇಶಕರ ಕಛೇರಿ, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ಚಿಕ್ಕಬಳ್ಳಾಪುರ.
		01	ತುಮಕೂರು	ಉಪ ನಿರ್ದೇಶಕರ ಕಛೇರಿ, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ತುಮಕೂರು.
		01	ಚಿತ್ರದುರ್ಗ	ಉಪ ನಿರ್ದೇಶಕರ ಕಛೇರಿ, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ಚಿತ್ರದುರ್ಗ.
		01	ಶಿವಮೊಗ್ಗ	ಉಪ ನಿರ್ದೇಶಕರ ಕಛೇರಿ, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ಶಿವಮೊಗ್ಗ.
		01	ದಾವಣಗೆರೆ	ಉಪ ನಿರ್ದೇಶಕರ ಕಛೇರಿ, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ದಾವಣಗೆರೆ.

ಕ್ರ.ಸಂ.	ಹುದ್ದೆಯ ಪದನಾಮ	ಹುದ್ದೆಗಳ ಸಂಖ್ಯೆ	ಕಾರ್ಯನಿರ್ವಹಣಾ ವ್ಯಾಪ್ತಿಗೆ ಬರುವ ಜಿಲ್ಲೆಗಳು	ಕೆಲಸ ನಿರ್ವಹಿಸಬೇಕಾದ ಕಛೇರಿ ಹಾಗೂ ಕೇಂದ್ರ ಸ್ಥಾನ
III ಮೈಸೂರು ವಿಭಾಗ:				
1	ಪಶುವೈದ್ಯಾಧಿಕಾರಿ (ಯೋಜನೇತರ ಹುದ್ದೆ)	01	ಪಶುವೈದ್ಯಾಧಿಕಾರಿಗಳ ಕಛೇರಿ, ಮಾದರಿ ಸಮೀಕ್ಷೆ ಯೋಜನೆ, ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, ಮೈಸೂರು ವಿಭಾಗ, ಮೈಸೂರು. ಪಶುವೈದ್ಯಾಧಿಕಾರಿ, ಮಾದರಿ ಸಮೀಕ್ಷೆ ಯೋಜನೆ, ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, ಮೈಸೂರು ವಿಭಾಗ, ಮೈಸೂರು ರವರಿಗೆ ಹಾಲಿ ಇರುವ ಅಧಿಕಾರ ಮುಂದುವರೆಯುತ್ತದೆ.	
2	ಸಹಾಯಕ ನಿರ್ದೇಶಕರು (ಸಾಂಖ್ಯಿಕ)	01	ಮೈಸೂರು, ಕೊಡಗು, ಮಂಡ್ಯ, ಚಾಮರಾಜನಗರ	ಉಪ ನಿರ್ದೇಶಕರ ಕಛೇರಿ, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ಮಂಡ್ಯ
		01	ಚಿಕ್ಕಮಗಳೂರು, ಹಾಸನ, ಮಂಗಳೂರು, ಉಡುಪಿ.	ಉಪ ನಿರ್ದೇಶಕರ ಕಛೇರಿ, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ಹಾಸನ.
3	ಸಹಾಯಕ ಸಾಂಖ್ಯಿಕ ಅಧಿಕಾರಿ	01	ಮೈಸೂರು, ಕೊಡಗು,	ಪಶುವೈದ್ಯಾಧಿಕಾರಿಗಳ ಕಛೇರಿ, ಮಾದರಿ ಸಮೀಕ್ಷೆ ಯೋಜನೆ, ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, ಮೈಸೂರು.
		01	ಮಂಡ್ಯ, ಚಾಮರಾಜನಗರ.	ಉಪ ನಿರ್ದೇಶಕರ ಕಛೇರಿ, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ಚಾಮರಾಜನಗರ.
		01	ಚಿಕ್ಕಮಗಳೂರು, ಹಾಸನ.	ಉಪ ನಿರ್ದೇಶಕರ ಕಛೇರಿ, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ಚಿಕ್ಕಮಗಳೂರು.
		01	ಮಂಗಳೂರು, ಉಡುಪಿ	ಉಪ ನಿರ್ದೇಶಕರ ಕಛೇರಿ, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ಮಂಗಳೂರು.
4	ಪಶುವೈದ್ಯಕೀಯ ಪರೀಕ್ಷಕರು	01	ಮೈಸೂರು	ಪಶುವೈದ್ಯಾಧಿಕಾರಿಗಳ ಕಛೇರಿ, ಮಾದರಿ ಸಮೀಕ್ಷೆ ಯೋಜನೆ, ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, ಮೈಸೂರು.

		01	ಮೈಸೂರು	ಉಪ ನಿರ್ದೇಶಕರ ಕಛೇರಿ, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ಮೈಸೂರು.
		01	ಕೊಡಗು	ಉಪ ನಿರ್ದೇಶಕರ ಕಛೇರಿ, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ಕೊಡಗು.
		01	ಮಂಡ್ಯ	ಉಪ ನಿರ್ದೇಶಕರ ಕಛೇರಿ, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ಮಂಡ್ಯ.
		01	ಚಾಮರಾಜನಗರ	ಉಪ ನಿರ್ದೇಶಕರ ಕಛೇರಿ, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ಚಾಮರಾಜನಗರ.
		01	ಚಿಕ್ಕಮಗಳೂರು	ಉಪ ನಿರ್ದೇಶಕರ ಕಛೇರಿ, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ಚಿಕ್ಕಮಗಳೂರು.
		01	ಹಾಸನ	ಉಪ ನಿರ್ದೇಶಕರ ಕಛೇರಿ, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ಹಾಸನ.
		01	ಮಂಗಳೂರು	ಉಪ ನಿರ್ದೇಶಕರ ಕಛೇರಿ, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ಮಂಗಳೂರು.
		01	ಉಡುಪಿ	ಉಪ ನಿರ್ದೇಶಕರ ಕಛೇರಿ, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ಉಡುಪಿ.
IV ಗುಲ್ಬರ್ಗಾ ವಿಭಾಗ:				
1	ಪಶುವೈದ್ಯಾಧಿಕಾರಿ (ಯೋಜನೇತರ ಹುದ್ದೆ)	01	ಪಶುವೈದ್ಯಾಧಿಕಾರಿಗಳ ಕಛೇರಿ, ಮಾದರಿ ಸಮೀಕ್ಷೆ ಯೋಜನೆ, ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, ಗುಲ್ಬರ್ಗಾ ವಿಭಾಗ, ಗುಲ್ಬರ್ಗಾ. ಪಶುವೈದ್ಯಾಧಿಕಾರಿ, ಮಾದರಿ ಸಮೀಕ್ಷೆ ಯೋಜನೆ, ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, ಗುಲ್ಬರ್ಗಾ ವಿಭಾಗ, ಗುಲ್ಬರ್ಗಾ ರವರಿಗೆ ಹಾಲಿ ಇರುವ ಅಧಿಕಾರ ಮುಂದುವರೆಯುತ್ತದೆ.	
2	ಸಹಾಯಕ ನಿರ್ದೇಶಕರು (ಸಾಂಖ್ಯಿಕ)	01	ಗುಲ್ಬರ್ಗಾ, ಬೀದರ್, ಯಾದಗಿರಿ	ಉಪ ನಿರ್ದೇಶಕರ ಕಛೇರಿ, ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, ಬೀದರ್
		01	ರಾಯಚೂರು, ಬಳ್ಳಾರಿ, ಕೊಪ್ಪಳ	ಉಪ ನಿರ್ದೇಶಕರ ಕಛೇರಿ, ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, ಕೊಪ್ಪಳ
3	ಸಹಾಯಕ ಸಾಂಖ್ಯಿಕ ಅಧಿಕಾರಿ	01	ಗುಲ್ಬರ್ಗಾ, ಬೀದರ್	ಪಶುವೈದ್ಯಾಧಿಕಾರಿಗಳ ಕಛೇರಿ, ಮಾದರಿ ಸಮೀಕ್ಷೆ ಯೋಜನೆ, ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, ಗುಲ್ಬರ್ಗಾ.
		01	ಯಾದಗಿರಿ, ರಾಯಚೂರು	ಉಪ ನಿರ್ದೇಶಕರ ಕಛೇರಿ, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ರಾಯಚೂರು.
		01	ಬಳ್ಳಾರಿ, ಕೊಪ್ಪಳ	ಉಪ ನಿರ್ದೇಶಕರ ಕಛೇರಿ, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ಬಳ್ಳಾರಿ.
4	ಪಶುವೈದ್ಯಕೀಯ ಪರೀಕ್ಷಕರು	01	ಗುಲ್ಬರ್ಗಾ	ಪಶುವೈದ್ಯಾಧಿಕಾರಿಗಳ ಕಛೇರಿ, ಮಾದರಿ ಸಮೀಕ್ಷೆ ಯೋಜನೆ, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ಗುಲ್ಬರ್ಗಾ.

		01	ಗುಲ್ಬರ್ಗಾ	ಉಪ ನಿರ್ದೇಶಕರ ಕಛೇರಿ, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ಗುಲ್ಬರ್ಗಾ.
		01	ಬೀದರ್	ಉಪ ನಿರ್ದೇಶಕರ ಕಛೇರಿ, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ಬೀದರ್.
		01	ಯಾದಗಿರಿ.	ಉಪ ನಿರ್ದೇಶಕರ ಕಛೇರಿ, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ಯಾದಗಿರಿ.
		01	ರಾಯಚೂರು	ಉಪ ನಿರ್ದೇಶಕರ ಕಛೇರಿ, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ರಾಯಚೂರು.
		01	ಬಳ್ಳಾರಿ	ಉಪ ನಿರ್ದೇಶಕರ ಕಛೇರಿ, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ಬಳ್ಳಾರಿ.
		01	ಕೊಪ್ಪಳ	ಉಪ ನಿರ್ದೇಶಕರ ಕಛೇರಿ, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ಕೊಪ್ಪಳ.
V ಬೆಳಗಾವಿ ವಿಭಾಗ:				
1	ಪಶುವೈದ್ಯಾಧಿಕಾರಿ (ಯೋಜನೇತರ ಹುದ್ದೆ)	01	ಪಶುವೈದ್ಯಾಧಿಕಾರಿಗಳ ಕಛೇರಿ, ಮಾದರಿ ಸಮೀಕ್ಷೆ ಯೋಜನೆ, ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, ಬೆಳಗಾವಿ ವಿಭಾಗ, ಬೆಳಗಾವಿ. ಪಶುವೈದ್ಯಾಧಿಕಾರಿ, ಮಾದರಿ ಸಮೀಕ್ಷೆ ಯೋಜನೆ, ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, ಬೆಳಗಾವಿ ವಿಭಾಗ, ಬೆಳಗಾವಿ ರವರಿಗೆ ಹಾಲಿ ಇರುವ ಅಧಿಕಾರ ಮುಂದುವರೆಯುತ್ತದೆ.	
2	ಸಹಾಯಕ ನಿರ್ದೇಶಕರು (ಸಾಂಖ್ಯಿಕ)	01	ಬೆಳಗಾವಿ, ಕಾರವಾರ, ಧಾರವಾಡ	ಉಪ ನಿರ್ದೇಶಕರ ಕಛೇರಿ, ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, ಧಾರವಾಡ.
		01	ಬಿಜಾಪುರ, ಬಾಗಲಕೋಟೆ, ಗದಗ್, ಹಾವೇರಿ.	ಉಪ ನಿರ್ದೇಶಕರ ಕಛೇರಿ, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ಗದಗ್.
3	ಸಹಾಯಕ ಸಾಂಖ್ಯಿಕ ಅಧಿಕಾರಿ	01	ಬೆಳಗಾವಿ	ಪಶುವೈದ್ಯಾಧಿಕಾರಿಗಳ ಕಛೇರಿ, ಮಾದರಿ ಸಮೀಕ್ಷೆ ಯೋಜನೆ, ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, ಬೆಳಗಾವಿ.
		01	ಕಾರವಾರ, ಧಾರವಾಡ	ಉಪ ನಿರ್ದೇಶಕರ ಕಛೇರಿ, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ಕಾರವಾರ.
		01	ಬಿಜಾಪುರ, ಬಾಗಲಕೋಟೆ	ಉಪ ನಿರ್ದೇಶಕರ ಕಛೇರಿ, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ಬಿಜಾಪುರ.
		01	ಗದಗ್, ಹಾವೇರಿ	ಉಪ ನಿರ್ದೇಶಕರ ಕಛೇರಿ, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ಹಾವೇರಿ.
4	ಪಶುವೈದ್ಯಕೀಯ ಪರೀಕ್ಷಕರು	01	ಬೆಳಗಾವಿ	ಪಶುವೈದ್ಯಾಧಿಕಾರಿಗಳ ಕಛೇರಿ, ಮಾದರಿ ಸಮೀಕ್ಷೆ ಯೋಜನೆ, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ಬೆಳಗಾವಿ.

		01	ಬೆಳಗಾವಿ	ಉಪ ನಿರ್ದೇಶಕರ ಕಛೇರಿ, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ಬೆಳಗಾವಿ.
		01	ಕಾರವಾರ	ಉಪ ನಿರ್ದೇಶಕರ ಕಛೇರಿ, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ಕಾರವಾರ.
		01	ಧಾರವಾಡ	ಉಪ ನಿರ್ದೇಶಕರ ಕಛೇರಿ, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ಧಾರವಾಡ.
		01	ಬಿಜಾಪುರ	ಉಪ ನಿರ್ದೇಶಕರ ಕಛೇರಿ, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ಬಿಜಾಪುರ.
		01	ಬಾಗಲಕೋಟೆ	ಉಪ ನಿರ್ದೇಶಕರ ಕಛೇರಿ, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ಬಾಗಲಕೋಟೆ.
		01	ಗದಗ್	ಉಪ ನಿರ್ದೇಶಕರ ಕಛೇರಿ, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ಗದಗ್.
		01	ಹಾವೇರಿ	ಉಪ ನಿರ್ದೇಶಕರ ಕಛೇರಿ, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ಹಾವೇರಿ.

ಬಿ.ಕೆ. ಶ್ರೀನಿವಾಸಮೂರ್ತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ

ABSTRACT

	ಜಂಟಿ ನಿರ್ದೇಶಕರು (ಅಂಕಿ ಅಂಶ), ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, ಬೆಂಗಳೂರು ರವರ ಕಛೇರಿ:		
			ಒಟ್ಟು ಹುದ್ದೆಗಳ ಸಂಖ್ಯೆ
1	ಜಂಟಿ ನಿರ್ದೇಶಕರು (ಅಂಕಿ ಅಂಶ) 22125-30300		01
2	ಉಪ ನಿರ್ದೇಶಕರು (ಅಂಕಿ ಅಂಶ) 18150-26925		02
3	ಸಾಂಖ್ಯಿಕ ನಿರೀಕ್ಷಕರು 7275-13350		02
4	ಪಶುವೈದ್ಯಕೀಯ ಪರೀಕ್ಷಕರು 6250-13350		02
	(ಅ) ಒಟ್ಟು		**07**

		ಹುದ್ದೆಗಳು				
ವಿಭಾಗ ಮಟ್ಟದ ಕಛೇರಿಗಳು:		ಬೆಂಗಳೂರು ವಿಭಾಗ	ಮೈಸೂರು ವಿಭಾಗ	ಗುಲ್ಬರ್ಗಾ ವಿಭಾಗ	ಬೆಳಗಾವಿ ವಿಭಾಗ	ಒಟ್ಟು ಹುದ್ದೆಗಳ ಸಂಖ್ಯೆ
1	ಸಹಾಯಕ ನಿರ್ದೇಶಕರು (ಸಾಂಖ್ಯಿಕ) 11400–21600	02	02	02	02	08
2	ಸಹಾಯಕ ಸಾಂಖ್ಯಿಕ ಅಧಿಕಾರಿ 10000–18150	04	04	03	04	15
3	ಪಶುವೈದ್ಯಕೀಯ ಪರೀಕ್ಷಕರು 6250–13350	10	09	07	08	34
	(ಆ) ಒಟ್ಟು	**16**	**15**	**12**	**14**	**57**
	(ಅ) + (ಆ) ಒಟ್ಟು (07 + 57)					**64**

ಬಿ.ಕೆ. ಶ್ರೀನಿವಾಸಮೂರ್ತಿ

ಪಿ.ಆರ್. 486. ಸರ್ಕಾರದ ಅಧೀನ ಕಾರ್ಯದರ್ಶಿ

ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ

ನಗರಾಭಿವೃದ್ಧಿ ಸಚಿವಾಲಯ

ಸುತ್ತೋಲೆ

ಸಂಖ್ಯೆ: ನಅಇ 32 ಬೆಂಅಸೇ 2011 ಬೆಂಗಳೂರು, ದಿನಾಂಕ: 08-02-2011

ವಿಷಯ : ರಸ್ತೆ ಅಗಲೀಕರಣ ಯೋಜನೆಯನ್ನು ಕೈಗೊಳ್ಳುವಾಗ ಸೂಕ್ತ ಕಾಯ್ದೆ/ನಿಯಮಾವಳಿಗಳನ್ನು ಅನುಸರಿಸುವ ಬಗ್ಗೆ

ಬೆಂಗಳೂರು ಮಹಾನಗರ ಪ್ರದೇಶದಲ್ಲಿ ಅಭಿವೃದ್ಧಿ ಪ್ರಾಧಿಕಾರ/ಸ್ಥಳೀಯ ಸಂಸ್ಥೆಗಳು ರಸ್ತೆ ಅಗಲೀಕರಣ ಕಾರ್ಯವನ್ನು ಕೈಗೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ನಗರದ ತ್ವರಿತ ಬೆಳವಣಿಗೆಯ ಹಿನ್ನೆಲೆಯಲ್ಲಿ ಇಂತಹ ಅಭಿವೃದ್ಧಿ ಕಾರ್ಯಗಳು ಅಗತ್ಯವಾದರೂ, ಅಗಲೀಕರಣಕ್ಕಾಗಿ ರಸ್ತೆಗಳನ್ನು ಆಯ್ದುಕೊಳ್ಳುವಾಗ ರಸ್ತೆ ಪರಿಚಲನೆಯ ಸೂಕ್ತ ಅಧ್ಯಯನ ಅಗತ್ಯವಾಗಿರುತ್ತದೆ ಹಾಗೂ ಅನುಷ್ಠಾನಗೊಳಿಸುವಾಗ ಕಾಯ್ದೆ/ನಿಯಮಾವಳಿಗಳಲ್ಲಿ ಸೂಚಿಸಲಾಗಿರುವ ಅಗತ್ಯ ಕಾರ್ಯವಿಧಾನವನ್ನು ಅನುಸರಿಸುವುದು ಅವಶ್ಯಕವಾಗಿರುತ್ತದೆ. ಇಲ್ಲದಿದ್ದಲ್ಲಿ ಸಾರ್ವಜನಿಕರಿಗೆ ಅನಗತ್ಯ ತೊಂದರೆಯಾಗುವುದಲ್ಲದೇ ಕಾಯ್ದೆಯ ಉಲ್ಲಂಘನೆಯಾಗುವ ಸಾಧ್ಯತೆ ಇರುತ್ತದೆ.

ಆದ್ದರಿಂದ, ಇನ್ನು ಮುಂದೆ ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿ ರಸ್ತೆ ಅಗಲೀಕರಣ ಯೋಜನೆಗಳನ್ನು ಕೈಗೊಳ್ಳುವಾಗ ಸದರಿ ರಸ್ತೆಗಳನ್ನು ಅಗಲೀಕರಣಕ್ಕಾಗಿ ಸರ್ಕಾರದಿಂದ ಅನುಮೋದಿತ ಮಹಾಯೋಜನೆಗಳಲ್ಲಿ (ಮಾಸ್ಟರ್ ಪ್ಲಾನ್) ಅಗಲೀಕರಣಕ್ಕಾಗಿ ಪ್ರಸ್ತಾಪಿಸಲಾಗಿದೆಯೇ, ಇಲ್ಲದಿದ್ದಲ್ಲಿ ಸದರಿ ರಸ್ತೆಗಳನ್ನು ಅಗಲೀಕರಣಕ್ಕಾಗಿ ಕೈಗೊಳ್ಳಲು ಕಾರಣಗಳು ಮುಂತಾದವುಗಳ ಬಗ್ಗೆ ಸಾರ್ವಜನಿಕರ ಗಮನಕ್ಕೆ ತಂದು, ಭೂ ಸ್ವಾಧೀನ ಕೈಗೊಳ್ಳುವಾಗ ಭೂ ಸ್ವಾಧೀನ ಕಾಯ್ದೆ/ಕೆಟಿಸಿಪಿ ಕಾಯ್ದೆ ಕಲಂ 14 (ಬಿ) ಅಡಿಯಲ್ಲಿ ಸೂಚಿಸಲಾಗಿರುವ ಅಗತ್ಯ ಕಾರ್ಯವಿಧಾನಗಳನ್ನು ಕಟ್ಟುನಿಟ್ಟಾಗಿ ಅನುಸರಿಸುವಂತೆ ಈ ಮೂಲಕ ಸೂಚಿಸಲಾಗಿದೆ.

ಎಂ.ಎಸ್. ಪ್ರೇಮಚಂದ್ರ

ಪಿ.ಆರ್. 487 ಸರ್ಕಾರದ ಅಧೀನ ಕಾರ್ಯದರ್ಶಿ,

ನಗರಾಭಿವೃದ್ಧಿ ಇಲಾಖೆ

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವಾಲಯ

ವಿಷಯ : ಶ್ರೀ ಎಸ್. ರಾಜೇಂದ್ರಪ್ಪ, ಸಂಪಾದಕರು ಮತ್ತು ಶ್ರೀ ಎಸ್.ವೈ. ಬೆಟ್ಟೇಗೌಡ, ಸಂಪಾದಕರು ಇವರುಗಳ ಸೇವೆಯನ್ನು ಕರ್ನಾಟಕ ಗ್ಯಾಸೆಟಿಯರ್ ಇಲಾಖೆಯಲ್ಲಿ ವಿಲೀನಗೊಳಿಸುವ ಬಗ್ಗೆ.

ಓದಲಾಗಿದೆ :

1. ಮುಖ್ಯ ಸಂಪಾದಕರು, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು ಅವರ ಪತ್ರ ಸಂ:ಕಗ್ಯಾಇ/ಸಿ(1)ಸಂ/ವಿಲೀನ/2005-06, ದಿ : 13-07-2005.
2. ಸರ್ಕಾರಿ ಆದೇಶ ಸಂಖ್ಯೆ : ಇಡಿ/128/ಡಿಜಿಎಂ/2007, ದಿ : 29-03-2008.
3. ಮುಖ್ಯಸಂಪಾದಕರು, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ ಬೆಂಗಳೂರು ಅವರ ಪತ್ರ ಸಂ : ಕಗ್ಯಾಇ/ಸಿ(1)ಸಂ/ವಿಲೀನ/2008, ದಿ : 09-04-2008.

ಪ್ರಸ್ತಾವನೆ:

ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿ ಉಪನ್ಯಾಸಕ ವೃಂದಕ್ಕೆ ಸೇರಿದ ಶ್ರೀ ಎಸ್. ರಾಜೇಂದ್ರಪ್ಪ, ಹಾಗೂ ಶ್ರೀ ಎಸ್.ವೈ. ಬೆಟ್ಟೇಗೌಡ, ಇವರುಗಳು ಕರ್ನಾಟಕ ಗ್ಯಾಸೆಟಿಯರ್ ಇಲಾಖೆಯಲ್ಲಿ ಪ್ರತಿನಿಯೋಜನೆ ಮೇರೆಗೆ ಸಂಪಾದಕರ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿದ್ದು, ಇದೇ ಇಲಾಖೆಯಲ್ಲಿ ಸಾರ್ವಜನಿಕ ಹಿತದೃಷ್ಟಿ ಆಧಾರದ ಮೇಲೆ ವಿಲೀನ ಹೊಂದಲು ಇಚ್ಛಿಸಿ ಮನವಿ ಸಲ್ಲಿಸಿರುತ್ತಾರೆಂದು, ಗ್ಯಾಸೆಟಿಯರ್ ಇಲಾಖೆಯಲ್ಲಿ ಕೆಲಸ ಮಾಡಲು ವಿಶೇಷ ಆಸಕ್ತಿ ಹೊಂದಿದ ನುರಿತ ಸಂಪಾದಕ ವರ್ಗದ ಅವಶ್ಯಕತೆ ಇದ್ದು ಈಗಾಗಲೇ ಮೂರು ಸಂಪಾದಕರ ಹುದ್ದೆ ಖಾಲಿ ಇರುವುದರಿಂದ ಹಾಗೂ

ಗ್ಯಾಸೆಟಿಯರ್‌ಗಳ ಅಧ್ಯಾಯಗಳನ್ನು ರಚಿಸಲು ಅನುಭವಿ ಸಂಪಾದಕರ ಕೊರತೆ ಇರುವುದರಿಂದ ಈ ಇಲಾಖೆಯಲ್ಲಿ, ಪ್ರತಿ ನಿಯೋಜನೆ ಮೇಲೆ ಸುಮಾರು 8-10 ವರ್ಷಗಳಿಂದ ಕೆಲಸ ಮಾಡುತ್ತಿರುವ ಶ್ರೀ ಎಸ್.ರಾಜೇಂದ್ರಪ್ಪ ಹಾಗೂ ಶ್ರೀ ಎಸ್.ವೈ. ಬೆಟ್ಟೇಗೌಡ, ಇವರುಗಳ ಸೇವೆಯನ್ನು ಗ್ಯಾಸೆಟಿಯರ್ ಇಲಾಖೆಯಲ್ಲಿ ಸಾರ್ವಜನಿಕ ಹಿತದೃಷ್ಟಿಯಿಂದ ವಿಲೀನಗೊಳಿಸಿ ಆದೇಶ ಹೊರಡಿಸಬೇಕೆಂದು ಮೇಲೆ (1)ರಲ್ಲಿ ಓದಲಾದ ಪತ್ರದಲ್ಲಿ ಮುಖ್ಯ ಸಂಪಾದಕರು, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ ಇವರು ಕೋರಿರುತ್ತಾರೆ.

ಶ್ರೀ ಎಸ್.ರಾಜೇಂದ್ರಪ್ಪ ಮತ್ತು ಶ್ರೀ ಎಸ್.ವೈ. ಬೆಟ್ಟೇಗೌಡ ಇವರುಗಳು ಕ್ರಮವಾಗಿ 1994 ಮತ್ತು 1998 ರಿಂದಲೂ ನಿಯೋಜನೆ ಮೇಲೆ ಕನ್ನಡ, ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಯ ಕ್ಷೇತ್ರೀಯ ಇಲಾಖೆಯಾದ ಕರ್ನಾಟಕ ಗ್ಯಾಸೆಟಿಯರ್ ಇಲಾಖೆಯಲ್ಲಿ ಸಂಪಾದಕರಾಗಿ ಕಾರ್ಯ ನಿರ್ವಹಿಸುತ್ತಿದ್ದು, ಇವರುಗಳ ಸೇವೆಯನ್ನು ಗ್ಯಾಸೆಟಿಯರ್ ಇಲಾಖೆಯಲ್ಲಿ ವಿಲೀನಗೊಳಿಸಲು ಕರ್ನಾಟಕ ನಾಗರೀಕ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು 1977ರ ನಿಯಮ-16ರ ಪ್ರಕಾರ ಕನ್ನಡ, ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಯ ವಶಕ್ಕೆ ಖಾಯಂ ಆಗಿ ಬಿಟ್ಟುಕೊಡಲು ಮೇಲೆ (2)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಆದೇಶಿಸಲಾಗಿದೆ.

ಶ್ರೀ ಎಸ್.ರಾಜೇಂದ್ರಪ್ಪರವರು ದಿನಾಂಕ : 01-01-1994 ರಿಂದ ಹಾಗೂ ಶ್ರೀ ಎಸ್.ವೈ. ಬೆಟ್ಟೇಗೌಡರವರು ದಿನಾಂಕ : 03-11-1998 ರಿಂದ ಕರ್ನಾಟಕ ಗ್ಯಾಸೆಟಿಯರ್ ಇಲಾಖೆಯಲ್ಲಿ ಸಂಪಾದಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕೆಲವೇ ಸಂಪಾದಕರುಗಳ ಪೈಕಿ ಇವರುಗಳೂ ಇರುವುದರಿಂದ ಇವರ ಸೇವೆಯನ್ನು ಗ್ಯಾಸೆಟಿಯರ್ ಇಲಾಖೆಯಲ್ಲಿ ವಿಲೀನಗೊಳಿಸಲು ಅವಶ್ಯಕವಾಗಿರುತ್ತದೆಂದು ಸದರಿ ಅಧಿಕಾರಿಗಳ ಸೇವೆಯನ್ನು ಗ್ಯಾಸೆಟಿಯರ್ ಇಲಾಖೆಯಲ್ಲಿ ವಿಲೀನಗೊಳಿಸಲು ಶಿಕ್ಷಣ ಇಲಾಖೆಯ ಸಮ್ಮತಿ ನೀಡಿರುವುದರಿಂದ, ಈ ಅಧಿಕಾರಿಗಳ ವಿಲೀನದ ಬಗ್ಗೆ ಮುಂದಿನ ಕ್ರಮವನ್ನು ಕೈಗೊಂಡು ಸೂಕ್ತ ಆದೇಶವನ್ನು ನೀಡುವಂತೆ ಮೇಲೆ (3)ರಲ್ಲಿ ಓದಲಾದ ಪತ್ರದಲ್ಲಿ ಮುಖ್ಯಸಂಪಾದಕರು, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ ಇವರು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದೆ, ಅದರಂತೆ ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ : ಕಸಂವಾಪ್ರ 8 ಕರಾಗೆ 2008 ಬೆಂಗಳೂರು, ದಿನಾಂಕ: 17-02-2011

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಕರ್ನಾಟಕ ಗ್ಯಾಸೆಟಿಯರ್ ಇಲಾಖೆಯಲ್ಲಿ ಸಂಪಾದಕರ ಹುದ್ದೆಯಲ್ಲಿ ನಿಯೋಜನೆ ಮೇಲೆ ಕಾರ್ಯನಿರ್ವಹಿಸುತ್ತಿರುವ ಶ್ರೀ ಎಸ್. ರಾಜೇಂದ್ರಪ್ಪ ಮತ್ತು ಶ್ರೀ ಎಸ್.ವೈ. ಬೆಟ್ಟೇಗೌಡ ಇವರುಗಳನ್ನು ಕರ್ನಾಟಕ ನಾಗರಿಕ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು 1977ರ ನಿಯಮ-16 (ಎ)(ii)ರ ಪ್ರಕಾರ ಹಾಗೂ ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತಾ ನಿಯಮ) 1957ರ ನಿಯಮ 6ರ ಮೊದಲನೇ ಪರಂತುಕದ ಪ್ರಕಾರ ಕರ್ನಾಟಕ ಗ್ಯಾಸೆಟಿಯರ್ ಇಲಾಖೆಯಲ್ಲಿನ ಸಂಪಾದಕರ ಹುದ್ದೆಯಲ್ಲಿ, ಸರ್ಕಾರದ ಆದೇಶ ಸಂಖ್ಯೆ ಇಡಿ 128 ಡಿಜಿಎಂ 2007 ದಿನಾಂಕ : 29-03-2008ರನ್ವಯ ದಿನಾಂಕ : 29-03-2008 ರಿಂದ ಜಾರಿಗೆ ಬರುವಂತೆ ವಿಲೀನಗೊಳಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಂ.ಕೆ. ಧರ್ಮರಾಜಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ
ಕನ್ನಡ ಮತ್ತು ಸಂಸ್ಕೃತಿ,
ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ (ಆಡಳಿತ ಕನ್ನಡ)(ಪ್ರ)

ಪಿ.ಆರ್. 516

ಜಲಸಂಪನ್ಮೂಲ ಸಚಿವಾಲಯ

ವಿಷಯ : ಚಿಕ್ಕಬಳ್ಳಾಪುರ ಜಿಲ್ಲೆ, ಗುಡಿಬಂಡೆ ತಾಲ್ಲೂಕು ಹಂಪಸಂದ್ರ ಹೊಸಕೆರೆ ನಿರ್ಮಾಣಕ್ಕೆ ಸ್ವಾಧೀನಪಡಿಸಿಕೊಂಡ ಹಂಪಸಂದ್ರ ಮತ್ತು ಬೆಣ್ಣೆಪರ್ತಿ ಗ್ರಾಮಗಳ ಜಮೀನುಗಳಿಗೆ ಒಪ್ಪಂದದ ಐತೀರ್ಪಿನಂತೆ ಠೇವಣಿ ಮಾಡಲು ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ :
1. ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ, ಬೆಂಗಳೂರು ಇವರ ಪತ್ರ ಸಂಖ್ಯೆ : ಮುಸದ/ಲೆಶಾಖೆ/ಲೆಸ-1/3/ಭೂಸ್ವಾಧೀನ/09-10/2424, ದಿನಾಂಕ : 16-09-2009.
2. ಕಂದಾಯ ಇಲಾಖೆಯ ಪತ್ರ ಸಂಖ್ಯೆ : ಕಂಇ 07 ಭೂಸ್ವಾಕೋ 2010, ದಿನಾಂಕ : 09-12-2010.

ಪ್ರಸ್ತಾವನೆ:

ಚಿಕ್ಕಬಳ್ಳಾಪುರ ಜಿಲ್ಲೆ, ಗುಡಿಬಂಡೆ ತಾಲ್ಲೂಕು ಹಂಪಸಂದ್ರ ಹೊಸಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಂಡ ಹಂಪಸಂದ್ರ ಮತ್ತು ಬೆಣ್ಣೆಪರ್ತಿ ಗ್ರಾಮಗಳ ಜಮೀನುಗಳ ಮಾಲೀಕರಿಗೆ ಒಪ್ಪಂದದ ಅವಾರ್ಡ್‌ನಂತೆ ಠೇವಣಿ ಮಾಡಲು ರೂ. 179.95 ಲಕ್ಷಗಳನ್ನು ಬಿಡುಗಡೆ ಮಾಡುವಂತೆ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ದಕ್ಷಿಣ) ವಲಯ, ಬೆಂಗಳೂರು ಇವರು ಮೇಲೆ ಕ್ರಮಾಂಕ (1)ರಲ್ಲಿ ಓದಲಾದ ದಿನಾಂಕ : 16-09-2009ರ ಪತ್ರದಲ್ಲಿ ಕೋರಿರುತ್ತಾರೆ.

ಚಿಕ್ಕಬಳ್ಳಾಪುರ ಜಿಲ್ಲೆ, ಗುಡಿಬಂಡೆ ತಾಲ್ಲೂಕು ಹಂಪಸಂದ್ರ ಮತ್ತು ಬೆಣ್ಣೆಪರ್ತಿ ಗ್ರಾಮದ ವಿವಿಧ ಸರ್ವೆ ನಂಬರ್‌ಗಳಲ್ಲಿ ಒಟ್ಟು 38-16 ಎಕರೆ ಜಮೀನನ್ನು ಹಂಪಸಂದ್ರ ಹೊಸಕೆರೆ ನಿರ್ಮಾಣಕ್ಕಾಗಿ ಭೂಸ್ವಾಧೀನಪಡಿಸಿಕೊಳ್ಳಲು ಭೂಸ್ವಾಧೀನ ಕಾಯ್ದೆ ಕಲಂ 4(1)ರ ಅಧಿಸೂಚನೆ ದಿನಾಂಕ : 10-05-2007ರಂದು ಹೊರಡಿಸಿದೆ. ಈ ಪ್ರಕರಣದಲ್ಲಿ ಜಿಲ್ಲಾಧಿಕಾರಿ, ಚಿಕ್ಕಬಳ್ಳಾಪುರ ಇವರ ಕೋರಿಕೆಯಂತೆ ಸದರಿ ಗ್ರಾಮಗಳ ಖುಷ್ಕಿ ಜಮೀನಿಗೆ ರೂ. 4.00 ಲಕ್ಷ ಹಾಗೂ ಬಾಗಾಯ್ತು ಜಮೀನುಗಳಿಗೆ ರೂ. 5.00 ಲಕ್ಷಗಳನ್ನು ನಿಗದಿಪಡಿಸಿ ಒಪ್ಪಂದದ ಅವಾರ್ಡ್ ರಚಿಸಲು ಕಂದಾಯ ಇಲಾಖೆಯು ಮೇಲೆ ಕ್ರಮಾಂಕ (2)ರಲ್ಲಿ ಓದಲಾದ ದಿನಾಂಕ : 09-12-2010ರ ಪತ್ರದಲ್ಲಿ ಅನುಮೋದನೆ ನೀಡಿದೆ. ಆದುದರಿಂದ ಸಹಾಯಕ ಆಯುಕ್ತರು ಮತ್ತು ಭೂಸ್ವಾಧೀನಾಧಿಕಾರಿ, ಚಿಕ್ಕಬಳ್ಳಾಪುರ ಉಪ ವಿಭಾಗ ಇವರು ದಿನಾಂಕ : 03-12-2010ರಂದು ಒಪ್ಪಂದದ ಅವಾರ್ಡ್ ರಚಿಸಿರುತ್ತಾರೆ.

ಮೇಲ್ಕಂಡ ಎಲ್ಲಾ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸನೀಇ 05 ಭೂಸ್ವಾಪ್ರ 2009, ಬೆಂಗಳೂರು, ದಿನಾಂಕ: 15-02-2011

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳಿಂದ ಚಿಕ್ಕಬಳ್ಳಾಪುರ ಜಿಲ್ಲೆ, ಗುಡಿಬಂಡೆ ತಾಲ್ಲೂಕು ಹಂಪಸಂದ್ರ ಮತ್ತು ಬೆಣ್ಣೆಪರ್ತಿ ಗ್ರಾಮಗಳ ಜಮೀನುಗಳನ್ನು ಹಂಪಸಂದ್ರ ಹೊಸಕೆರೆ ನಿರ್ಮಾಣಕ್ಕೆ ಸ್ವಾಧೀನಪಡಿಸಿಕೊಂಡಿದ್ದು, ಒಪ್ಪಂದದ ಅವಾರ್ಡ್‌ನಂತೆ ಕೇವಣಿ ಮಾಡಲು ರೂ. 173.32 ಲಕ್ಷಗಳನ್ನು (ನೂರ ಎಪ್ಪತ್ತಮೂರು ಲಕ್ಷದ ಮೂವತ್ತೆರಡು ಸಾವಿರ ರೂಪಾಯಿಗಳು ಮಾತ್ರ) ಬಿಡುಗಡೆ ಮಾಡಲು ಅನುಮೋದನೆ ನೀಡಿದೆ.

ಈ ವೆಚ್ಚವನ್ನು 2010-11ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ "4702-0-1-101-02-139 ಹೊಸಕೆರೆಗಳ ನಿರ್ಮಾಣ ಪ್ರಧಾನ ಕಾಮಗಾರಿಗಳು" ಅಡಿಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಅನುದಾನದಿಂದ ಭರಿಸಿಕೊಳ್ಳತಕ್ಕದ್ದು.

ಭೂಸ್ವಾಧೀನಕ್ಕೆ ಒಳಪಟ್ಟಿರುವ ಜಮೀನನ್ನು ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಉಪ ವಿಭಾಗ, ಚಿಕ್ಕಬಳ್ಳಾಪುರ ಇವರು ಇಲಾಖೆಯ ವಶಕ್ಕೆ ಪಡೆದುಕೊಂಡು, ಕಂದಾಯ ದಾಖಲೆಗಳಲ್ಲಿ ಇಂಡೀಕರಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ ಎಫ್‌ಡಿ 01 ಟಿಎಫ್‌ಪಿ 2010, ದಿನಾಂಕ : 20-10-2010 ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಗೋಪಾಲ್

ಸರ್ಕಾರದ ಅಧೀನ ಕಾರ್ಯದರ್ಶಿ

ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಪಿ.ಆರ್. 517

ಕೃಷಿ ಸಚಿವಾಲಯ

ವಿಷಯ : 2010-11ನೇ ಸಾಲಿನ ಹೊಸ ಯೋಜನೆಗಳಿಗೆ ಮಂಜೂರಾತಿ ನೀಡುವ ಬಗ್ಗೆ.

ಓದಲಾಗಿದೆ :

1. ಕುಲಪತಿಯವರು, ಕೃಷಿ ವಿಶ್ವವಿದ್ಯಾಲಯ, ರಾಯಚೂರುರವರ ದಿನಾಂಕ : 30-04-2010, 18-06-2010, 20-08-2010 ಮತ್ತು 01-01-2011ರ ಪತ್ರಗಳ ಸಂಖ್ಯೆ : VC/UASR/2010-11.
2. ದಿನಾಂಕ : 04-05-2010, 20-07-2010, 20-11-2010 ಮತ್ತು 19-01-2011ಗಳ ಸರ್ಕಾರಿ ಆದೇಶ ಸಂಖ್ಯೆ : ಕೃತೋಇ 111 ಕೃವಿವಿ 2010.

ಪ್ರಸ್ತಾವನೆ:

2010-11ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ 2415-80-277-3-01-ಸಹಾಯಾನುದಾನ (ಯೋಜನೆ) ಅಡಿಯಲ್ಲಿ 1295.00 ಲಕ್ಷ ರೂಪಾಯಿಗಳನ್ನು ತೆಗೆದಿರಿಸಿದೆ. ಕಾಲೇಜುಗಳ ಪ್ರಯೋಗಾಲಯಗಳು, ಗ್ರಂಥಾಲಯಗಳು ಮತ್ತು ಇತರ ಬೋಧಕ ಚಟುವಟಿಕೆಗಳ ಸುಧಾರಣೆ ಎಂಬ ಹೊಸ ಯೋಜನೆಗೆ ಮೀಸಲಾದ 1295.00 ಲಕ್ಷ ರೂಪಾಯಿಗಳಿಗೆ ಸಂಬಂಧಿಸಿದ ಈ ಹೊಸ ಯೋಜನೆಗೆ ಮಂಜೂರಾತಿ ನೀಡುವಂತೆ ಮತ್ತು ಅನುದಾನವನ್ನು ಬಿಡುಗಡೆ ಮಾಡಲು ಪರಿಶೀಲಿಸುವಂತೆ ಯೋಜನಾ ಸಚಿವಾಲಯವು (ಪಿಡಿ 5 ಎಎಂಎಂ 2010) ಕೋರಿದೆ.

ಮೇಲೆ (1)ರಲ್ಲಿ ಓದಲಾದ ಪತ್ರಗಳ ಮುಖಾಂತರ ಕಾಲೇಜುಗಳ ಪ್ರಯೋಗಾಲಯಗಳು, ಗ್ರಂಥಾಲಯಗಳು ಮತ್ತು ಇತರ ಬೋಧಕ ಚಟುವಟಿಕೆಗಳ ಸುಧಾರಣೆ ಎಂಬ ಹೊಸ ಯೋಜನೆಗೆ ಮೀಸಲಾದ 1295.00 ಲಕ್ಷ ರೂಪಾಯಿಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಸಲ್ಲಿಸಿ, ಲೆಕ್ಕ ಶೀರ್ಷಿಕೆ 2415-80-277-3-01-ಸಹಾಯಾನುದಾನ (ಯೋಜನೆ) ಅಡಿಯಲ್ಲಿ 1295.00 ಲಕ್ಷ ರೂಪಾಯಿಗಳನ್ನು ಯೋಜನಾ ಅನುದಾನದಲ್ಲಿ ಬಿಡುಗಡೆ ಮಾಡುವಂತೆ ರಾಯಚೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿಯವರು/ಕುಲಸಚಿವರು/ಹಣಕಾಸು ನಿಯಂತ್ರಣಾಧಿಕಾರಿಗಳು ಪ್ರಸ್ತಾಪಿಸಿದ್ದಾರೆ.

ಪ್ರಸ್ತಾವನೆಗೆ ಸಂಬಂಧಿಸಿದಂತೆ ಯೋಜನಾ ಸಚಿವಾಲಯವು ದಿನಾಂಕ : 16-11-2010ರ ಟಿಪ್ಪಣಿ ಸಂಖ್ಯೆ : ಪಿಡಿ 40 ಪಿಎಫ್‌ಒ 2010ರಲ್ಲಿ Planning Department concurs with the proposal of the administrative department ಎಂಬುದಾಗಿ ತನ್ನ ಅಭಿಪ್ರಾಯ/ಸಹಮತಿಯನ್ನು ನೀಡಿದೆ.

ಮೇಲ್ಕಂಡ ಪ್ರಸ್ತಾವನೆಗೆ ಆರ್ಥಿಕ ಇಲಾಖೆಯು ದಿನಾಂಕ : 30-11-2010ರ ಟಿಪ್ಪಣಿ ಸಂಖ್ಯೆ : ಆಇ 414 ವೆ4/2010ರ ಮುಖಾಂತರ "2010-11ನೇ ಸಾಲಿಗೆ ರಾಯಚೂರು ಕೃಷಿ ವಿಶ್ವವಿದ್ಯಾಲಯದ ಹೊಸ ಯೋಜನೆಯಾದ ಕಾಲೇಜುಗಳ ಪ್ರಯೋಗಾಲಯಗಳು, ಗ್ರಂಥಾಲಯಗಳು ಮತ್ತು ಇತರ ಬೋಧಕ ಚಟುವಟಿಕೆಗಳ ಸುಧಾರಣೆ ಯೋಜನೆಗೆ ಆರ್ಥಿಕ ಇಲಾಖೆಯು ಸಹಮತಿಸಿದೆ. ಅನುದಾನ ಬಿಡುಗಡೆಗೆ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಗೆ ಕಳುಹಿಸುವಂತೆ ತಿಳಿಸಲಾಗಿದೆ" ಎಂಬುದಾಗಿ ತನ್ನ ಅಭಿಪ್ರಾಯವನ್ನು ನೀಡಿದೆ.

ಲೆಕ್ಕ ಶೀರ್ಷಿಕೆ 2415-80-277-3-01 (ಸಹಾಯಾನುದಾನ 101) ಅಡಿಯಲ್ಲಿ 1295.00 ಲಕ್ಷ ರೂಪಾಯಿಗಳನ್ನು 4 ಸಮನಾದ ಕಂತುಗಳ ಮುಖಾಂತರ ಮೇಲೆ (2)ರಲ್ಲಿ ಓದಲಾದ ಆದೇಶಗಳ ಮುಖಾಂತರ ಆರ್ಥಿಕ ಇಲಾಖೆಯ ಸಹಮತಿಯನ್ನು ಪಡೆದು ಈಗಾಗಲೇ ಬಿಡುಗಡೆ ಮಾಡಿರುತ್ತದೆ.

ಸರ್ಕಾರದ ಆದೇಶ ಸಂಖ್ಯೆ : ಕೃಇ 156 ಕೃವಿವಿ 2010, ಬೆಂಗಳೂರು, ದಿನಾಂಕ: 09-02-2011.

ಪ್ರಸ್ತಾವನೆಯಲ್ಲಿ ವಿವರಿಸಲಾದ ಕಾರಣಗಳ ಮೇರೆಗೆ 2010-11ನೇ ಸಾಲಿನ ಹೊಸ ಯೋಜನೆಯಾದ ಕಾಲೇಜುಗಳ ಪ್ರಯೋಗಾಲಯಗಳು, ಗ್ರಂಥಾಲಯಗಳು ಮತ್ತು ಇತರ ಬೋಧಕ ಚಟುವಟಿಕೆಗಳ ಸುಧಾರಣೆ ಎಂಬ ಹೊಸ ಯೋಜನೆಗೆ ಮೀಸಲಾದ 1295.00 ಲಕ್ಷ ರೂಪಾಯಿಗಳಿಗೆ ಸಂಬಂಧಿಸಿದ ರಾಯಚೂರು ಕೃಷಿ ವಿಶ್ವವಿದ್ಯಾಲಯದ ದಿನಾಂಕ : 30-04-2010ರ ಯೋಜನಾ ಪ್ರಸ್ತಾವನೆಗೆ ಸರ್ಕಾರದ ಆಡಳಿತಾತ್ಮಕ ಮಂಜೂರಾತಿಯನ್ನು ಈ ಮೂಲಕ ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಜಿ.ಕೆ. ಗುರಾಣಿ

ಸರ್ಕಾರದ ಅಧೀನ ಕಾರ್ಯದರ್ಶಿ

ಕೃಷಿ ಇಲಾಖೆ (ಸೇವೆಗಳು)

ಪಿ.ಆರ್. 518

ಮೂಲಸೌಲಭ್ಯ ಅಭಿವೃದ್ಧಿ ಸಚಿವಾಲಯ

ವಿಷಯ : ಬಿಜಾಪುರ ನಗರದಲ್ಲಿ ಗ್ರೀನ್‌ಫೀಲ್ಡ್ ವಿಮಾನ ನಿಲ್ದಾಣವನ್ನು ನಿರ್ಮಾಣ ಮಾಡಲು ಭೂಸ್ವಾಧೀನಕ್ಕೆ ಅಗತ್ಯವಾದ ಹಣ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ :

1. ಸರ್ಕಾರಿ ಆದೇಶ ಸಂ. ಮೂಅಇ 88 ರಾಅವಿ 2003, ದಿನಾಂಕ : 15-02-2007.
2. ಸರ್ಕಾರಿ ಆದೇಶ ಸಂ. ಮೂಅಇ 88 ರಾಅವಿ 2003, ದಿನಾಂಕ : 23-03-2007.
3. ಸರ್ಕಾರಿ ಆದೇಶ ಸಂ. ಮೂಅಇ 88 ರಾಅವಿ 2003, ದಿನಾಂಕ : 03-11-2007.
4. ಸರ್ಕಾರಿ ಆದೇಶ ಸಂ. ಮೂಅಇ 88 ಮೂಇವಿ 2003, ದಿನಾಂಕ : 31-03-2009.
5. ಜಿಲ್ಲಾಧಿಕಾರಿಗಳು, ಬಿಜಾಪುರ ಜಿಲ್ಲೆ, ಇವರ ಪತ್ರ ಸಂ. ಕಂಇ/ಎಲ್.ಎನ್.ಡಿ/ಸಿ. ಆರ್. 127(2)/00-01 ದಿನಾಂಕ : 22-07-2009.
6. ಸರ್ಕಾರಿ ಆದೇಶ ಸಂ. ಮೂಅಇ 88 ರಾಅವಿ 2003, ದಿನಾಂಕ : 26-08-2009.
7. ಸರ್ಕಾರಿ ಆದೇಶ ಸಂ. ಆರ್‌ಡಿ 42 ಎಲ್‌ಬಿಜೆ 2007, ದಿನಾಂಕ : 25-09-2010.
8. ಜಿಲ್ಲಾಧಿಕಾರಿಗಳು, ಬಿಜಾಪುರ ಜಿಲ್ಲೆ, ಇವರ ಪತ್ರ ಸಂ. ಕಂಇ/ಎಲ್.ಎನ್.ಡಿ/ಸಿ.ಆರ್./304/2009-10 ದಿನಾಂಕ : 26-10-2010.
9. ಜಿಲ್ಲಾಧಿಕಾರಿಗಳು,ಬಿಜಾಪುರ ಜಿಲ್ಲೆ, ಇವರ ಪತ್ರ ಸಂ. ಕಂಇ/ಎಲ್.ಎನ್.ಡಿ/ಸಿ.ಆರ್./128(2)/2009-10 ದಿನಾಂಕ : 04-01-2011.
10. ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ : FD 267 BRS 2010, ದಿನಾಂಕ : 29-01-2011.

ಪ್ರಸ್ತಾವನೆ:

ಮೇಲೆ ಕ್ರಮ ಸಂ(1)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಬಿಜಾಪುರ ವಿಮಾನ ನಿಲ್ದಾಣದ ನಿರ್ಮಾಣಕ್ಕಾಗಿ ಅವಶ್ಯವಿರುವ ಭೂಸ್ವಾಧೀನಕ್ಕಾಗಿ ರೂ. 5.50 ಕೋಟಿಗಳನ್ನು ಕೆಲವು ಷರತ್ತುಗಳೊಂದಿಗೆ ಬಿಡುಗಡೆ ಮಾಡಲು ಮಂಜೂರಾತಿಯನ್ನು ನೀಡಲಾಗಿರುತ್ತದೆ.

2. ಮೇಲೆ ಕ್ರಮ ಸಂ. (2)ರ ಆದೇಶದಲ್ಲಿ ಬಿಜಾಪುರದಲ್ಲಿ ಗ್ರೀನ್‌ಫೀಲ್ಡ್ ವಿಮಾನ ನಿಲ್ದಾಣವನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವದ ಆಧಾರದ ಮೇಲೆ ಸ್ಥಾಪಿಸಲು ಮಂಜೂರಾತಿಯನ್ನು ನೀಡಲಾಗಿದೆ.

3. ಮೇಲಿನ ಕ್ರಮ ಸಂ. (3)ರಲ್ಲಿ ಓದಲಾದ ಸರ್ಕಾರಿ ಆದೇಶ ದಿನಾಂಕ : 03-11-07ರಲ್ಲಿ ಇದೇ ಉದ್ದೇಶಕ್ಕೆ ರೂ. 4.00 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ.

4. ಮೇಲೆ ಕ್ರಮ ಸಂ.(4)ರಲ್ಲಿ ಓದಲಾದ ದಿನಾಂಕ : 31-03-09ರ ಸರ್ಕಾರಿ ಆದೇಶದಲ್ಲಿ ಬಿಜಾಪುರ ವಿಮಾನ ನಿಲ್ದಾಣಕ್ಕೆ ಭೂಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಿರುವ ಜಮೀನಿನ ಭೂಮಾಲೀಕರಿಗೆ ಪರಿಹಾರ ಧನವನ್ನು ಪಾವತಿಸಲು ರೂ. 15.00 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ.

5. ಮೇಲೆ ಕ್ರಮ ಸಂ.(5)ರಲ್ಲಿ ಓದಲಾದ ಪತ್ರದಲ್ಲಿ, ಜಿಲ್ಲಾಧಿಕಾರಿಗಳು, ಬಿಜಾಪುರ, ಇವರು ಬಿಜಾಪುರ ವಿಮಾನ ನಿಲ್ದಾಣದ ಭೂಸ್ವಾಧೀನಕ್ಕಾಗಿ ಒಟ್ಟು ರೂ. 30,64,37,500/- ಅನುದಾನ ಅವಶ್ಯಕತೆ ಇದ್ದು, ಈ ಪೈಕಿ ಈಗಾಗಲೇ ರೂ. 24,50,00,000/- ಅನುದಾನವನ್ನು ಬಿಡುಗಡೆ ಮಾಡಲಾಗಿದೆ ಎಂದು ಉಳಿದ ರೂ. 6,14,37,500/- ಅನುದಾನವನ್ನು ಬಿಡುಗಡೆ ಮಾಡುವಂತೆ ಕೋರಿ ಪ್ರಸ್ತಾವನೆಯನ್ನು ಕಳುಹಿಸಿರುತ್ತಾರೆ.

6. ಈ ಪ್ರಸ್ತಾವನೆಯನ್ನು ಸರ್ಕಾರ ಪರಿಶೀಲಿಸಿ ಉಲ್ಲೇಖ (6)ರ ಆದೇಶದಲ್ಲಿ ಬಿಜಾಪುರ ವಿಮಾನ ನಿಲ್ದಾಣಕ್ಕಾಗಿ ಭೂಸ್ವಾಧೀನಪಡಿಸಿಕೊಳ್ಳಲು ಅವಶ್ಯವಿರುವ ರೂ. 5.00 ಕೋಟಿಗಳನ್ನು ಬಿಡುಗಡೆ ಮಾಡಲು ಮಂಜೂರಾತಿ ನೀಡಿದೆ.

7. ಮೇಲೆ ಕ್ರಮ ಸಂ. (7)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ, ಬಿಜಾಪುರ, ವಿಮಾನ ನಿಲ್ದಾಣದ ಸ್ಥಾಪನೆಗಾಗಿ ಹಾಗೂ ಇತರೆ ಚಟುವಟಿಕೆಗಾಗಿ ಬಿಜಾಪುರ ತಾಲ್ಲೂಕಿನ ಬುರಣಾಪುರ, ಅಲಿಯಾಬಾದ್ ಮತ್ತು ಮದಬಾದಿ ಗ್ರಾಮಗಳಲ್ಲಿನ ಒಟ್ಟಾರೆ 347.33 ಎಕರೆ ಸರ್ಕಾರಿ ಹುಲ್ಲುಗಾವಲು ಜಮೀನನ್ನು ಬಿಜಾಪುರ ವಿಮಾನ ನಿಲ್ದಾಣ ಸ್ಥಾಪನೆಗಾಗಿ ಕೆಐಎಡಿಬಿಗೆ ಹಸ್ತಾಂತರಿಸಲು ದಿನಾಂಕ : 25-09-2010ರ ಆದೇಶ ಸಂಖ್ಯೆ : ಆರ್‌ಡಿ 42 ಎಲ್‌ಜಿಜೆ 2007ರಲ್ಲಿ ಅನುಮತಿ ನೀಡಲಾಗಿರುತ್ತದೆ.

8. ಕ್ರಸಂ. 8ರ ಪತ್ರದಲ್ಲಿ ಜಿಲ್ಲಾಧಿಕಾರಿಗಳು ದಿನಾಂಕ : 25-09-2010ರ ಸರ್ಕಾರದ ಆದೇಶದನ್ವಯ 347.33 ಎಕರೆ ಸರ್ಕಾರಿ ಜಮೀನಿಗೆ ಸಂಬಂಧಿಸಿದಂತೆ, ಜಮೀನಿನ ಬೆಲೆ ಮತ್ತು ಇತರೆ ಶುಲ್ಕ ಸೇರಿ ಒಟ್ಟು ರೂ. 32,81,96,124-00 ಗಳನ್ನು ಪಾವತಿಸುವಂತೆ ಕೋರಿರುತ್ತಾರೆ.

9. ಕ್ರಮ ಸಂ. 9ರ ಪತ್ರದಲ್ಲಿ ಜಿಲ್ಲಾಧಿಕಾರಿಗಳು ಖಾಸಗಿ ಜಮೀನಿನ ಭೂಸ್ವಾಧೀನ ಪರಿಹಾರ ಪಾವತಿಗೆ ಬೇಡಿಕೆ ರೂ. 30,64,37,500ಗಳಾಗಿದ್ದು, ಈಗಾಗಲೇ ರೂ. 29,50,000/-ಗಳನ್ನು ಬಿಡುಗಡೆ ಮಾಡಲಾಗಿದ್ದು, ಬಾಕಿಯಿರುವ ರೂ. 1,14,37,500/-ಗಳನ್ನು ಬಿಡುಗಡೆ ಮಾಡುವಂತೆ ಕೋರಿದ್ದಾರೆ.

10. ಕ್ರಸಂ. 10ರಲ್ಲಿ ಓದಲಾದ ಆದೇಶದಲ್ಲಿ ರೂ. 114.38 ಲಕ್ಷಗಳನ್ನು ಸಣ್ಣ ವಿಮಾನ ನಿಲ್ದಾಣಗಳ ಅಭಿವೃದ್ಧಿ ಲೆಕ್ಕ ಶೀರ್ಷಿಕೆಗೆ ಪುನರ್ ವಿನಿಯೋಗ ಮಾಡಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ : ಮೂಅಇ 88 ರಾಅವಿ 2003, ಬೆಂಗಳೂರು, ದಿನಾಂಕ: 10-02-2011.

ಬಿಜಾಪುರ ವಿಮಾನ ನಿಲ್ದಾಣಕ್ಕಾಗಿ ಭೂಸ್ವಾಧೀನಪಡಿಸಿಕೊಳ್ಳಲು ಅವಶ್ಯವಿರುವ ಬಾಕಿ ಹಣ ರೂ. 114.38 ಲಕ್ಷಗಳನ್ನು ಬಿಡುಗಡೆ ಮಾಡಲು ಸರ್ಕಾರದ ಮಂಜೂರಾತಿಯನ್ನು ನೀಡಿದೆ.

2. ಈ ಮೊತ್ತವನ್ನು ಲೆಕ್ಕ ಶೀರ್ಷಿಕೆ 5465-01-190-1-05-ಬಂಡವಾಳ ಹೂಡಿಕೆಯಡಿಯಲ್ಲಿ- ಸಣ್ಣ ವಿಮಾನ ನಿಲ್ದಾಣಗಳು (ಯೋಜನೆ) ಈ ಕೆಳಕಂಡ ಲೆಕ್ಕ ಶೀರ್ಷಿಕೆಯಿಂದ ಮರು ಹೊಂದಾಣಿಕೆ ಮೂಲಕ ಭರಿಸುವುದು.

i) 5465–01–190–2–05–211–Investment–ಬದಲಿ ರಸ್ತೆಗಳು (P)ರೂ. 114.38 ಲಕ್ಷಗಳು.

3. ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂ.ಆಇ 142 ವೆಚ್ಚ–1/11 ದಿನಾಂಕ : 31–01–2011ರಲ್ಲಿ ನೀಡಿದ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಸಿ.ಎ. ಬಾಬುರವೀಂದ್ರನಾಥ್ ಪಟೇಲ್
ಸರ್ಕಾರದ ಅಧೀನ ಕಾರ್ಯದರ್ಶಿ
ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ

ಪಿ.ಆರ್. 519

ನಗರಾಭಿವೃದ್ಧಿ ಸಚಿವಾಲಯ

ವಿಷಯ : ಸೇಡಂ ನಗರದ ಸ್ಥಳೀಯ ಯೋಜನಾ ಪ್ರದೇಶದ ಮಹಾ ಯೋಜನೆಗೆ ಸರ್ಕಾರದ ಅಂತಿಮ ಅನುಮೋದನೆಯನ್ನು ನೀಡುವ ಬಗ್ಗೆ.

ಓದಲಾಗಿದೆ :

1. ಸರ್ಕಾರದ ಆದೇಶ ಸಂಖ್ಯೆ : ನಅಇ 129 ಬೆಮಪ್ರಾ 2007, ದಿನಾಂಕ : 15–06–2007.
2. ಸೇಡಂ ಪುರಸಭಾ ಯೋಜನಾ ಪ್ರಾಧಿಕಾರದ ಪತ್ರ ಸಂಖ್ಯೆ : ಪುಯೋಪ್ರಾ/ಸೇಡಂ.ಮ..ಯೋ/2009–10, ದಿನಾಂಕ : 24–02–2010.
3. ಸಹಾಯಕ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಗುಲ್ಬರ್ಗಾ ಇವರ ಪತ್ರ ಸಂಖ್ಯೆ : ನಗ್ರಾಯೋ/ಸನಿ.ಗು/ಮಾವ/2010–11/206, ದಿನಾಂಕ : 19/05/2010.
4. ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ ಇವರ ಏಕ ಕಡತ ಸಂಖ್ಯೆ : ನಗ್ರಾಯೋ/ಉನಿ (ಯೋವಿ) ಸೇಡಂ.ಮ.ಯೋ/29/2010, ದಿನಾಂಕ : 29–06–2010ರಲ್ಲಿ ನೀಡಿರುವ ಅಭಿಪ್ರಾಯ.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮಾಂಕ (1)ರ ಸರ್ಕಾರದ ಆದೇಶದಲ್ಲಿ, ಸೇಡಂ ನಗರದ ಸ್ಥಳೀಯ ಯೋಜನಾ ಪ್ರದೇಶದ ಮಹಾ ಯೋಜನೆಗೆ ತಾತ್ಕಾಲಿಕ ಅನುಮೋದನೆಯನ್ನು ನೀಡಲಾಗಿದೆ.

ಮೇಲೆ ಓದಲಾದ ಕ್ರಮಾಂಕ (2)ರ ಪತ್ರದಲ್ಲಿ ಸೇಡಂ ಪುರಸಭಾ ಯೋಜನಾ ಪ್ರಾಧಿಕಾರವು ಸೇಡಂ ನಗರದ ಸ್ಥಳೀಯ ಯೋಜನಾ ಪ್ರದೇಶಕ್ಕೆ ತಯಾರಿಸಿರುವ ಮಹಾ ಯೋಜನೆಯ ಕುರಿತು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 13(1)ರನ್ವಯ ಅಗತ್ಯ ಕ್ರಮ ಜರುಗಿಸಿ, ಮಹಾ ಯೋಜನೆಯ ನಕ್ಷೆಗಳನ್ನು ಹಾಗೂ ವರದಿಯನ್ನು ತಯಾರಿಸಿ ಸರ್ಕಾರದ ಅಂತಿಮ ಅನುಮೋದನೆಗೆ ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರಮಾಂಕ (3)ರ ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ಕಡತದಲ್ಲಿ ಸೇಡಂ ನಗರದ ಜನಸಂಖ್ಯೆಯು 2021ರಲ್ಲಿ 62,000ಗಳಷ್ಟು ಬೆಳವಣಿಗೆಯಾಗುವುದಾಗಿ ಅಂದಾಜಿಸಿ ಮಹಾ ಯೋಜನೆಯನ್ನು ತಯಾರಿಸಲಾಗಿದೆ. ಸೇಡಂ ನಗರದ ಸ್ಥಳೀಯ ಯೋಜನಾ ಪ್ರದೇಶದ ಒಟ್ಟು 809.00 ಹೆಕ್ಟೇರ್ ಪ್ರದೇಶವನ್ನು ನಗರದ ಅಭಿವೃದ್ಧಿಗಾಗಿ ನಗರೀಕರಣದ ಎಲ್ಲೆಯೆಂದು ಪ್ರಸ್ತಾಪಿಸಿ ಯೋಜನೆಯನ್ನು ರೂಪಿಸಲಾಗಿದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ (12)ರಲ್ಲಿನ ಅಂಶಗಳನ್ನು ಪರಿಗಣಿಸಿ, ಪಟ್ಟಣದ ಮುಂದಿನ ಯೋಜಿತ ಬೆಳವಣಿಗೆಗಳಿಗಾಗಿ ಪ್ರಸ್ತಾಪಿಸಿರುವ 809.00 ಹೆಕ್ಟೇರ್ ಪ್ರದೇಶದಲ್ಲಿ ವಸತಿಗಾಗಿ 310.00 ಹೆಕ್ಟೇರ್ (ಶೇ. 38.32), ವಾಣಿಜ್ಯಕ್ಕಾಗಿ 31.00 ಹೆಕ್ಟೇರ್ (ಶೇ. 3.83), ಕೈಗಾರಿಕೆಗಾಗಿ 145.00 ಹೆಕ್ಟೇರ್ (ಶೇ. 17.92) ಸಾರ್ವಜನಿಕ/ಅರೆಸಾರ್ವಜನಿಕಕ್ಕಾಗಿ 34.00 ಹೆಕ್ಟೇರ್ (ಶೇ. 4.20), ಉದ್ಯಾನವನ, ಆಟದ ಮೈದಾನ ಮತ್ತು ಬಯಲು ಪ್ರದೇಶಕ್ಕಾಗಿ 76.00 ಹೆಕ್ಟೇರ್ (ಶೇ.9.40), ಸಾರಿಗೆ/ಸಂಪರ್ಕ ವಲಯಕ್ಕೆ 211.00 ಹೆಕ್ಟೇರ್ (ಶೇ. 26.08), ನಾಗರೀಕ ಸೌಲಭ್ಯಕ್ಕೆ 2.00 ಹೆಕ್ಟೇರ್ (ಶೇ. 0.25) ಪ್ರದೇಶವನ್ನು ನಿಗದಿಪಡಿಸಿ ಮಹಾ ಯೋಜನೆಯನ್ನು ಅನುಷ್ಠಾನಕ್ಕೆ ತರಲು ಅಗತ್ಯವಿರುವ ವಲಯ ನಿಯಮಾವಳಿಗಳನ್ನು ರೂಪಿಸಲಾಗಿದ್ದು, ಸದರಿ ಮಹಾ ಯೋಜನೆಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 13(3)ರನ್ವಯ ಅಂತಿಮ ಅನುಮೋದನೆ ನೀಡಲು ಶಿಫಾರಸ್ಸು ಮಾಡಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ನಂತರ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ : ನಅಇ 87 ಗುಅಪ್ರಾ 2010, ಬೆಂಗಳೂರು, ದಿನಾಂಕ: 14–02–2011.

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸೇಡಂ ನಗರದ ಸ್ಥಳೀಯ ಯೋಜನಾ ಪ್ರದೇಶಕ್ಕೆ ರೂಪಿಸಿರುವ ಮಹಾ ಯೋಜನೆಗೆ ಈ ಕೆಳಕಂಡ ಷರತ್ತಿಗೊಳಪಟ್ಟು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 13(1)ರನ್ವಯ ಅಂತಿಮ ಅನುಮೋದನೆಯನ್ನು ನೀಡಲಾಗಿದೆ.

"ಈ ಆದೇಶದ ದಿನಾಂಕದಿಂದ 2 (ಎರಡು) ವರ್ಷಗಳವರೆಗೆ ಯೋಜನಾ ಪ್ರಾಧಿಕಾರವು ಯಾವುದೇ ತರಹದ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಸಲ್ಲಿಸಕೂಡದು"

ಮಹಾಯೋಜನೆಗೆ ಅಂತಿಮ ಅನುಮೋದನೆ ನೀಡಿದ ಗುರುತಾಗಿ ವರದಿ ಮತ್ತು ನಕ್ಷೆಗಳ ಮೇಲೆ ಸರ್ಕಾರದ ಮುದ್ರೆಯನ್ನು ಹಾಕಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಂ.ಎಂ.ಹಿರೇಮಠ
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ

ಪಿ.ಆರ್. 520

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ

ವಿಷಯ : ಮಂಗಳೂರಿನ ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರದ ಆವರಣದಲ್ಲಿ ನೂತನ ತಾರಾಲಯ (Planetarium) ಸ್ಥಾಪನೆಗೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ :
1. ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಗೆ ಸಂಬಂಧಿಸಿದಂತೆ ಸನ್ಮಾನ್ಯ ಮುಖ್ಯ ಮಂತ್ರಿಯವರ 2010-11ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 158.
2. ದಿನಾಂಕ : 03-02-2011 ರಂದು ನಡೆದ ಸಚಿವ ಸಂಪುಟದ ಸಭೆಯ ನಿರ್ಣಯ (ಪ್ರಕರಣ ಸಂಖ್ಯೆ : ಸಿ:60/2011).

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ : 1ರಲ್ಲಿ 2010-11ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 158 ರಲ್ಲಿ ಸನ್ಮಾನ್ಯ ಮುಖ್ಯ ಮಂತ್ರಿಯವರು "ಮಂಗಳೂರು ಬಳಿಯ ಪಿಲಿಕುಳದಲ್ಲಿ ನೂತನ ತಾರಾಲಯವನ್ನು ಸ್ಥಾಪಿಸಲು ರೂ. 1.00 ಕೋಟಿ ನೀಡಲಾಗುವುದು" ಎಂದು ಘೋಷಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ : 2ರಲ್ಲಿ ದಿನಾಂಕ : 03-02-2011 ರಂದು ನಡೆದ ಸಚಿವ ಸಂಪುಟದ 2011ನೇ ಸಾಲಿನ 3ನೇ ಸಭೆಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಗೆ ಒಳಪಡುವ ಮಂಗಳೂರಿನ ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರದ ವತಿಯಿಂದ ವಿಜ್ಞಾನ ಕೇಂದ್ರದ ಆವರಣದಲ್ಲಿ ರೂ. 15.50 ಕೋಟಿಗಳ ವೆಚ್ಚದಲ್ಲಿ ಕೈಗೆತ್ತಿಕೊಳ್ಳಲು ಉದ್ದೇಶಿಸಿರುವ ನೂತನ ತಾರಾಲಯ (Planetarium) ಸ್ಥಾಪನೆಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಿರುತ್ತದೆ.

ಸಚಿವ ಸಂಪುಟದ ನಿರ್ಣಯದನ್ವಯ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಗೆ ಒಳಪಡುವ ಮಂಗಳೂರಿನ ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರದ ವತಿಯಿಂದ ವಿಜ್ಞಾನ ಕೇಂದ್ರದ ಆವರಣದಲ್ಲಿ ರೂ. 15.50 ಕೋಟಿಗಳ ವೆಚ್ಚದಲ್ಲಿ ನೂತನ ತಾರಾಲಯ ಸ್ಥಾಪನೆಗೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ ಪರಿಶೀಲಿಸಿದ ಸರ್ಕಾರ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ವಿಯಇ 182 ವಿತ್ರಮ 2009, ಬೆಂಗಳೂರು, ದಿನಾಂಕ: 09-02-2011.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಗೆ ಒಳಪಡುವ ಮಂಗಳೂರಿನ ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರ ಸೊಸೈಟಿ (ರಿ) ವತಿಯಿಂದ ಪ್ರಾದೇಶಿಕ ವಿಜ್ಞಾನ ಕೇಂದ್ರದ ಆವರಣದಲ್ಲಿ ರೂ. 15.50 ಕೋಟಿಗಳ ವೆಚ್ಚದಲ್ಲಿ ಕೈಗೆತ್ತಿಕೊಳ್ಳಲು ಉದ್ದೇಶಿಸಿರುವ ನೂತನ ತಾರಾಲಯವನ್ನು (Planetarium) ಕೆಳಕಂಡ ಯೋಜನಾ ವೆಚ್ಚದೊಂದಿಗೆ ಸ್ಥಾಪಿಸಲು ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ.

(ರೂ. ಕೋಟಿಗಳಲ್ಲಿ)

ಆರ್ಥಿಕ ಸಾಲು	ಪ್ರಾದೇಶಿಕ ವಿಜ್ಞಾನ ಕೇಂದ್ರ ಹಾಗೂ ಜಿಲ್ಲಾಧಿಕಾರಿಗಳು ಸಂಗ್ರಹಿಸಬೇಕಾದ ವಂತಿಗೆ	ರಾಜ್ಯ ಸರ್ಕಾರದ ಪಾಲು	ಒಟ್ಟು ಮೊತ್ತ
2010-11	ರೂ. 1.50 ಕೋಟಿ (3 ಎಕರೆ ಜಮೀನಿನ ಬೆಲೆ)	1.00	2.50
2011-12	ರೂ. 1.50 ಕೋಟಿ (ಜಿಲ್ಲಾಧಿಕಾರಿಗಳು ಮತ್ತು ಸ್ಥಳೀಯ ಸಂಸ್ಥೆಗಳಿಂದ ಸಂಗ್ರಹಿಸಬೇಕಾದ ಮೊತ್ತ)	5.00	6.50
2012-13	ರೂ. 1.50 ಕೋಟಿ (ಜಿಲ್ಲಾಧಿಕಾರಿಗಳು ಮತ್ತು ಸ್ಥಳೀಯ ಸಂಸ್ಥೆಗಳಿಂದ ಸಂಗ್ರಹಿಸಬೇಕಾದ ಮೊತ್ತ)	5.00	6.50
ಒಟ್ಟು	ರೂ. 4.50 ಕೋಟಿ	11.00	15.50

ಈ ತಾರಾಲಯವನ್ನು ಮಂಗಳೂರಿನ ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರ ಸೊಸೈಟಿಯ ವಶದಲ್ಲಿರುವ 3 ಎಕರೆ ಜಮೀನಲ್ಲಿ ಸ್ಥಾಪಿಸತಕ್ಕದ್ದು.

ಮಂಗಳೂರಿನ ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರ ಸೊಸೈಟಿಯು ರೂ. 15.50 ಕೋಟಿಗಳ ಮೊತ್ತವನ್ನು ತಾರಾಲಯದ ನಿರ್ಮಾಣಕ್ಕಾಗಿ ಬಳಸತಕ್ಕದ್ದು.

ಈ ಆದೇಶವನ್ನು ದಿನಾಂಕ : 03-02-2011 ರಂದು ನಡೆದ ಸಚಿವ ಸಂಪುಟ ಸಭೆಯ ತೀರ್ಮಾನದನ್ವಯ ಹೊರಡಿಸಲಾಗಿದೆ. (ಪ್ರಕರಣ ಸಂಖ್ಯೆ : ಸಿ:60/2011)

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಕೆ.ಬೋರಲಿಂಗಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ
ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ,
ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ

ಪಿ.ಆರ್. 521

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ

ವಿಷಯ : ಕರ್ನಾಟಕ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ ಮಾಸ್ಟರ್ ಕಂಟ್ರೋಲ್ ಫೆಸಿಲಿಟಿ (Master Control Centre) ಸ್ಥಾಪನೆಗೆ 2010-11ನೇ ಸಾಲಿನಲ್ಲಿ ಹೆಚ್ಚುವರಿ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ :
1. 2010-11ನೇ ಸಾಲಿನಲ್ಲಿ ಸನ್ಮಾನ್ಯ ಮುಖ್ಯ ಮಂತ್ರಿಯವರಿಂದ ಮಾಸ್ಟರ್ ಕಂಟ್ರೋಲ್ ಫೆಸಿಲಿಟಿ ಸ್ಥಾಪಿಸುವ ಬಗ್ಗೆ ಆಯವ್ಯಯ ಭಾಷಣ ಖಂಡಿಕೆ 159ರಲ್ಲಿ ಘೋಷಣೆ.
2. ಸರ್ಕಾರಿ ಆದೇಶ ಸಂಖ್ಯೆ : ವಿಯಇ 10 ಬಉಕೋ 2009, ದಿನಾಂಕ : 04-06-2010.
3. ನಿರ್ದೇಶಕರು, ಕರ್ನಾಟಕ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ, ಬೆಂಗಳೂರು, ಇವರ ಪತ್ರ ಸಂಖ್ಯೆ : KSNDMC/RGRHCL/110/2010-11/548, ದಿನಾಂಕ : 18-12-2010.
4. ಸರ್ಕಾರಿ ಆದೇಶ ಸಂಖ್ಯೆ : FD 274 BRS 2011, ದಿನಾಂಕ : 02-02-2011.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ : (1)ರಲ್ಲಿನ 2010–11ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 159ರಲ್ಲಿ ಸನ್ಮಾನ್ಯ ಮುಖ್ಯ ಮಂತ್ರಿಯವರು ನೈಸರ್ಗಿಕ ವಿಪತ್ತುಗಳ ಮುನ್ಸೂಚನೆ ನೀಡುವ ಮಾಸ್ಟರ್ ಕಂಟ್ರೋಲ್ ಫೆಸಿಲಿಟಿ (Master Control Centre) ಸ್ಥಾಪಿಸುವ ಬಗ್ಗೆ ಆಯವ್ಯಯ ಭಾಷಣ ಖಂಡಿಕೆ 159ರಲ್ಲಿ ಘೋಷಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ : (2)ರಲ್ಲಿನ ಸರ್ಕಾರಿ ಆದೇಶದಲ್ಲಿ 2010ನೇ ಸಾಲಿನ ದಿನಾಂಕ : 24–05–2010ರಂದು ನಡೆದ ಸಚಿವ ಸಂಪುಟದ 7ನೇ ಸಭೆಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಅಂಗ ಸಂಸ್ಥೆಯಾದ ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪಗಳ ಉಸ್ತುವಾರಿ ಕೇಂದ್ರದ ವತಿಯಿಂದ ರೂ. 872.50 ಲಕ್ಷಗಳಲ್ಲಿ ಕರ್ನಾಟಕ ನೈಸರ್ಗಿಕ ವಿಕೋಪಗಳ ಉಸ್ತುವಾರಿ ಕೇಂದ್ರದ (Master Control Facility) ಸ್ಥಾಪನೆಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರಲ್ಲಿನ ಪತ್ರದಲ್ಲಿ ನಿರ್ದೇಶಕರು, ಕರ್ನಾಟಕ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ, ಬೆಂಗಳೂರು, ಇವರು ಮಾಸ್ಟರ್ ಕಂಟ್ರೋಲ್ ಫೆಸಿಲಿಟಿ ಸ್ಥಾಪನೆಗೆ ಕಟ್ಟಡ ನಿರ್ಮಾಣ, ಯಂತ್ರೋಪಕರಣ ಮುಂತಾದವುಗಳಿಗೆ ಅಂದಾಜು ರೂ. 872.50 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ. ಆದ್ದರಿಂದ 2010–11ನೇ ಸಾಲಿಗೆ ಬೇಕಾದ ರೂ. 402.74 ಲಕ್ಷಗಳನ್ನು ಬಿಡುಗಡೆ ಮಾಡುವಂತೆ ಪ್ರಸ್ತಾವನೆ ಸಲ್ಲಿಸಿ ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (4)ರಲ್ಲಿನ ಆದೇಶದಲ್ಲಿ ಕರ್ನಾಟಕ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ ವತಿಯಿಂದ ಮಾಸ್ಟರ್ ಕಂಟ್ರೋಲ್ ಫೆಸಿಲಿಟಿ (Master Control Centre) ಸ್ಥಾಪನೆಯ ಉದ್ದೇಶಕ್ಕಾಗಿ 2010–11ನೇ ಸಾಲಿನ ಪೂರಕ ಅಂದಾಜುಗಳ 3ನೇ ಕಂತಿನಲ್ಲಿ ಲೆಕ್ಕಶೀರ್ಷಿಕೆ 3455–00–200–0–01 Drought Monitoring Cell-059-Other Expenses (Plan) ಇದರಡಿ ಹೆಚ್ಚುವರಿಯಾಗಿ ರೂ. 100.00 ಲಕ್ಷಗಳನ್ನು ಆರ್ಥಿಕ ಇಲಾಖೆಯು ಬಿಡುಗಡೆ ಮಾಡಿರುವುದನ್ನು ಪರಿಶೀಲಿಸಿದ ಸರ್ಕಾರ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ವಿಯಇ 10 ಬಉಕೋ 2009 (ಭಾಗ), ಬೆಂಗಳೂರು, ದಿನಾಂಕ: 07–02–2011.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಅಂಗ ಸಂಸ್ಥೆಯಾದ ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪಗಳ ಉಸ್ತುವಾರಿ ಕೇಂದ್ರ, ಬೆಂಗಳೂರು, ಈ ಸಂಸ್ಥೆ ವತಿಯಿಂದ ಮಾಸ್ಟರ್ ಕಂಟ್ರೋಲ್ ಫೆಸಿಲಿಟಿ (Master Control Centre) ಕಟ್ಟಡ ನಿರ್ಮಾಣ, ಯಂತ್ರೋಪಕರಣ ಮುಂತಾದವುಗಳ ಸ್ಥಾಪನೆಗೆ ಲೆಕ್ಕಶೀರ್ಷಿಕೆ 3455–00–200–0–01 Drought Monitoring Cell-059-Other Expenses (Plan) ಇದರಡಿ ಹೆಚ್ಚುವರಿಯಾಗಿ ರೂ. 100.00 ಲಕ್ಷಗಳನ್ನು (ರೂಪಾಯಿ ನೂರು ಲಕ್ಷಗಳು ಮಾತ್ರ) ನಿರ್ದೇಶಕರು, ಕರ್ನಾಟಕ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ, ಬೆಂಗಳೂರು, ಇವರಿಗೆ ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

1) ಈ ಮೊತ್ತವನ್ನು 2010–11ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ 3455–00–200–0–01 Drought Monitoring Cell-059-Other Expenses (Plan) ಇದರಡಿ ಭರಿಸತಕ್ಕದ್ದು.
2) ನಿರ್ದೇಶಕರು, ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ, ಬೆಂಗಳೂರು, ಇವರು ಸ್ವೀಕೃತಿ ರಶೀದಿಯಲ್ಲಿ ಹಣವನ್ನು ಸರ್ಕಾರದ ಅಧೀನ ಕಾರ್ಯದರ್ಶಿಯವರ ಮೇಲುರಜುವಿನೊಂದಿಗೆ ಹಣ ಸೆಳೆಯಬಹುದು.
3) ಈಗ ಬಿಡುಗಡೆ ಮಾಡಿದ ಹಣವನ್ನು ಅದೇ ಉದ್ದೇಶಕ್ಕೆ ಉಪಯೋಗಿಸತಕ್ಕದ್ದು ಮತ್ತು ಸಂಪೂರ್ಣವಾಗಿ ಉಪಯೋಗ ಮಾಡಿದ ಬಗ್ಗೆ ಪ್ರಮಾಣ ಪತ್ರ ಹಾಗೂ ಆಡಿಟ್ ಆದ ಲೆಕ್ಕ ಪತ್ರಗಳನ್ನು ದೃಢೀಕರಣದೊಂದಿಗೆ ದಿನಾಂಕ : 30–05–2011ರ ಒಳಗೆ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.
4) ಈಗ ಬಿಡುಗಡೆ ಮಾಡಿದ ಹಣವನ್ನು ಉದ್ದೇಶಿತ ಯೋಜನೆಗೆ ಮಾತ್ರ ಉಪಯೋಗಿಸತಕ್ಕದ್ದು, ಹಾಗೂ ಈ ಹಣವನ್ನು ಬೇರೆ ಯೋಜನೆಗೆ ಸರ್ಕಾರದ ಪೂರ್ವಾನುಮತಿ ಇಲ್ಲದೆ ವರ್ಗಾಯಿಸಬಾರದು.
5) ಅನುದಾನವನ್ನು ಬಳಸದೇ ಬ್ಯಾಂಕಿನಲ್ಲಿ ಠೇವಣಿ ಮಾಡಿದ ಪಕ್ಷದಲ್ಲಿ ಅದನ್ನು ಸರ್ಕಾರದ ಗಮನಕ್ಕೆ ತರತಕ್ಕದ್ದು ಇಲ್ಲವಾದಲ್ಲಿ ಅಂತಹ ಠೇವಣಿ ಮೊತ್ತಕ್ಕೆ ದೊರೆಯುವ ಬಡ್ಡಿಯನ್ನು ಸಂಸ್ಥೆಗೆ ಆದಾಯವೆಂದು ಪರಿಗಣಿಸಿ, ಮುಂದೆ ಅನುದಾನ ಬಿಡುಗಡೆ ಸಂದರ್ಭದಲ್ಲಿ ಸದರಿ ಮೊತ್ತವನ್ನು ಕಡಿತಗೊಳಿಸಲಾಗುವುದು.
6) ಉದ್ದೇಶಿತ ಕಾರ್ಯಕ್ರಮಕ್ಕೆ ಬಿಡುಗಡೆ ಮಾಡಲಾದಂತಹ ಅನುದಾನದ ಲೆಕ್ಕಪತ್ರಗಳನ್ನು ಮಂಜೂರು ಮಾಡುವ ಅಧಿಕಾರಿಯು ಸಮೀಕ್ಷೆಗಾಗಿ ಕೋರಿದ್ದಲ್ಲಿ ತಪ್ಪದೇ ಒದಗಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : FD 37 Exp-2/2011, ದಿನಾಂಕ : 03–02–2011ರಲ್ಲಿ ನೀಡಲಾದ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಕೆ.ಬೋರಲಿಂಗಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ
ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ,
ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ

ಪಿ.ಆರ್. 522

ENERGY SECRETARIAT

Sub: Enhancement of wind power capacity from 6.00 MW to 77.4 MW in favour of M/s Sarjan Realities Limited-reg.

Read:
1. Government Order No : EN 60 NCE 2005, dated : 22-03-2005.
2. Letter No : KRED/08/SRL-Vol-IV/2010/1755 dated : 08/10-06-2010 received from the Managing Director, Karnataka Renewable Energy Development Limited, Bangalore.
3. Letter No : KRED/08/SRL-Vol-IV/2010/2860 dated : 08-10-2010 received from the Managing Director, Karnataka Renewable Energy Development Limited, Bangalore.

Preamble:

In the Government Order read at (1) above, sanction has been accorded for implementation of 34.8 MW capacity wind power project at Bellary, Chitradurga and Davanagere Districts in favour of M/s Sarjan Realities Limited.

The Managing Director, Karnataka Renewable Energy Development Limited, Bangalore vide his letter read at (2) above, has recommended to enhance the wind power capacity from 20.4 MW to 216 MW (part capacity of 34.8 MW) at Gurushantanahalli, Kamabatarahalli, Jittinkatti, North RF, Chikka Tanda, Balenahalli (Jittinkatti South RF), Kanchikeri, Chinnapura (Uchangidurga RF) in Davanagere District. Further the Managing Director, Karnataka Renewable Energy Development Limited, Bangalore vide his letter read at (3) above, has partially modified the earlier recommendation and recommended for enhancement of capacity from 6.00 MW (part capacity of 34.8 MW) to 77.4 MW at Machinahalli, Harapanahalli, Kambatrahalli, Gundagthi villages (4.8 MW) and Jittinakatti village (1.2 MW) of Davanagere District in favour of M/s Sarjan Realities Limited.

The proposal has been examined in detail and issued following Order :-

Government Order No.: EN 246 NCE 2010, Bangalore, Dated: 15-02-2011

Government accords approval for enhancement of wind power capacity from 6.00 MW (4.8+1.2=6MW part capacity of 34.8 MW) to 77.4 MW at Machinahalli, Harapanahalli, Kambatrahalli, Gundagthi villages (4.8 MW) and Jittinakatti village (1.2 MW) of Davanagere District in favour of M/s Sarjan Realities Limited as detailed below :-

Geographical Area details	Sanctioned capacity in MW	Enhancement proposed in stage-1	No. of WTGs	Sy.No. & villages	Total capacity including proposed enhancement
A large plateau is spread across and situated between Gurusantanahalli and Kambatarahalli. The area is narrated as open scrub with 722, 677, 701 and 777m peaks. The entire area is covered in the following geographical co-ordinates :- Lattitude : 14°41'54"-45'N Longitude : 75°55'76E Ridge Peaks : 722,677,701 & 777m elevation Toposheet No : 48N/14	4.8 MW	41.1 MW	21*2.1 MW & 3*600 KW	1. Machihalli Sy.No. 353. 2. Harapanahalli Sy.No. 492 3. Kambatrahalli Sy.No. 01 4. Gundagathi Sy.No. 324	45.9 MW

Geographical Area details	Sanctioned capacity in MW	Enhancement proposed in stage-1	No. of WTGs	Sy.No. & villages	Total capacity including proposed enhancement
On east west and Northwest-South oriented two ridge are located on the east of Chikkatanda and Barenahalli. The area is narrated as Jittinakatti south RF and has 692 m peak. The potential area is covered in the following geographical co-ordinates :- Lattitude : 14°38'12"-41'N Longitude : 75°58'27-76°E Ridge Peaks : 692 elevation Toposheet No : 48N/14	1.20	30.3	15*2.1 MW	Jittinakatti South RF	31.5

The Government has reserved the right to Cancel/Modify this Order.

The other terms and conditions of the allotment Order read at (1) above shall continue as it is.

By Order and in the name of the Governor of Karnataka

Suresh B. Krishnappanavar
Under Secretary to Government,
Energy Department

PR No. 523

ಇಂಧನ ಸಚಿವಾಲಯ

ವಿಷಯ : ಮೆ॥ ಶ್ರೀ ಸ್ವರ್ಣ ಗ್ರೀನ್ ಪವರ್ ಇವರಿಗೆ ಹಂಚಿಕೆಯಾಗಿ, ರದ್ದುಪಡಿಸಲಾಗಿರುವ 7.00 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ರದ್ದತಿ ಆದೇಶವನ್ನು ಹಿಂಪಡೆದು, ಯೋಜನೆಯ ಅನುಷ್ಠಾನಕ್ಕಾಗಿ ಕಾಲಾವಕಾಶ ವಿಸ್ತರಣೆ ಬಗ್ಗೆ

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ: ಇಂಇ 216 ಎನ್‌ಸಿಇ 2001, ದಿನಾಂಕ: 19-07-2002.
2. ಸರ್ಕಾರದ ಆದೇಶ ಸಂಖ್ಯೆ: ಇಎನ್ 80 ಎನ್‌ಸಿಇ 2008, ದಿನಾಂಕ: 22-02-2008.
3. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/06//ಎಸ್‌ಹೆಚ್‌ಪಿ/08/2029 ದಿನಾಂಕ: 02/03.12.2008.
4. ಕಾರಣ ಕೇಳುವ ನೋಟೀಸು ಸಂಖ್ಯೆ: ಇಎನ್ 492 ಎನ್‌ಸಿಇ 2008 ದಿನಾಂಕ: 27.12.2008.
5. ಸರ್ಕಾರಿ ಆದೇಶ ಸಂಖ್ಯೆ: ಇಎನ್ 492 ಎನ್‌ಸಿಇ 2008 ದಿನಾಂಕ: 08.05.2009.
6. ಮೆ॥ ಶ್ರೀ ಸ್ವರ್ಣ ಗ್ರೀನ್ ಪವರ್ ಇವರ ಪತ್ರ ದಿನಾಂಕ: 06.07.2009.
7. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರಗಳ ಸಂಖ್ಯೆ: ಕೆಆರ್‌ಇಡಿ/08/ಎಸ್‌ಎಸ್‌ಆರ್‌ಪಿ-ಎಸ್‌ಆರ್‌ಆರ್/2009/2734 ದಿನಾಂಕ: 22/24.08.2009, ಸಂಖ್ಯೆ: ಕೆಆರ್‌ಇಡಿ/08/ ಎಸ್‌ಎಸ್‌ಜಿಪಿ /2009/2919 ದಿನಾಂಕ: 05/07.09.2009 ಮತ್ತು ಕೆಆರ್‌ಇಡಿ /08/ಎಸ್‌ಜಿಪಿ/2009/3728 ದಿನಾಂಕ: 12/13.11.2009.
8. ಸರ್ಕಾರದ ಪತ್ರ ಸಂಖ್ಯೆ: ಇಎನ್ 438 ಎನ್‌ಸಿಇ 2009 ದಿನಾಂಕ: 26.12.2009.
9. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/08/ಎಸ್‌ಜಿಪಿ/2009/73 ದಿನಾಂಕ: 08/12.01.2010.
10. ದಿನಾಂಕ: 19.04.2010 ರಂದು ನಡೆದ ರಿವ್ಯೂ ಸಭೆಯ ನಡವಳಿಗಳು.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಆದೇಶದಲ್ಲಿ ಮೆ॥ ಎಸ್.ಆರ್.ಆರ್. ಪವರ್ ಜೆನ್ ಕಂಪನಿಗೆ 7.00 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಬೆಳಗಾಂ ಜಿಲ್ಲೆಯ ರಾಯಭಾಗ ತಾಲ್ಲೂಕಿನ ಮಾವಿನಹುಂಡದಲ್ಲಿ ಕೆಲವೊಂದು ನಿಬಂಧನೆಗಳಿಗೊಳಪಟ್ಟು ಹಂಚಿಕೆ ಮಾಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಆದೇಶದಲ್ಲಿ ಮೆ॥ ಎಸ್.ಆರ್.ಆರ್. ಪವರ್ ಜೆನ್ ಕಂಪನಿಗೆ ಹಂಚಿಕೆಯಾದ ಸಂಪೂರ್ಣ 7.00 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಮೆ॥ ಶ್ರೀ ಸ್ವರ್ಣ ಗ್ರೀನ್ ಪವರ್ ಇವರಿಗೆ ವರ್ಗಾವಣೆ ಮಾಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (3) ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ಬೆಂಗಳೂರು ಇವರು ಸದರಿ ಅಭಿವೃದ್ಧಿದಾರರಿಗೆ ಯೋಜನೆ ಹಂಚಿಕೆಯಾಗಿ 7 ವರ್ಷ ಕಳೆದರೂ ಯೋಜನೆಯ ಅನುಷ್ಠಾನದ ನಿಟ್ಟಿನಲ್ಲಿ ಯಾವುದೇ ಪ್ರಗತಿ ಸಾಧಿಸಿರುವುದಿಲ್ಲವೆಂದು ತಿಳಿಸುತ್ತಾ, ಸದರಿ ಯೋಜನೆಯ ಹಂಚಿಕೆ ಆದೇಶವನ್ನು ರದ್ದು ಪಡಿಸುವಂತೆ ಹಾಗೂ ಒಡಂಬಡಿಕೆಯನ್ನು ಮುಕ್ತಾಯಗೊಳಿಸುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಯೋಜನೆಯ ಅನುಷ್ಠಾನಕ್ಕಾಗಿ ಅನುಮತಿ ನೀಡಿ 7 ವರ್ಷ ಕಳೆದರೂ ಇದುವರೆಗೂ ಅನುಷ್ಠಾನ ನಿಟ್ಟಿನಲ್ಲಿ ಮೆ॥ ಶ್ರೀ ಸ್ವರ್ಣ ಗ್ರೀನ್ ಪವರ್ ಕಂಪನಿಯು ಯಾವುದೇ ಕ್ರಮ ಕೈಗೊಳ್ಳದೇ ಇರುವುದರಿಂದ ಮೇಲೆ ಓದಲಾದ ಕ್ರಮ ಸಂಖ್ಯೆ (4)ರ ಕಾರಣ ಕೇಳುವ ನೋಟೀಸಿನಲ್ಲಿ ಯೋಜನೆಯ ಹಂಚಿಕೆಯನ್ನು ಏಕೆ ರದ್ದು ಪಡಿಸಬಾರದೆಂಬುದಕ್ಕೆ ಕಾರಣವನ್ನು ಕೇಳಲಾಗಿತ್ತು. ಆದರೆ, ಕಾರಣ ಕೇಳುವ ನೋಟೀಸು ಲಕೋಟೆಯು 'No such firm in this door number return to sender' ಎಂದು ವಾಪಸ್ ಬಂದಿರುತ್ತದೆ. ಇದರಿಂದಾಗಿ ಅಭಿವೃದ್ಧಿದಾರರು ಸದರಿ ವಿಳಾಸದಲ್ಲಿ ವಾಸ್ತವ್ಯ ಇಲ್ಲದಿರುವುದು ಹಾಗೂ ಸುಮಾರು 7 ವರ್ಷಗಳಿಂದ ಯೋಜನೆಯ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಮೆ॥ ಶ್ರೀ ಸ್ವರ್ಣ ಗ್ರೀನ್ ಪವರ್ ಕಂಪನಿಯವರು ಯಾವುದೇ ಪ್ರಗತಿ ಸಾಧಿಸಿಲ್ಲದಿರುವುದರಿಂದ ಮೇಲೆ ಓದಲಾದ ಕ್ರಮ ಸಂಖ್ಯೆ (5)ರ ಆದೇಶದಲ್ಲಿ ಮೆ॥ ಶ್ರೀ ಸ್ವರ್ಣ ಗ್ರೀನ್ ಪವರ್ ಇವರಿಗೆ ಬೆಳಗಾವಿ ಜಿಲ್ಲೆಯ ರಾಯಭಾಗ ತಾಲ್ಲೂಕಿನ ಮಾವಿನಹುಂಡದಲ್ಲಿ ಹಂಚಿಕೆ ಮಾಡಿದ್ದ 7.00 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಹಂಚಿಕೆ ಆದೇಶ ಮತ್ತು ಈ ಸಂಬಂಧ ಮಾಡಿಕೊಂಡಿದ್ದು ಒಡಂಬಡಿಕೆಯನ್ನು ರದ್ದು ಪಡಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (6)ರ ಪತ್ರದಲ್ಲಿ ಮೆ॥ ಶ್ರೀ ಸ್ವರ್ಣ ಗ್ರೀನ್ ಪವರ್ ಇವರು ಯೋಜನೆಯ ಅನುಷ್ಠಾನದ ನಿಟ್ಟಿನಲ್ಲಿ ಪ್ರಗತಿ ಸಾಧಿಸಿದ್ದು, ಯೋಜನೆಯ ರದ್ದತಿ ಆದೇಶವನ್ನು ಹಿಂಪಡೆಯಬೇಕೆಂದು ಕೋರಿದ್ದಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (7)ರ ಪತ್ರಗಳಲ್ಲಿ ಯೋಜನೆಯ ಅನುಷ್ಠಾನದ ನಿಟ್ಟಿನಲ್ಲಿ ಅಭಿವೃದ್ಧಿದಾರರು ಎಲ್ಲಾ ಸಿದ್ಧತೆಗಳನ್ನು ಮಾಡಿಕೊಂಡಿದ್ದು, ಒಂದು ವರ್ಷದ ಕಾಲಾವಧಿಯಲ್ಲಿ ವಿದ್ಯುತ್ ಉತ್ಪಾದನೆಯನ್ನು ಪ್ರಾರಂಭಿಸುವುದಾಗಿ ತಿಳಿಸಿರುವ ಹಿನ್ನೆಲೆಯಲ್ಲಿ ಈ ಯೋಜನೆಯನ್ನು ಪುನಶ್ಚೇತನಗೊಳಿಸುವಂತೆ ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಇ.ಡಿ.ಎಲ್. ಇವರು ಅಭಿವೃದ್ಧಿದಾರರ ಕೋರಿಕೆಯ ಮೇರೆಗೆ ಶಿಫಾರಸ್ಸು ಮಾಡಿ ಸರ್ಕಾರಕ್ಕೆ ಕಳುಹಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (8)ರ ಸರ್ಕಾರಿ ಪತ್ರದಲ್ಲಿ ಸದರಿ ಅಭಿವೃದ್ಧಿದಾರರು ಯೋಜನೆಯ ಕುರಿತು ಡಿ.ಪಿ.ಆರ್. ತಯಾರಿಸಿದ್ದಲ್ಲಿ ಅದರ ಪ್ರತಿಯನ್ನು ಒದಗಿಸುವಂತೆ ಕೆ.ಆರ್.ಇ.ಡಿ.ಎಲ್.ನ ವ್ಯವಸ್ಥಾಪಕ ನಿರ್ದೇಶಕರನ್ನು ಕೋರಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (9)ರ ಪತ್ರದೊಂದಿಗೆ ಕೆ.ಆರ್.ಇ.ಡಿ.ಎಲ್. ವ್ಯವಸ್ಥಾಪಕ ನಿರ್ದೇಶಕರು ಡಿ.ಪಿ.ಆರ್.ನ್ನು ಕಳುಹಿಸಿಕೊಟ್ಟಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (10)ರಲ್ಲಿ ನಡೆದ ರಿವ್ಯೂ ಸಭೆಯ ನಿರ್ಣಯವು ಈ ಕೆಳಗಿನಂತಿದೆ.

> "It has a 7 MW capacity Wind Project at Mavinahunda, Belgaum District. The appraisal on the project was made to the committee by GGM, stating that M/s Swarna Green Power obtained 7 MW wind power project under transfer mode and has a valid agreement till 2nd April 2011. Further

the company has possessed the private land area about 35 acres. WTG locations are finalised after micro-siting, power evacuation approval obtained and other related work is in progress. The representative of the firm presented in the meeting that the project finance is being arranged and the project will be commissioned by April 2011 and other requirement components of the projects are in the advanced stage.

Referring to the above the committee permitted the firm to develop the project before March 2011 instead of April 2011 and imposed a binding condition, it has to pay a penalty of Rs. 1.00 lakh per MW to KREDL. Project remained un-commissioned by end of March 2011, the amount will be transferred to Akshaya Shakthi Nidhi in KREDL and the project will be cancelled."

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಈ ಕೆಳಗಿನಂತೆ ಆದೇಶಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ: ಇಎನ್ 438 ಎನ್‌ಸಿಇ 2009, ಬೆಂಗಳೂರು, ದಿನಾಂಕ 28-02-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರದ ಆದೇಶ ಸಂಖ್ಯೆ: ಇಎನ್ 492 ಎನ್‌ಸಿಇ 2008 ದಿನಾಂಕ: 08.05.2009ರಲ್ಲಿ ಮೆ॥ ಶ್ರೀ ಸ್ವರ್ಣ ಗ್ರೀನ್ ಪವರ್ ಇವರಿಗೆ ಬೆಳಗಾವಿ ಜಿಲ್ಲೆಯ ರಾಯಭಾಗ ತಾಲ್ಲೂಕಿನ ಮಾವಿನಹುಂಡದಲ್ಲಿ ರದ್ದುಗೊಳಿಸಿರುವ 7.00 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ರದ್ದತಿ ಆದೇಶವನ್ನು ಹಿಂಪಡೆದು ಯೋಜನೆಯನ್ನು ಪೂರ್ವಸ್ಥಿತಿಗೆ ತರಲಾಗಿದೆ. ಈ ಯೋಜನೆಯ ಅನುಷ್ಠಾನಕ್ಕೆ ಕಾಲಾವಕಾಶವನ್ನು ದಿನಾಂಕ: 30.04.2011 ರವರೆಗೆ ಈ ಕೆಳಗಿನ ನಿಬಂಧನೆಗಳಿಗೊಳಪಟ್ಟು ವಿಸ್ತರಿಸಲಾಗಿದೆ.

1. ಪ್ರತಿ ಮೆಗಾ ವ್ಯಾಟ್ ಒಂದಕ್ಕೆ ರೂ. 1.00 ಲಕ್ಷದಂತೆ ದಂಡ ಶುಲ್ಕವನ್ನು ಪಾವತಿಸತಕ್ಕದ್ದು.
2. ಈ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಆದೇಶದಲ್ಲಿನ ಇತರೆ ನಿಬಂಧನೆಗಳು ಯಥಾವತ್ತಾಗಿ ಮುಂದುವರೆಯುತ್ತವೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಸುರೇಶ್ ಬಿ. ಕೃಷ್ಣಪ್ಪನವರ್
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ

ಪಿ.ಆರ್. 631

ಕಂದಾಯ ಸಚಿವಾಲಯ

ವಿಷಯ : ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಕೆ. ನಿಡುಗಣೆ ಗ್ರಾಮದ ಸ.ನಂ.1/11ರಲ್ಲಿ 4.60 ಎಕರೆ ಜಮೀನನ್ನು ಕೇಂದ್ರೀಯ ವಿದ್ಯಾಲಯಕ್ಕೆ ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ : ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ ಇವರ ಪತ್ರ ಸಂಖ್ಯೆ: ಜಾಗ (1) ಮಂಜೂರಾತಿ-13/06-07, ದಿ: 19.01.2010.

ಪ್ರಸ್ತಾವನೆ:

ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ ಇವರು ಮೇಲೆ ಓದಲಾದ ದಿ: 19.01.2010ರ ಪತ್ರದಲ್ಲಿ ಮಡಿಕೇರಿ ತಾಲ್ಲೂಕು, ಕೆ. ನಿಡುಗಣೆ ಗ್ರಾಮದ ಸ.ನಂ.1/11ರಲ್ಲಿ 4.60 ಎಕರೆ ಜಮೀನನ್ನು ಕೇಂದ್ರಿಯ ವಿದ್ಯಾಲಯಕ್ಕೆ ಮಂಜೂರು ಮಾಡುವ ಬಗ್ಗೆ ಸರ್ಕಾರದ ಆದೇಶ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಜಿಲ್ಲಾಧಿಕಾರಿಗಳ ವರದಿಯನ್ವಯ ಮಡಿಕೇರಿ ತಾಲ್ಲೂಕು, ಕೆ. ನಿಡುಗಣೆ ಗ್ರಾಮದ ಸ.ನಂ.1/11ರ ಜಮೀನಿನ ಪೈಕಿ 4 ಎಕರೆ 60 ಸೆಂಟ್ ಜಮೀನನ್ನು ಕೇಂದ್ರಿಯ ವಿದ್ಯಾಲಯಕ್ಕೆ ಮಂಜೂರು ಮಾಡಲು ಕೇಂದ್ರಿಯ ವಿದ್ಯಾಲಯ, ಪ್ರಾದೇಶಿಕ ಕಛೇರಿ, ಬೆಂಗಳೂರು ಇವರು ಕೋರಿರುತ್ತಾರೆ. ಕರ್ನಾಟಕ ಭೂ ಕಂದಾಯ ಕಾಯ್ದೆಯ ಕಲಂ 71ರನ್ವಯ ಕೇಂದ್ರ ಸರ್ಕಾರದ ಸಂಸ್ಥೆಯಾಗಿರುವ ಕಾರಣ ಮಡಿಕೇರಿ ತಾಲ್ಲೂಕು, ಕೆ. ನಿಡುಗಣೆ ಗ್ರಾಮದ ಸ.ನಂ.1/11ರಲ್ಲಿ 4.60 ಎಕರೆ ಜಮೀನನ್ನು ಕೇಂದ್ರಿಯ ವಿದ್ಯಾಲಯಕ್ಕೆ ಕಾಯ್ದಿರಿಸಿರುವುದಾಗಿ ತಿಳಿಸಿರುತ್ತಾರೆ. ಸದರಿ ಸಂಸ್ಥೆಯವರು ಮಂಜೂರಾತಿ ಆದೇಶ ನೀಡುವಂತೆ ಕೋರಿರುವುದರಿಂದ ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969ರ ನಿಯಮ 27ರನ್ವಯ ವಿಶೇಷ ಪ್ರಕರಣವೆಂದು ಪರಿಗಣಿಸಿ ಕೇಂದ್ರಿಯ ವಿದ್ಯಾಲಯಕ್ಕೆ ಮುಫತ್ತಾಗಿ ಮಂಜೂರು ಮಾಡಲು ಕೋರಿರುತ್ತಾರೆ.

ಮೇಲ್ಕಂಡ ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿದೆ. ಅದರಂತೆ ಈ ಆದೇಶ.

ಸರ್ಕಾರಿ ಆದೇಶ ಸಂಖ್ಯೆ: ಆರ್‌ಡಿ 46 ಎಲ್‌ಜಿಎ 2010, ಬೆಂಗಳೂರು, ದಿನಾಂಕ 01-03-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಕೆ. ನಿಡುಗಣೆ ಗ್ರಾಮದ ಸ.ನಂ.1/11ರಲ್ಲಿ 4.60 ಎಕರೆ ಜಮೀನನ್ನು ಕೇಂದ್ರಿಯ ವಿದ್ಯಾಲಯಕ್ಕಾಗಿ ರಾಜ್ಯ ಸರ್ಕಾರಿ ನೌಕರರ ಮಕ್ಕಳಿಗೆ ಶಾಲಾ ಪ್ರವೇಶ ಸಂದರ್ಭದಲ್ಲಿ ಆದ್ಯತೆಯನ್ನು ನೀಡಬೇಕೆನ್ನುವ ಷರತ್ತನ್ನು ವಿಧಿಸಿ ಮಂಜೂರು ಮಾಡಲು ಸರ್ಕಾರವು ಆದೇಶಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ ಆಇ 628 ವೆಚ್ಚ-7/2010, ದಿ: 29.01.2010ರಲ್ಲಿ ನೀಡಿದ ಸಹಮತಿಯನುಸಾರ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಗೀತಾ ರಮೇಶ್
ಸರ್ಕಾರದ ಉಪ ಕಾರ್ಯದರ್ಶಿ
ಕಂದಾಯ ಇಲಾಖೆ (ಭೂ.ಮಂ ಮತ್ತು ಭೂ ಕಂ)

ಪಿ.ಆರ್. 632

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವಾಲಯ

ವಿಷಯ : ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ ಇಲ್ಲಿ ಭವ್ಯವಾದ ಮತ್ತು ಕಲಾತ್ಮಕವಾದ ವಸ್ತು ಸಂಗ್ರಹಾಲಯವನ್ನು ಸ್ಥಾಪಿಸಲು ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು.

ಓದಲಾಗಿದೆ : 1. ಸರ್ಕಾರದ ಆದೇಶ ಸಂಖ್ಯೆ ಕಸಂವಾಪ್ರ 100 ಕೆಎಂಯು 2010, ದಿನಾಂಕ 25.10.2010.

2. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಪತ್ರ ಸಂಖ್ಯೆ ಕಸನಿ:ವಸ್ತು ಸಂಗ್ರ:17:2010-11, ದಿನಾಂಕ 25.02.2011.

ಪ್ರಸ್ತಾವನೆ:

ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ ಇಲ್ಲಿ ಭವ್ಯವಾದ ಮತ್ತು ಕಲಾತ್ಮಕವಾದ ವಸ್ತು ಸಂಗ್ರಹಾಲಯವನ್ನು ಸ್ಥಾಪಿಸಲು ರೂ. 100.00 ಲಕ್ಷ ಅನುದಾನವನ್ನು ಮೇಲೆ (1) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಬಿಡುಗಡೆ ಮಾಡಲಾಗಿದೆ.

ವಸ್ತು ಸಂಗ್ರಹಾಲಯವನ್ನು ನಿರ್ಮಿಸುವ ಕುರಿತಂತೆ ಜಿಲ್ಲಾಧಿಕಾರಿಗಳು, ಗದಗ ಜಿಲ್ಲೆ ಇವರು ರೂ. 1,51,35,000/- ಗಳಿಗೆ ಅಂದಾಜು ಪಟ್ಟಿ ತಯಾರಿಸಿ, ಸದರಿ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡುವಂತೆ ಕೋರಿರುವುದನ್ನು ಉಲ್ಲೇಖಿಸಿ, ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರು ಮೇಲೆ ಓದಲಾದ (2) ರ ಪತ್ರದಲ್ಲಿ ಸದರಿ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿದೆ. ಅದರಂತೆ ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಕಸಂವಾಪ್ರ 48 ಕೆಎಂಯು 2011, ಬೆಂಗಳೂರು, ದಿನಾಂಕ 03-03-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ ಇಲ್ಲಿ ಭವ್ಯವಾದ ಮತ್ತು ಕಲಾತ್ಮಕವಾದ ವಸ್ತು ಸಂಗ್ರಹಾಲಯವನ್ನು ಸ್ಥಾಪಿಸಲು ಸರ್ಕಾರದ ಸಹಾಯಾನುದಾನ ರೂ. 100.00 (ರೂಪಾಯಿ ಒಂದು ನೂರು ಲಕ್ಷಗಳು ಮಾತ್ರ) ಲಕ್ಷಗಳಿಗೆ ಸೀಮಿತಗೊಳಿಸಿ, ಒಟ್ಟು ರೂ. 1,51,35,000/- (ರೂ. ಒಂದು ಕೋಟಿ ಐವತ್ತೊಂದು ಲಕ್ಷ ಮುವತ್ತೈದು ಸಾವಿರಗಳು ಮಾತ್ರ) ಗಳ ಅಂದಾಜು ಪಟ್ಟಿಗೆ ಈ ಕೆಳಕಂಡ ಷರತ್ತಿಗೊಳಪಟ್ಟು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

1. ಸದರಿ ಕಾಮಗಾರಿಯ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ತಾಂತ್ರಿಕ ಅನುಮೋದನೆ ಪಡೆಯುವುದು.
2. ಕಾಮಗಾರಿಯನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ ಹಾಗೂ ನಿಯಮಗಳನ್ನು ಪಾಲಿಸುವ ಮೂಲಕ ಕೈಗೊಳ್ಳುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2008 ದಿನಾಂಕ 16.05.2008 ರಲ್ಲಿ ಇಲಾಖಾ ಕಾರ್ಯದರ್ಶಿಗಳಿಗೆ ಪ್ರದತ್ತವಾದ ಅಧಿಕಾರದ ಪ್ರತ್ಯಾಯೋಜನೆಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಂ.ಕೆ. ಭರ್ಮರಾಜಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ)
ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ
(ಆಡಳಿತ ಕನ್ನಡ)

ಪಿ.ಆರ್. 633

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ) ಯಲ್ಲಿ ಹೆಚ್ಚುವರಿ ಹುದ್ದೆಗಳನ್ನು ಸೃಜಿಸುವ ಬಗ್ಗೆ.

ಓದಲಾಗಿದೆ : 1. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 411 ಸ ಆ ಸೇ 2008, ದಿನಾಂಕ: 28-07-2009

2. ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ) ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ ಸನೀಇ 115 ಮಾಸಾವಿ 2006 ದಿನಾಂಕ 21.01.2011.

ಪ್ರಸ್ತಾವನೆ:

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಆದೇಶದಲ್ಲಿ ಕರ್ನಾಟಕ ಸರ್ಕಾರಿ ಸಚಿವಾಲಯದ ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ) ಯಲ್ಲಿ ಈ ಕೆಳಕಂಡ ತಾತ್ಕಾಲಿಕ ಹುದ್ದೆಗಳನ್ನು ಸೃಜಿಸಲಾಗಿದೆ.

ಕ್ರಮ ಸಂಖ್ಯೆ	ಹುದ್ದೆಯ ಪದನಾಮ	ಹುದ್ದೆಗಳ ಸಂಖ್ಯೆ
1	ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ವೇತನ ಶ್ರೇಣಿ ರೂ. 14,050-25050)	01
2	ಸಹಾಯಕ ಇಂಜಿನಿಯರ್ (ವೇತನ ಶ್ರೇಣಿ ರೂ. 11,400-21,600)	03
3	ಶೀಘ್ರಲಿಪಿಗಾರರು (ವೇತನ ಶ್ರೇಣಿ ರೂ. 8,000-14,800)	01

ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ಅನಧಿಕೃತ ಟಿಪ್ಪಣಿಯಲ್ಲಿ ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)ಯು ದಿನಾಂಕ 28.07.2009 ರ ಆದೇಶದಲ್ಲಿ ಸೃಜಿಸಲಾದ ತಾತ್ಕಾಲಿಕ ಹುದ್ದೆಗಳನ್ನು 1 ವರ್ಷದ ಅವಧಿಗೆ ಎಂದು ತಿದ್ದುಪಡಿ ಆದೇಶ ಹೊರಡಿಸುವಂತೆ ಹಾಗೂ ಸದರಿ ಹುದ್ದೆಗಳನ್ನು ಮತ್ತೆ 1 ವರ್ಷದ ಅವಧಿಗೆ ಮುಂದುವರೆಸುವಂತೆ ಕೋರಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 559 ಸಅಸೇ 2010, ಬೆಂಗಳೂರು, ದಿನಾಂಕ 4ನೇ ಮಾರ್ಚ್ 2011

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಕರ್ನಾಟಕ ಸರ್ಕಾರ ಸಚಿವಾಲಯದ ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ) ಯಲ್ಲಿ ಸೃಜಿಸಲಾದ ಈ ಕೆಳಕಂಡ ಹುದ್ದೆಗಳನ್ನು ದಿನಾಂಕ 27.07.2011 ರವರೆಗೆ ತಾತ್ಕಾಲಿಕವಾಗಿ ಮುಂದುವರೆಸಿ ಆದೇಶಿಸಲಾಗಿದೆ.

ಕ್ರಮ ಸಂಖ್ಯೆ	ಹುದ್ದೆಯ ಪದನಾಮ	ಹುದ್ದೆಗಳ ಸಂಖ್ಯೆ
1	ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ವೇತನ ಶ್ರೇಣಿ ರೂ. 14,050–25050)	01
2	ಸಹಾಯಕ ಇಂಜಿನಿಯರ್ (ವೇತನ ಶ್ರೇಣಿ ರೂ. 11,400–21,600)	03
3	ಶೀಘ್ರಲಿಪಿಗಾರರು (ವೇತನ ಶ್ರೇಣಿ ರೂ. 8,000–14,800)	01

ಮೇಲ್ಕಂಡ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ದಿನಾಂಕ 28.07.2009 ರ ಆದೇಶದಲ್ಲಿ ನಿಗದಿಪಡಿಸಲಾದ ಕ್ರಮಗಳನ್ನು ಅನುಸರಿಸಲು ಆದೇಶಿಸಿದೆ.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 96, ದಿನಾಂಕ: 10–07–1996 ರಲ್ಲಿ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಆರ್ಥಿಕ ಇಲಾಖೆ ಸಹಮತಿ ನೀಡಿದೆ ಎಂದು ಪರಿಭಾವಿಸಿ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 634

ಎ.ಆರ್. ವಿಜಯಾನಂದ ಶರ್ಮ

ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವೆಗಳು–3)

INFORMATION TECHNOLOGY, BIOTECHNOLOGY AND SCIENCE AND TECHNOLOGY SECRETARIAT

Sub: Proposal for setting up of Bio IT Centre at IBAB, Bangalore – release of grants.

Read: 1) Government Order No. ITD 49 MDA 2008, Dated 31-3-2010.
2) Government Order No. ITD 49 MDA 2008, Dated 24-07-2010.
3) Government Order No. ITD 49 MDA 2008, Dated 30-09-2010.
4) Letter dated: 19-01-2011 received from Director IBAB Bangalore.

PREAMBLE:

In the Government order dated 31.3.2010, approval was accorded for setting up of Bio IT Centre at IBAB campus in Biotech Park, Electronic City, 1st Phase, Bangalore with an outlay of Rs. 19.51 crores spread over a period of 5 years, wherein the contribution of Government of India (DIT) would be Rs. 10.00 crores, Government of Karnataka contribution Rs. 5.00 crores, IBAB contribution Rs. 0.76 Crores and Strandlife Sciences Rs. 3.75 crores. An amount of Rs. 1.00 crore was released towards State Government contribution for the project during 2009-10.

Further, an amount of Rs. 1.00 crore was released vide G.O. dated 30.9.2010, read at (2) above and Rs. 1.00 crore vide G.O. dated 30.9.2010 read at (3) above out of budget provision of Rs. 5.00 crores provided in the 2010-11 budget.

Government of India has released an amount of Rs. 7.84 crores sofar, towards their contribution [i.e., Rs. 0.5 crores on 31.3.2010, Rs. 5.00 crores on 5.8.2010 and Rs. 2.79 crores on 13.1.2011] for the said project.

The Director, IBAB vide their letter dated 19.1.2011, read at [4] above, has reported that Government of India has released an amount of Rs. 7.84 crores and as against which GOK has released Rs. 3.00 crores so far. The amount released by GOI & GoK has been fully spent. The grants released by GoI and GoK has been utilized to procure a number of sophisticated equipment required for the Bio-IT Centre and therefore has requested to release the balance amount of Rs. 3.00 crores provided in the 2010-11 budget.

As per the project proposal Government of Karnataka's contribution is only Rs. 5.00 crores out of which an amount of Rs. 3.00 crores has already released and hence, it is considered necessary to release the balance grant of Rs. 2.00 crores to IBAB, out of the funds provided in the budget under the head of **account "3451-00-090-2-22 Institute of Bio-Informatics and Applied Biotechnology [IBAB] - 100 – Financial Assistance / Relief [Plan]"**, for setting up of Bio IT Facility during 2010-11. Hence, the order.

Government Order No. ITD 49 MDA 2008 BANGALORE, DATED 03-03-2011

In the circumstance explained in the preamble, Government are pleased to accord approval for further release of balance amount of Rs. 2.00 crores (Two crores only) during the financial year 2010-11 as final installment of Government of Karnataka contribution to the Director, IBAB towards setting up of Bio-IT Centre at IBAB campus, Electronic City, Bangalore, through the Director of Information Technology and Biotechnology.

The expenditure on this account shall be met out of the grants provided under Head of Account **"3451-00-090-2-22 Institute of Bio-Informatics and Applied Biotechnology [IBAB] - 100 – Financial Assistance / Relief [Plan]"** for the year 2010-11.

The Administrative Officer, Directorate of Information Technology & Bio Technology Department shall draw the said grant from the Treasury duly countersigned by the Director, Information Technology & Biotechnology and disburse the amount.

The Director, Institute of Bio-informatics and Applied Biotechnology [IBAB] shall submit the Utilization Certificate in the prescribed format through the Director, Information Technology and Biotechnology, Bangalore.

This order issues with the concurrence of vide FD Note No: FD 66 Exp-2/2011 dated: 01-03-2011.

By Order and in the name of the Governor of Karnataka
K. Borlingaiah
Under Secretary to Government (I/c)
Information Technology, Biotechnology
and Science and Technology Department

P.R. 635

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ

ವಿಷಯ : ಶ್ರೀಮತಿ ಎಸ್. ಇಂದುಮತಿ, ಸರ್ಕಾರದ ಉಪ ಕಾರ್ಯದರ್ಶಿ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಇಲಾಖೆ, ಇವರನ್ನು ದಿ: 07–03–2011 ರಂದು ನವದೆಹಲಿಯಲ್ಲಿ ನಡೆಯುವ "Cyber Crimes & Challenges though Capacity Building", ಸಮ್ಮೇಳನದಲ್ಲಿ ಭಾಗವಹಿಸಲು ಹಾಗೂ ರವಾಂಡ ಸರ್ಕಾರದ ಜೊತೆ ಒಪ್ಪಂದ ಮಾಡಿಕೊಳ್ಳುವ ಸಂಬಂಧ ಕೇಂದ್ರ ಸರ್ಕಾರದ ಗೃಹ ಸಚಿವಾಲಯದ ಜೊತೆ ವ್ಯವಹರಿಸಲು ನಿಯೋಜಿಸುವ ಕುರಿತು.

ಓದಲಾಗಿದೆ : 1 ಮುಖ್ಯ ಕಾರ್ಯ ನಿರ್ವಹಣಾಧಿಕಾರಿ, ಡೇಟಾ ಸೆಕ್ಯೂರಿಟಿ ಕೌನ್ಸಿಲ್ ಆಫ್ ಇಂಡಿಯಾ, ನವದೆಹಲಿ, ಇವರ ಜಿ–ಮೇಲ್ ದಿ: 18–02–2011.

2 ಆದೇಶ ಸಂಖ್ಯೆ: ಐಟಿಡಿ 06 ಡಿಐಎಸ್ 2011 ದಿ: 24–02–2011.

ಪ್ರಸ್ತಾವನೆ:

ದಿನಾಂಕ: 18–02–2011ರ ಇ–ಮೇಲ್‌ನಲ್ಲಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ, ಡೇಟಾ ಸೆಕ್ಯೂರಿಟಿ ಕೌನ್ಸಿಲ್ ಆಫ್ ಇಂಡಿಯಾ, ನಾಸ್‌ಕಾಂ, ನವದೆಹಲಿ, ಇವರು ನವದೆಹಲಿಯ Hyatt Regency, Bhikaji, Palace ಇಲ್ಲಿ ದಿ: 07–03–2011ರಂದು "Cyber Crimes Challenges though Capacity Building" ಸಮ್ಮೇಳನ ನಡೆಸಲಾಗುತ್ತಿದ್ದು, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆಯ ಅಧಿಕಾರಿಗಳನ್ನು ಮೇಲಿನ ಸಮ್ಮೇಳನದಲ್ಲಿ ಭಾಗವಹಿಸಲು ನಿಯೋಜಿಸುವಂತೆ ಓದಲಾದ ಪತ್ರದಲ್ಲಿ ಕೋರಿರುತ್ತಾರೆ. ಓದಲಾದ (2) ರ ಆದೇಶದಲ್ಲಿ ಶ್ರೀಮತಿ ಚಂಪಾ ಇ. ಸೀನಿಯರ್ ಪ್ರೋಗ್ರಾಮರ್, ಮಾಹಿತಿ ತಂತ್ರಜ್ಞಾನ ನಿರ್ದೇಶನಾಲಯ ಬೆಂಗಳೂರು ಇವರನ್ನು ಸದರಿ ಸಮ್ಮೇಳನದಲ್ಲಿ ಭಾಗವಹಿಸಲು ನಿಯೋಜಿಸಿ, ಆದೇಶಿಸಲಾಗಿತ್ತು. ಆದರೆ ದಿ: 17–18ನೇ ಮಾರ್ಚ್ 2011 ರಂದು "ಸೈಬರ್ ಸೆಕ್ಯೂರಿಟಿ" ಕುರಿತಾಗಿ ರಾಷ್ಟ್ರೀಯ ಸಮ್ಮೇಳನ ನಡೆಯಲಿದ್ದು, ಈ ಸಂಬಂಧ ಶ್ರೀಮತಿ ಚಂಪಾರವರ ಹಾಜರಾತಿ ಅಗತ್ಯವಿರುವುದರಿಂದ ಇವರ ನಿಯೋಜನೆಯನ್ನು ರದ್ದುಪಡಿಸಿ, ಶ್ರೀಮತಿ ಎಸ್. ಇಂದುಮತಿ, ಸರ್ಕಾರದ ಉಪ ಕಾರ್ಯದರ್ಶಿ, ಇವರನ್ನು ದಿ: 07–03–2011ರಂದು ನಡೆಯಲಿರುವ ಸಮ್ಮೇಳನದಲ್ಲಿ ಹಾಗೂ ರವಾಂಡ ಸರ್ಕಾರದ ಜೊತೆ ಒಪ್ಪಂದ ಮಾಡಿಕೊಳ್ಳುವ ಸಂಬಂಧ ಕೇಂದ್ರ ಸರ್ಕಾರದ ಗೃಹ ಸಚಿವಾಲಯದೊಡನೆ ವ್ಯವಹರಿಸುವ ಸಂಬಂಧ ನಿಯೋಜಿಸಲು ತೀರ್ಮಾನಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಐಟಿಡಿ 06 ಡಿಐಎಸ್ 2011 ಬೆಂಗಳೂರು, ದಿ: 04–03–2011

ಶ್ರೀಮತಿ ಎಸ್. ಇಂದುಮತಿ, ಸರ್ಕಾರದ ಉಪ ಕಾರ್ಯದರ್ಶಿ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಇವರನ್ನು ನವದೆಹಲಿಯ Hyatt Regency, Bhikaji, Palace ಇಲ್ಲಿ ದಿ: 07–03–2011ರಂದು ನಡೆಯಲಿರುವ "Cyber Crimes Challenges though Capacity Building" ಸಮ್ಮೇಳನದಲ್ಲಿ ಭಾಗವಹಿಸಲು ಹಾಗೂ ದಿ: 08–03–2011ರಂದು ರವಾಂಡ ದೇಶದ ಜೊತೆ ಒಪ್ಪಂದ ಮಾಡಿಕೊಳ್ಳುವ ವಿಷಯ ಕುರಿತಾಗಿ ಕೇಂದ್ರ ಸರ್ಕಾರದ ಗೃಹ ಸಚಿವಾಲಯದೊಡನೆ ವ್ಯವಹರಿಸುವ ಸಲುವಾಗಿ ನಿಯೋಜಿಸಿ, ಆದೇಶಿಸಿದೆ.

ಸದರಿ ಅಧಿಕಾರಿಯ ದಿನಾಂಕ: 07–03–2011, 08–03–2011ರ ಅವಧಿಯ ಗೈರುಹಾಜರಿಯನ್ನು ಹಾಗೂ ಪ್ರಯಾಣದ ಅವಧಿಯನ್ನು ಕರ್ತವ್ಯದ ಮೇಲೆ ಎಂದು ಪರಿಗಣಿಸಲಾಗಿದೆ ಹಾಗೂ ಸದರಿ ಪ್ರಯಾಣಕ್ಕೆ ಕೆಸಿಎಸ್‌ಆರ್ ನಿಯಮಾವಳಿ ಪ್ರಕಾರ ಲಭ್ಯವಿರುವ ಪ್ರಯಾಣ ಭತ್ಯೆ, ದಿನ ಭತ್ಯೆ ಪಡೆಯಲು ಅಧಿಕಾರಿಯವರು ಅರ್ಹರಾಗಿರುತ್ತಾರೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 96, ದಿನಾಂಕ: 10.7.1996 ರಲ್ಲಿ ಇಲಾಖಾ ಪ್ರಧಾನ ಕಾರ್ಯದರ್ಶಿಗಳಿಗೆ ಪ್ರದತ್ತವಾದ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಕೆ. ಬೋರಲಿಂಗಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ).
ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ
ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ

ಪಿ.ಆರ್. 636

ನಗರಾಭಿವೃದ್ಧಿ ಸಚಿವಾಲಯ

ವಿಷಯ : ಮಂಗಳೂರು ಮಹಾನಗರ ಪಾಲಿಕೆಯಲ್ಲಿ ರೂ. 100 ಕೋಟಿ ವಿಶೇಷ ಅನುದಾನದ ಯೋಜನೆ ಅಡಿ 2ನೇ ಹಂತದಲ್ಲಿ ಕೈಗೊಳ್ಳಲು ಉದ್ದೇಶಿಸಿರುವ ಕಾಮಗಾರಿಗಳ ಕ್ರಿಯಾ ಯೋಜನೆ ಪಟ್ಟಿಗೆ ಸರ್ಕಾರದ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ : ನಅಇ 167 ಎಸಿಬಿ 2010, ದಿ : 13-08-2010
2. ಸರ್ಕಾರದ ಸುತ್ತೋಲೆ ಸಂಖ್ಯೆ : ನಅಇ 167 ಎಸಿಬಿ 2010, ದಿ : 24-08-2010
3. ಸರ್ಕಾರದ ಪತ್ರ ಸಂಖ್ಯೆ : ನಅಇ 103 ಎಂಎಂಸಿ 2010, ದಿನಾಂಕ : 10-02-2011
4. ಆಯುಕ್ತರು, ಪೌರಾಡಳಿತ ನಿರ್ದೇಶನಾಲಯ ಇವರ ಏಕ ಕಡತ ಸಂಖ್ಯೆ : ಪೌನಿ/ತಾಂತ್ರಿಕ/ಮನಪಾ/ಮಂಗಳೂರು/116 (ಭಾಗ-4)/ 2010-11
5. ಆಯುಕ್ತರು, ಮಂಗಳೂರು ಮಹಾನಗರಪಾಲಿಕೆ ಇವರ ಪತ್ರ ಸಂಖ್ಯೆ : ಮನಪಾ/ ಅಕೋ/100 ಕೋಟಿ/2ನೇ ಹಂತ/ಪರಿಷ್ಕೃತ/ಎಫ್ 3/ಸಿ.ಆರ್.29/ 2010-11, ದಿನಾಂಕ : 11-2-2011
6. ಸರ್ಕಾರದ ಅಧಿಸೂಚನೆ ಸಂಖ್ಯೆ : ಸಿಆಸುಇ 20 ಇಜಿವಿ 2009(4), ದಿನಾಂಕ : 13-07-2009

ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಲಾದ ಸರ್ಕಾರದ ದಿನಾಂಕ : 13-08-2010ರ ಆದೇಶದಲ್ಲಿ ಮಂಗಳೂರು ಮಹಾನಗರಪಾಲಿಕೆ ಸೇರಿದಂತೆ ರಾಜ್ಯದಲ್ಲಿನ 7 ಮಹಾನಗರ ಪಾಲಿಕೆಗಳಲ್ಲಿ 2ನೇ ಹಂತದಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ತೆಗೆದುಕೊಳ್ಳಲು 2011-12 ರಿಂದ 2013-14ರ ಆರ್ಥಿಕ ವರ್ಷಗಳಲ್ಲಿ ಪ್ರತಿ ಮಹಾನಗರಪಾಲಿಕೆಗೆ ತಲಾ ರೂ. 100 ಕೋಟಿಯಂತೆ ವಿಶೇಷ ಅನುದಾನವನ್ನು ಒದಗಿಸಲು ಕೆಲವು ಷರತ್ತುಗಳಿಗೊಳಪಟ್ಟು ಸರ್ಕಾರದ ತಾತ್ವಿಕ ಅನುಮೋದನೆ ನೀಡಲಾಗಿದೆ.

2) ಮೇಲೆ (2)ರಲ್ಲಿ ಓದಲಾದ ಸರ್ಕಾರದ ದಿನಾಂಕ : 24-08-2010ರ ಸುತ್ತೋಲೆಯಲ್ಲಿ ರಾಜ್ಯದಲ್ಲಿನ 7 ಮಹಾನಗರಪಾಲಿಕೆಗಳಲ್ಲಿ 2ನೇ ಹಂತದಲ್ಲಿ ತೆಗೆದುಕೊಳ್ಳಲು ಉದ್ದೇಶಿಸಲಾಗಿರುವ ಅಭಿವೃದ್ಧಿ ಕಾಮಗಾರಿಗಳನ್ನು ಆಯ್ಕೆ ಮಾಡುವುದಕ್ಕೆ ಮತ್ತು ಅನುಷ್ಠಾನಗೊಳಿಸುವುದಕ್ಕೆ ಸಂಬಂಧಪಟ್ಟಂತೆ ಮಾರ್ಗದರ್ಶಿ ಸೂತ್ರಗಳನ್ನು ನೀಡಲಾಗಿದೆ.

3) ಮೇಲೆ ಕ್ರಮಾಂಕ (4) ರಲ್ಲಿ ಓದಲಾದ ಏಕ ಕಡತದಲ್ಲಿ ಆಯುಕ್ತರು, ಪೌರಾಡಳಿತ ನಿರ್ದೇಶನಾಲಯ ಇವರು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯಲ್ಲಿ ರೂ. 100 ಕೋಟಿ ವಿಶೇಷ ಅನುದಾನದ ಯೋಜನೆ ಅಡಿ ಮಂಗಳೂರು ಮಹಾನಗರಪಾಲಿಕೆಯಲ್ಲಿ 2ನೇ ಹಂತದಲ್ಲಿ ಕೈಗೊಳ್ಳಲು ಉದ್ದೇಶಿಸಿರುವ ಕಾಮಗಾರಿಗಳ ಕ್ರಿಯಾ ಯೋಜನೆ ಪಟ್ಟಿಯನ್ನು ಸಲ್ಲಿಸಿ ಸರ್ಕಾರದ ಅನುಮೋದನೆ ಕೋರಿರುತ್ತಾರೆ. ಪ್ರಸ್ತಾವನೆಯಲ್ಲಿ ತಿಳಿಸಿರುವಂತೆ ಮಂಗಳೂರು ಮಹಾನಗರಪಾಲಿಕೆಯಲ್ಲಿ ಇತರೆ ಮೂಲಗಳಿಂದ ಪಡೆಯಲಾದ ಅನುದಾನದಲ್ಲಿ ಕುಡಿಯುವ ನೀರು ಸರಬರಾಜಿಗೆ ಸಂಬಂಧಪಟ್ಟಂತೆ ಹಲವು ಕಾಮಗಾರಿಗಳನ್ನು ಕೈಗೊಂಡಿದ್ದು, ಈ ಸಂಬಂಧಿತ ಕಾಮಗಾರಿಗಳ ಬದಲಾಗಿ ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಪ್ರಸ್ತಾಪಿಸಲಾಗಿದೆ. ಅದರಂತೆ ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯಲ್ಲಿ ಕ್ರಮಾಂಕ (2)ರ ಸುತ್ತೋಲೆಯಲ್ಲಿ ವಲಯವಾರು ಕಾಮಗಾರಿಗಳ ಸ್ವರೂಪಕ್ಕೆ ನಿಗದಿಪಡಿಸಿರುವ ಕನಿಷ್ಠ/ಗರಿಷ್ಠ ಮಿತಿಯನ್ನು ಮಾರ್ಪಡಿಸಿ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಕ್ರಿಯಾ ಯೋಜನೆಯಲ್ಲಿ ವಲಯವಾರು ಒಟ್ಟು ಮೊತ್ತವನ್ನು ನಿಗದಿಪಡಿಸಲು ಕೋರಿರುತ್ತಾರೆ.

4) ಮೇಲೆ (3) ರಲ್ಲಿ ಓದಲಾದ ಸರ್ಕಾರದ ದಿನಾಂಕ : 10-02-2011ರ ಪತ್ರದಲ್ಲಿ ಮಂಗಳೂರು ಮಹಾನಗರಪಾಲಿಕೆಯಲ್ಲಿ ರೂ. 100 ಕೋಟಿ ವಿಶೇಷ ಅನುದಾನದ ಯೋಜನೆ ಅಡಿ 2ನೇ ಹಂತದಲ್ಲಿ ಕೈಗೊಳ್ಳಲು ಉದ್ದೇಶಿಸಿರುವ ಕಾಮಗಾರಿಗಳ ಕ್ರಿಯಾ ಯೋಜನೆಯಲ್ಲಿ ಉಲ್ಲೇಖ (2) ರ ಸುತ್ತೋಲೆಯಲ್ಲಿ ಕಾಮಗಾರಿಗಳ ಸ್ವರೂಪಕ್ಕೆ ನಿಗದಿಪಡಿಸಿರುವ ಕನಿಷ್ಠ/ಗರಿಷ್ಠ ಮಿತಿಯನ್ನು ಮಾರ್ಪಡಿಸಿ ಈ ಕೆಳಕಂಡಂತೆ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಕ್ರಿಯಾ ಯೋಜನೆಯಲ್ಲಿ ವಲಯವಾರು ಒಟ್ಟು ಮೊತ್ತಕ್ಕೆ ನಿಗದಿಪಡಿಸಲು ಕೋರಿರುವುದನ್ನು ಸರ್ಕಾರವು ತಾತ್ವಿಕವಾಗಿ ಒಪ್ಪಿ ಪ್ರತಿ ಕಾಮಗಾರಿಗಳ ಸಂಪೂರ್ಣ ವಿವರಗಳುಳ್ಳ ಪಟ್ಟಿಯನ್ನು ಸರ್ಕಾರಕ್ಕೆ ಸಲ್ಲಿಸಲು ಆಯುಕ್ತರು, ಮಂಗಳೂರು ಮಹಾನಗರಪಾಲಿಕೆ ಇವರಿಗೆ ಸೂಚಿಸಲಾಗಿತ್ತು.

(ಮೊತ್ತ ಕೋಟಿ ರೂಪಾಯಿಗಳಲ್ಲಿ)

ಕ್ರ.ಸಂ.	ಕಾಮಗಾರಿಗಳ ಸ್ವರೂಪ	ಕನಿಷ್ಠ/ಗರಿಷ್ಠ ಮಿತಿ
1	ರಸ್ತೆಗಳು, ರಸ್ತೆ ಬದಿ ಚರಂಡಿಗಳ ಅಭಿವೃದ್ಧಿ, ಪಾದಚಾರಿ ಮಾರ್ಗ (Foot paths) ಮತ್ತು ಪಾದಚಾರಿ ಸುರಂಗ ಮಾರ್ಗಗಳು (pedestrian underpass/subways)	67.32
2	ಒಳಚರಂಡಿ ವ್ಯವಸ್ಥೆ ವಿತರಣಾ ಜಾಲ/ಲ್ಯಾಟರಲ್ ಕಾಮಗಾರಿಗಳು ಹಾಗೂ ಇತರೆ ಯುಜಿಡಿ ಕಾಮಗಾರಿಗಳು	2.00
3	ಸಂಚಾರ ವ್ಯವಸ್ಥೆ ಸುಧಾರಣೆ ಕಾಮಗಾರಿಗಳು (Traffic management improvement works such as Vehicle Actuated Signal (Solar/UPS) Integrated with surveillance enforcement cameras)	5.00
4	ಘನತ್ಯಾಜ್ಯ ವಸ್ತು ನಿರ್ವಹಣೆ ಸಂಬಂಧಿತ Land Fill site ಅಭಿವೃದ್ಧಿ ಕಾಮಗಾರಿಗಳು, ನಗರ ಸ್ವಚ್ಛತೆ ನಿರ್ವಹಣೆ ಸಂಬಂಧಿತ ಯಂತ್ರೋಪಕರಣಗಳು, ಮಳೆ ನೀರು ಚರಂಡಿ ಕಾಮಗಾರಿಗಳು, ವಿದ್ಯುತ್ ಬೀದಿ ದೀಪಗಳ ಅಳವಡಿಕೆ ಹಾಗೂ ಇಂಧನ ಉಳಿತಾಯ ಕಾಮಗಾರಿಗಳು ಮತ್ತು ಇತರೆ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳು	23..08
5	ಉದ್ಯಾನವನಗಳ ನಿರ್ಮಾಣ/ಅಭಿವೃದ್ಧಿ ಮತ್ತು ನಗರ ಅರಣ್ಯೀಕರಣ	2.60
	ಒಟ್ಟು	100.00

5) ಮೇಲೆ ಕ್ರಮಾಂಕ (5) ರಲ್ಲಿ ಓದಲಾದ ಪತ್ರದಲ್ಲಿ ಆಯುಕ್ತರು, ಮಂಗಳೂರು ಮಹಾನಗರ ಪಾಲಿಕೆ ರವರು ವಲಯವಾರು ಕಾಮಗಾರಿಗಳ ಸ್ವರೂಪಕ್ಕೆ ನಿಗದಿಪಡಿಸಿರುವ ಕನಿಷ್ಠ/ಗರಿಷ್ಠ ಮಿತಿಗೊಳಪಟ್ಟು ಪಾಲಿಕೆಯು ಕೈಗೆತ್ತಿಕೊಳ್ಳುವ ಕಾಮಗಾರಿಗಳ ಅಂದಾಜು ಮೊತ್ತ ಮತ್ತು ಕಾಮಗಾರಿಗಳ ವಿವರಗಳುಳ್ಳ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

6) ಮೇಲೆ (6) ರಲ್ಲಿ ಓದಲಾದ ಸರ್ಕಾರದ ಅಧಿಸೂಚನೆಯಲ್ಲಿ ಮಂಗಳೂರು ಮಹಾನಗರಪಾಲಿಕೆ ಸೇರಿದಂತೆ ರಾಜ್ಯದಲ್ಲಿನ ಮಹಾನಗರಪಾಲಿಕೆಗಳಲ್ಲಿ ರೂ. 10 ಲಕ್ಷಕ್ಕೆ ಮೀರಿದ ಎಲ್ಲಾ ರೀತಿಯ ಸಾರ್ವಜನಿಕ ಸಂಗ್ರಹಣೆಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ ಮುಖಾಂತರ ಕೈಗೊಳ್ಳುವಂತೆ ಆದೇಶಿಸಲಾಗಿದೆ.

7) ಅದರಂತೆ ಪ್ರಸ್ತಾವನೆಯನ್ನು ಪರಿಗಣಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ನಅಇ 103 ಎಂಎಂಸಿ 2010, ಬೆಂಗಳೂರು, ದಿನಾಂಕ : 23ನೇ ಫೆಬ್ರವರಿ, 2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಮಂಗಳೂರು ಮಹಾನಗರ ಪಾಲಿಕೆಯಲ್ಲಿ ರೂ. 100 ಕೋಟಿ ವಿಶೇಷ ಅನುದಾನದ ಯೋಜನೆ ಅಡಿ 2ನೇ ಹಂತದಲ್ಲಿ ಕೈಗೊಳ್ಳಲು ಉದ್ದೇಶಿಸಿರುವ ಈ ಕೆಳಕಂಡ ಕಾಮಗಾರಿಗಳ ಕ್ರಿಯಾ ಯೋಜನೆ ಪಟ್ಟಿಗೆ ಸರ್ಕಾರದ ಅನುಮೋದನೆ ನೀಡಲಾಗಿದೆ.

ಕ್ರ ಸಂ		ಕೆಲಸದ ವಿವರ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)
	I	ರಸ್ತೆಗಳು, ರಸ್ತೆ ಬದಿ ಚರಂಡಿಗಳ ಅಭಿವೃದ್ಧಿ ಪಾದಚಾರಿ ಮಾರ್ಗ (Foot paths) ಮತ್ತು ಪಾದಚಾರಿ ಸುರಂಗ ಮಾರ್ಗಗಳು (Pedestrain underpass/subways)	
1		ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಲಾಲ್‌ಬಾಗ್ ಜಂಕ್ಷನ್‌ನಿಂದ ಸರ್ಕ್ಯೂಟ್ ಹೌಸ್ ಹಾಲಿ ಇರುವ ಚತುಷ್ಪಥ ಕಾಂಕ್ರೀಟ್ ರಸ್ತೆಗೆ ಎಡಬದಿ ಚರಂಡಿ ಹಾಗೂ ಫುಟ್‌ಪಾತ್ ರಚನೆ (ಚೈ. 0.00ಮೀ ನಿಂದ 1600.00 ಮೀ)	275.00
2		ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಲಾಲ್‌ಬಾಗ್ ಜಂಕ್ಷನ್‌ನಿಂದ ಸರ್ಕ್ಯೂಟ್ ಹೌಸ್ ಹಾಲಿ ಇರುವ ಚತುಷ್ಪಥ ಕಾಂಕ್ರೀಟ್ ರಸ್ತೆಗೆ ಬಲಬದಿ ಚರಂಡಿ ಹಾಗೂ ಫುಟ್‌ಪಾತ್ ರಚನೆ (ಚೈ. 0.00ಮೀ ನಿಂದ 1600.00 ಮೀ)	275.00
3		ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಪಿ.ವಿ.ಎಸ್ ವೃತ್ತದಿಂದ ಹಂಪನಕಟ್ಟೆ ಸಿಗ್ನಲ್ ವೃತ್ತದವರೆಗೆ ಎಡಬದಿ ಚರಂಡಿ ಹಾಗೂ ಫುಟ್‌ಪಾತ್ ರಚನೆ (ಚೈ.0.00 ನಿಂದ 600.00 ಮೀ)	80.00
4		ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಪಿ.ವಿ.ಎಸ್ ಜಂಕ್ಷನ್ ಸುಗುಣೇಂದ್ರ ಸ್ಟೋರ್ಸ್‌ನಿಂದ ಕೆ.ಎಸ್.ರಾವ್ ರಸ್ತೆ ಸಿಗ್ನಲ್ ಜಂಕ್ಷನ್‌ವರೆಗೆ (ಸಿಂಡಿಕೇಟ್ ಬ್ಯಾಂಕ್ ಬದಿಯಿಂದ) ಚರಂಡಿ ಹಾಗೂ ಫುಟ್‌ಪಾತ್ ರಚನೆ (ಚೈ.0.00 ನಿಂದ 600.00ಮೀ)	80.00
5		ಪಾಂಡೇಶ್ವರ ಮಂಗಳಾದೇವಿ ಮುಖ್ಯ ರಸ್ತೆಯಲ್ಲಿ ಸುಭಾಶ್‌ನಗರ ಜಂಕ್ಷನ್‌ನಿಂದ ಮಂಗಳಾದೇವಿ ದೇವಸ್ಥಾನ ವರೆಗೆ ರಸ್ತೆ ಮತ್ತು ಚರಂಡಿ ಹಾಗೂ ಫುಟ್‌ಪಾತ್ ರಚನೆ (ಚೈ. 1150.00 ನಿಂದ 1500.00ಮೀ)	200.00
6		ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಬಂಟ್ಸ್ ಹಾಸ್ಟೆಲ್ ಜಂಕ್ಷನ್‌ನಿಂದ ಮಲ್ಲಿಕಟ್ಟೆ ಶಿವಭಾಗ್ ಜಂಕ್ಷನ್‌ವರೆಗೆ ರಸ್ತೆಯ ಎಡಬದಿ ಚರಂಡಿ ಹಾಗೂ ಫುಟ್‌ಪಾತ್ ರಚನೆ (ಚೈ. 0.00 ಮೀ ನಿಂದ 1600.00 ಮೀ)	280.00
7		ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಬಂಟ್ಸ್ ಹಾಸ್ಟೆಲ್ ಜಂಕ್ಷನ್‌ನಿಂದ ಮಲ್ಲಿಕಟ್ಟೆ ಶಿವಭಾಗ್ ಜಂಕ್ಷನ್‌ವರೆಗೆ ರಸ್ತೆಯ ಬಲಬದಿ ಚರಂಡಿ ಹಾಗೂ ಫುಟ್‌ಪಾತ್ ರಚನೆ (ಚೈ. 0.00 ಮೀ ನಿಂದ 1600.00 ಮೀ)	200.00
8		ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಕೋಡಿಕಲ್ ಮುಖ್ಯ ರಸ್ತೆ ಅಭಿವೃದ್ಧಿ (ಚೈ. 0.00 ಮೀ ನಿಂದ 500.00 ಮೀ)	200.00
9		ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಮಂಗಳಾ ಕಾರ್ನಿಸ್ ಯೋಜನೆ ಅನುಷ್ಠಾನ	200.00
10		ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಕುಂಟಿಕಾನ ಕಾವೂರು ಮುಖ್ಯ ರಸ್ತೆಯಲ್ಲಿ ದೇರೆಬೈಲ್ ಕೊಂಚಾಡಿ ಮಹಾಕಾಳಿ ಕಟ್ಟೆಯಿಂದ ಕಾವೂರು ಜಂಕ್ಷನ್‌ವರೆಗಿನ ರಸ್ತೆ ಅಭಿವೃದ್ಧಿ ಕೆಲಸ (ಚೈ. 1200.00ಮೀ. ನಿಂದ 1800.00ಮೀ)	300.00
11		ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಕಾವೂರು ಜಂಕ್ಷನ್‌ನಿಂದ ಕೂಳೂರು ಜಂಕ್ಷನ್‌ವರೆಗಿನ ಮುಖ್ಯ ರಸ್ತೆಯಲ್ಲಿ ಶಾಂತಿನಗರ ಮೈದಾನ ಬಳಿಯಿಂದ ಕಾವೂರು ಜಂಕ್ಷನ್‌ವರೆಗೆ ರಸ್ತೆ ಅಭಿವೃದ್ಧಿ ಕೆಲಸ (ಚೈ. 1235.00 ಮೀ ನಿಂದ 1650.00 ಮೀ)	400
12		ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಕೂಳೂರು ಫೇರಿ ರಸ್ತೆಯಲ್ಲಿ ಮಣ್ಣಗುಡ್ಡ ದುರ್ಗಾಮಹಲ್ ಜಂಕ್ಷನ್‌ನಿಂದ ಕಾಳಿಕಾಂಬ ಜಂಕ್ಷನ್ ವರೆಗಿನ ರಸ್ತೆ ಅಭಿವೃದ್ಧಿ ಕೆಲಸ (ಚೈ. 0.00 ನಿಂದ 1000.00 ಮೀ)	580
13		ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಕಾರ್ ಸ್ಟ್ರೀಟ್ ಮುಖ್ಯ ರಸ್ತೆಯಲ್ಲಿ ಕಾಳಿಕಾಂಬ ಜಂಕ್ಷನ್‌ನಿಂದ ವೆಂಕಟರಮಣ ದೇವಸ್ಥಾನ ಜಂಕ್ಷನ್‌ವರೆಗೆ ರಸ್ತೆ ಅಭಿವೃದ್ಧಿ ಕೆಲಸ (ಚೈ. 1000.00 ನಿಂದ 1180.00 ಮೀ)	
14		ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಪಡೀಲ್ ಬಜಾಲ್ ಮುಖ್ಯ ರಸ್ತೆ ಎನ್.ಎಚ್-17 ರಿಂದ ಎನ್. ಎಚ್-48ರ ವರೆಗಿನ ಮುಖ್ಯ ರಸ್ತೆಯನ್ನು ಅಗಲೀಕರಣಗೊಳಿಸಿ ಅಭಿವೃದ್ಧಿ ಕೆಲಸ (ಚೈ. 550.00 ನಿಂದ 5200.00 ಮೀ)	200.00
15		ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಜಪ್ಪಿನಮೊಗರು ಎನ್.ಎಚ್-48 ರಿಂದ ಕಡೆಕಾರ್ ಮಲ್ಲಿಕಾರ್ಜುನ ದೇವಸ್ಥಾನ ಮುಖ್ಯರಸ್ತೆ ಅಭಿವೃದ್ಧಿ ಕೆಲಸ (ಚೈ. 0.00 ನಿಂದ 400.00 ಮೀ)	200.00

16		ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಸುರತ್ಕಲ್ ಉಪ ವಿಭಾಗ ವ್ಯಾಪ್ತಿಯ ಚಿತ್ರಾಪುರ ಮುಖ್ಯ ರಸ್ತೆ ಅಭಿವೃದ್ಧಿ (ಚೈ. 1000.00 ನಿಂದ 2000.00 ಮೀ)	300.00
17		ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಸುರತ್ಕಲ್ ಉಪ ವಿಭಾಗ ವ್ಯಾಪ್ತಿಯ ಶಿವಗಿರಿ ರಸ್ತೆ ಅಭಿವೃದ್ಧಿ (ಚೈ. 0.00 ಮೀ ನಿಂದ 700.00 ಮೀ)	200.00
18		ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಕದ್ರಿ ಕಂಬಳ ಮುಖ್ಯ ರಸ್ತೆ ಎಡಬದಿ ಚರಂಡಿ ಹಾಗೂ ಫುಟ್‌ಪಾತ್ ರಚನೆ (ಚೈ. 0.00 ನಿಂದ 1300.00 ಮೀ)	200.00
19		ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಕದ್ರಿ ಕಂಬಳ ಮುಖ್ಯ ರಸ್ತೆ ಬಲಬದಿ ಸೇತುವೆ ಸಹಿತ ಚರಂಡಿ ಹಾಗೂ ಫುಟ್‌ಪಾತ್ ರಚನೆ (ಚೈ. 0.00 ನಿಂದ 1300.00 ಮೀ)	230.00
20		ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ದೇರೆಬೈಲ್ ಕೊಂಚಾಡಿ ಲ್ಯಾಂಡ್ ಲಿಂಕ್ಸ್ ಮುಖ್ಯ ರಸ್ತೆ ಅಭಿವೃದ್ಧಿ (ಚೈ.0.00 ಮೀ ನಿಂದ 800.00ಮೀ)	50.00
21		ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಮಾಲೆಮಾರ್ ರಸ್ತೆ ಅಭಿವೃದ್ಧಿ (ಚೈ. 0.00 ನಿಂದ 400.00 ಮೀ)	200.00
22		ಮಹಾನಗರಪಾಲಿಕೆಯ ವ್ಯಾಪ್ತಿಯಲ್ಲಿನ ಪ್ರಮುಖ ಕೂಡು ರಸ್ತೆಗಳನ್ನು ಮೇಲ್ದರ್ಜೆಗೇರಿಸಿ ಅಭಿವೃದ್ಧಿ ಕಾಮಗಾರಿ (ಪಟ್ಟಿ ಲಗತ್ತಿಸಿದೆ.)	
	1	ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ. 1 ಸುರತ್ಕಲ್ ಪಶ್ಚಿಮ ಮುಖ್ಯ ರಸ್ತೆ ಅಭಿವೃದ್ಧಿ	25.00
	2	ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ. 2 ಸುರತ್ಕಲ್ ಪೂರ್ವ ಮುಖ್ಯ ರಸ್ತೆ ಅಭಿವೃದ್ಧಿ	25.00
	3	ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ. 3 ಕಾಟಿಪಳ್ಳ ಪೂರ್ವ ಮುಖ್ಯ ರಸ್ತೆ ಅಭಿವೃದ್ಧಿ	25.00
	4	ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ. 4 ಕಾಟಿಪಳ್ಳ ಕೃಷ್ಣಪುರ ಮುಖ್ಯ ರಸ್ತೆ ಅಭಿವೃದ್ಧಿ	25.00
	5	ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ. 5 ಕಾಟಿಪಳ್ಳ ಉತ್ತರ ಮುಖ್ಯ ರಸ್ತೆ ಅಭಿವೃದ್ಧಿ	25.00
	6	ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ. 6 ಇಡ್ಯಾ ಪೂರ್ವ ಮುಖ್ಯ ರಸ್ತೆ ಅಭಿವೃದ್ಧಿ	25.00
	7	ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ. 7 ಇಡ್ಯಾ ಪಶ್ಚಿಮ ಮುಖ್ಯ ರಸ್ತೆ ಅಭಿವೃದ್ಧಿ	25.00
	8	ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ. 8 ಹೊಸಬೆಟ್ಟು ಮುಖ್ಯ ರಸ್ತೆ ಅಭಿವೃದ್ಧಿ	25.00
	9	ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ. 9 ಕುಳಾಯಿ ಮುಖ್ಯ ರಸ್ತೆ ಅಭಿವೃದ್ಧಿ	25.00
	10	ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ. 10 ಬೈಕಂಪಾಡಿ ಮುಖ್ಯ ರಸ್ತೆ ಅಭಿವೃದ್ಧಿ	25.00
	11	ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ. 11 ಪಣಂಬೂರು ಬೆಂಗ್ರ ಮುಖ್ಯ ರಸ್ತೆ ಅಭಿವೃದ್ಧಿ	25.00
	12	ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ. 12 ಪಂಜಿಮೊಗರು ಮುಖ್ಯ ರಸ್ತೆ ಅಭಿವೃದ್ಧಿ	25.00
	13	ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ. 13 ಕುಂಜತ್ತ್ ಬೈಲ್ ಉತ್ತರ ಮುಖ್ಯ ರಸ್ತೆ ಅಭಿವೃದ್ಧಿ	25.00
	14	ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ. 14 ಮರಕಡ ಮುಖ್ಯ ರಸ್ತೆ ಅಭಿವೃದ್ಧಿ	25.00
	15	ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ. 15 ಕುಂಜತ್ತ್ ಬೈಲ್ ದಕ್ಷಿಣ ಮುಖ್ಯ ರಸ್ತೆ ಅಭಿವೃದ್ಧಿ	25.00
	16	ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ. 16 ಬಂಗ್ರ ಕೂಳೂರು ಮುಖ್ಯ ರಸ್ತೆ ಅಭಿವೃದ್ಧಿ	25.00
	17	ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ. 17 ದೇರೆಬೈಲು ಉತ್ತರ ಮುಖ್ಯ ರಸ್ತೆ ಅಭಿವೃದ್ಧಿ	25.00
	18	ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ. 18 ಕಾವೂರು ಮುಖ್ಯ ರಸ್ತೆ ಅಭಿವೃದ್ಧಿ	25.00
	19	ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ. 19 ಪಚ್ಚನಾಡಿ ಮುಖ್ಯ ರಸ್ತೆ ಅಭಿವೃದ್ಧಿ	25.00
	20	ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ. 20 ತಿರುವೈಲು ಮುಖ್ಯ ರಸ್ತೆ ಅಭಿವೃದ್ಧಿ	25.00
	21	ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ. 21 ಪದವು ಪಶ್ಚಿಮ ಮುಖ್ಯ ರಸ್ತೆ ಅಭಿವೃದ್ಧಿ	25.00

	22	ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ. 22 ಕದ್ರಿ ಪದವು ಮುಖ್ಯ ರಸ್ತೆ ಅಭಿವೃದ್ಧಿ	25.00
	23	ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ. 23 ದೇರೆಬೈಲು ಪೂರ್ವ ಮುಖ್ಯ ರಸ್ತೆ ಅಭಿವೃದ್ಧಿ	25.00
	24	ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ. 24 ದೇರೆಬೈಲ್ ದಕ್ಷಿಣ ಮುಖ್ಯ ರಸ್ತೆ ಅಭಿವೃದ್ಧಿ	25.00
	25	ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ. 25 ದೇರೆಬೈಲ್ ಪಶ್ಚಿಮ ಮುಖ್ಯ ರಸ್ತೆ ಅಭಿವೃದ್ಧಿ	25.00
	26	ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ. 26 ದೇರೆಬೈಲ್ ನೈಋತ್ಯ ಮುಖ್ಯ ರಸ್ತೆ ಅಭಿವೃದ್ಧಿ	25.00
	27	ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ. 27 ಬೋಳೂರು ಮುಖ್ಯ ರಸ್ತೆ ಅಭಿವೃದ್ಧಿ	25.00
	28	ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ. 28 ಮಣ್ಣ ಗುಡ್ಡ ಮುಖ್ಯ ರಸ್ತೆ ಅಭಿವೃದ್ಧಿ	25.00
	29	ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ. 29 ಕಂಬ್ಳ ಮುಖ್ಯ ರಸ್ತೆ ಅಭಿವೃದ್ಧಿ	25.00
	30	ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ. 30 ಕೊಡಿಯಲ್ ಬೈಲ್ ಮುಖ್ಯ ರಸ್ತೆ ಅಭಿವೃದ್ಧಿ	25.00
	31	ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ. 31 ಬಿಜೈ ಮುಖ್ಯ ರಸ್ತೆ ಅಭಿವೃದ್ಧಿ	25.00
	32	ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ. 32 ಕದ್ರಿ ಉತ್ತರ ಮುಖ್ಯ ರಸ್ತೆ ಅಭಿವೃದ್ಧಿ	25.00
	33	ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ. 33 ಕದ್ರಿ ದಕ್ಷಿಣ ಮುಖ್ಯ ರಸ್ತೆ ಅಭಿವೃದ್ಧಿ	25.00
	34	ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ. 34 ಶಿವಭಾಗ್ ಮುಖ್ಯ ರಸ್ತೆ ಅಭಿವೃದ್ಧಿ	25.00
	35	ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ. 35 ಪದವು ಸೆಂಟ್ರಲ್ ಮುಖ್ಯ ರಸ್ತೆ ಅಭಿವೃದ್ಧಿ	25.00
	36	ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ. 36 ಪದವು ಪೂರ್ವ ಮುಖ್ಯ ರಸ್ತೆ ಅಭಿವೃದ್ಧಿ	25.00
	37	ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ. 37 ಮರೋಳಿ ಮುಖ್ಯ ರಸ್ತೆ ಅಭಿವೃದ್ಧಿ	25.00
	38	ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ. 38 ಬೆಂದೂರ್ ಮುಖ್ಯ ರಸ್ತೆ ಅಭಿವೃದ್ಧಿ	25.00
	39	ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ. 39 ಫಳ್ನೀರ್ ಮುಖ್ಯ ರಸ್ತೆ ಅಭಿವೃದ್ಧಿ	25.00
	40	ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ. 40 ಕೋರ್ಟ್ ಮುಖ್ಯ ರಸ್ತೆ ಅಭಿವೃದ್ಧಿ	25.00
	41	ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ. 41 ಸೆಂಟ್ರಲ್ ಮಾರ್ಕೆಟ್ ಮುಖ್ಯ ರಸ್ತೆ ಅಭಿವೃದ್ಧಿ	25.00
	42	ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ. 42 ಡೊಂಗರಕೇರಿ ಮುಖ್ಯ ರಸ್ತೆ ಅಭಿವೃದ್ಧಿ	25.00
	43	ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ. 43 ಕುದ್ರೋಳಿ ಮುಖ್ಯ ರಸ್ತೆ ಅಭಿವೃದ್ಧಿ	25.00
	44	ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ. 44 ಬಂದರ್ ಮುಖ್ಯ ರಸ್ತೆ ಅಭಿವೃದ್ಧಿ	25.00
	45	ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ. 45 ಪೋರ್ಟ ಮುಖ್ಯ ರಸ್ತೆ ಅಭಿವೃದ್ಧಿ	25.00
	46	ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ. 46 ಕಂಟೋನ್ಮೆಂಟ್ ಮುಖ್ಯರಸ್ತೆ ಅಭಿವೃದ್ಧಿ	25.00
	47	ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ. 47 ಮಿಲಾಗ್ರಿಸ್ ಮುಖ್ಯ ರಸ್ತೆ ಅಭಿವೃದ್ಧಿ	25.00
	48	ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ. 48 ಕಂಕನಾಡಿ ವೆಲೆನ್ಸಿಯಾ ಮುಖ್ಯ ರಸ್ತೆ ಅಭಿವೃದ್ಧಿ	25.00
	49	ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ. 49 ಕಂಕನಾಡಿ ಮುಖ್ಯ ರಸ್ತೆ ಅಭಿವೃದ್ಧಿ	25.00
	50	ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ. 50 ಅಳಪೆ ದಕ್ಷಿಣ ಮುಖ್ಯ ರಸ್ತೆ ಅಭಿವೃದ್ಧಿ	25.00
	51	ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ. 51 ಅಳಪೆ ಉತ್ತರ ಮುಖ್ಯ ರಸ್ತೆ ಅಭಿವೃದ್ಧಿ	25.00
	52	ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ. 52 ಕಣ್ಣೂರು ಮುಖ್ಯ ರಸ್ತೆ ಅಭಿವೃದ್ಧಿ	25.00
	53	ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ. 53 ಬಜಾಲ್ ಮುಖ್ಯ ರಸ್ತೆ ಅಭಿವೃದ್ಧಿ	25.00
	54	ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ. 54 ಜಪ್ಪಿನ ಮೊಗರು ಮುಖ್ಯ ರಸ್ತೆ ಅಭಿವೃದ್ಧಿ	25.00
	55	ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ. 55 ಅತ್ತಾವರ ಮುಖ್ಯ ರಸ್ತೆ ಅಭಿವೃದ್ಧಿ	25.00

	56	ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ. 56 ಮಂಗಳಾದೇವಿ ಮುಖ್ಯ ರಸ್ತೆ ಅಭಿವೃದ್ಧಿ	25.00
	57	ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ. 57 ಹೊಯ್ಗೆ ಮುಖ್ಯ ರಸ್ತೆ ಅಭಿವೃದ್ಧಿ	25.00
	58	ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ. 58 ಬೋಳಾರ ಮುಖ್ಯ ರಸ್ತೆ ಅಭಿವೃದ್ಧಿ	25.00
	59	ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ. 59 ಜೆಪ್ಪು ಮುಖ್ಯ ರಸ್ತೆ ಅಭಿವೃದ್ಧಿ	25.00
	60	ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ. 60 ಬೆಂಗ್ರೆ ಮುಖ್ಯ ರಸ್ತೆ ಅಭಿವೃದ್ಧಿ	25.00
23		ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಮಾಲಾಡಿ ಕೋರ್ಟ್ ರಸ್ತೆ (ಚೈ.00.00 ನಿಂದ 700.00 ಮೀ)	200.00
24		ಮಂಗಳೂರು ಮಹಾನಗರ ವ್ಯಾಪ್ತಿಯಲ್ಲಿನ ಪಳ್ನೀರ್ ಮುಖ್ಯ ರಸ್ತೆಯನ್ನು ಅವೇರಿ ಜಂಕ್ಷನ್‌ನಿಂದ ಕಂಕನಾಡಿ ವೃತ್ತದ ವರೆಗೆ ಅಭಿವೃದ್ಧಿಪಡಿಸುವುದು (ಚೈ.570.00 ನಿಂದ 1190.00 ಮೀ)	232.00
		Sub-Total	6732.00
		II ಒಳಚರಂಡಿ ವ್ಯವಸ್ಥೆ ವಿತರಣಾ ಜಾಲ/ಲ್ಯಾಟರಲ್ಸ್ ಕಾಮಗಾರಿಗಳು ಹಾಗೂ ಇತರೆ ಯುಜಿಡಿ ಕಾಮಗಾರಿಗಳು	
	a)	ಅತ್ತಾವರ ಕೆ.ಎಂ.ಸಿ. ಹಿಂಬದಿ ಒಳಚರಂಡಿ ವಿತರಣಾ ಜಾಲ ಅಭಿವೃದ್ಧಿ	40.00
	b)	ಪಾಂಡೇಶ್ವರ ದೂಮಪ್ಪ ಕಾಂಪೌಂಡ್ ಬಳಿ ಒಳಚರಂಡಿ ವಿತರಣಾ ಜಾಲ ಅಭಿವೃದ್ಧಿ	40.00
	c)	ಬೋಳೂರು ಪರಮ ಪ್ರದೇಶದಲ್ಲಿ ಒಳಚರಂಡಿ ವಿತರಣಾ ಜಾಲ ಅಭಿವೃದ್ಧಿ	40.00
	d)	ಅಶೋಕನಗರ ಸುಂಕದ ಕಟ್ಟೆ ಪ್ರದೇಶದಲ್ಲಿ ಒಳಚರಂಡಿ ವಿತರಣಾ ಜಾಲ ಅಭಿವೃದ್ಧಿ	40.00
	e)	ಪಚ್ಚನಾಡಿ ಕಾರ್ಮಿಕ ಕಾಲೋನಿಯಲ್ಲಿ ಒಳಚರಂಡಿ ವಿತರಣಾ ಜಾಲ ಅಭಿವೃದ್ಧಿ	40.00
		Sub-Total	200.00
		III ಸಂಚಾರ ವ್ಯವಸ್ಥೆ ಸುಧಾರಣೆ ಕಾಮಗಾರಿಗಳು (Traffic management improvement works such as Vehicle Actuated Signal (Solar/UPS) Integrated with surveillance enforcement cameras)	
	1	ಮಹಾ ನಗರ ಪಾಲಿಕೆಯ ವ್ಯಾಪ್ತಿಯಲ್ಲಿನ ಸಂಚಾರಿ ನಿಯಂತ್ರಣ ವ್ಯವಸ್ಥೆಯನ್ನು ಮೇಲ್ದರ್ಜೆಗೇರಿಸುವ ಕಾಮಗಾರಿ	300.00
	2	ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಸುಗಮ ಸಂಚಾರ ವ್ಯವಸ್ಥೆಗಾಗಿ ಪಂಪವೆಲ್‌ನಲ್ಲಿ ಬಸ್ ಟರ್ಮಿನಲ್ ನಿರ್ಮಾಣ ಕಾಮಗಾರಿ	200.00
		Sub-Total	500.00
		IV ಘನತ್ಯಾಜ್ಯ ವಸ್ತು ನಿರ್ವಹಣೆ ಸಂಬಂಧಿತ Land Fill site ಅಭಿವೃದ್ಧಿ ಕಾಮಗಾರಿಗಳು, ನಗರ ಸ್ವಚ್ಛತೆ ನಿರ್ವಹಣೆ ಸಂಬಂಧಿತ ಯಂತ್ರೋಪಕರಣಗಳು, ಮಳೆ ನೀರು ಚರಂಡಿ ಕಾಮಗಾರಿಗಳು, ವಿದ್ಯುತ್ ಬೀದಿ ದೀಪಗಳ ಅಳವಡಿಕೆ ಹಾಗೂ ಇಂಧನ ಉಳಿತಾಯ ಕಾಮಗಾರಿಗಳು ಮತ್ತು ಇತರೆ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳು	
ಎ)		ಮಳೆ ನೀರು ಚರಂಡಿ ಕಾಮಗಾರಿಗಳು	
1		ಮಂಗಳೂರು ಮಹಾನಗರ ಪಾಲಿಕೆ ಎ.ಬಿ. ಶೆಟ್ಟಿ ವೃತ್ತದಿಂದ ಸುಭಾಶ್ ನಗರ ಜಂಕ್ಷನ್‌ವರೆಗಿನ ಚೈ.0.00 ಮಿ.ನಿಂದ 1110.00 ಮಿ. ವರೆಗೆ ರಸ್ತೆಗೆ ಮಳೆ ನೀರು ಹರಿಯಲು ಮುಚ್ಚು ಚರಂಡಿ ನಿರ್ಮಾಣ	250.00
2		ಕೆ.ಎಸ್.ಆರ್.ಟಿ.ಸಿ. ಜಂಕ್ಷನ್ ನಿಂದ ಕುಂಟಿಕಾನ ಜಂಕ್ಷನ್ ವರೆಗಿನ ಚತುಷ್ಪಥ ಕಾಂಕ್ರೀಟ್ ರಸ್ತೆಯ ಬಲಬದಿಯಲ್ಲಿ ಚೈ. 440.00 ಮೀ.ನಿಂದ 1650.00ಮಿ. ವರೆಗೆ ಮಳೆ ನೀರು ಹರಿಯಲು ಮುಚ್ಚು ಚರಂಡಿ ನಿರ್ಮಾಣ	150.00
3		ಮಂಗಳೂರು ಮಹಾನಗರ ಪಾಲಿಕೆ ಕೆ.ಎಸ್.ಆರ್.ಟಿ.ಸಿ. ಜಂಕ್ಷನ್‌ನಿಂದ ಕುಂಟಿಕಾನ ಜಂಕ್ಷನ್‌ವರೆಗಿನ ಚತುಷ್ಪಥ ಕಾಂಕ್ರೀಟ್ ರಸ್ತೆಯ ಎಡಬದಿಯಲ್ಲಿ ಚೈ. 440.00 ಮಿ.ನಿಂದ 1650.00ಮಿ. ವರೆಗೆ ಮಳೆ ನೀರು ಹರಿಯಲು ಮುಚ್ಚು ಚರಂಡಿ ನಿರ್ಮಾಣ	150.00
4		ಮಂಗಳೂರು ಮಹಾನಗರ ಪಾಲಿಕೆ ಹಂಪನಕಟ್ಟ ರಾವ್ ಎಂಡ್ ವೃತ್ತದಿಂದ ಕ್ಲಾಕ್ ಟವರ್ ವೃತ್ತದವರೆಗೆ ಚೈ.0.00 ಮಿ.ನಿಂದ 380.00 ಮಿ. ವರೆಗೆ ಮಳೆ ನೀರು ಹರಿಯಲು ಮುಚ್ಚು ಚರಂಡಿ ನಿರ್ಮಾಣ	116.00
5		ಮಂಗಳೂರು ಮಹಾನಗರ ಪಾಲಿಕೆ ಕದ್ರಿ ಶಿವಭಾಗ್ ಜಂಕ್ಷನ್‌ನಿಂದ ಲೋವರ್ ಬೆಂದೂರ್ ವೃತ್ತ (ಸೈಂಟ್ ಆಗ್ನೇಸ್) ವರೆಗಿನ ಚತುಷ್ಪಥ ಕಾಂಕ್ರೀಟ್ ರಸ್ತೆಯ ಎಡಬದಿಯಲ್ಲಿ ಮಳೆ ನೀರು ಹರಿಯಲು ಮುಚ್ಚು ಚರಂಡಿ ನಿರ್ಮಾಣ	200.00
6		ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಕದ್ರಿ ಶಿವಭಾಗ್ ಜಂಕ್ಷನ್ ನಿಂದ ಲೋವರ್ ಬೆಂದೂರ್ ವೃತ್ತ (ಸೈಂಟ್ ಆಗ್ನೇಸ್) ವರೆಗಿನ ಚತುಷ್ಪಥ ಕಾಂಕ್ರೀಟ್ ರಸ್ತೆಯ ಬಲಬದಿಯಲ್ಲಿ ಮಳೆ ನೀರು ಹರಿಯಲು ಮುಚ್ಚು ಚರಂಡಿ ನಿರ್ಮಾಣ	200.00

7		ಮಂಗಳೂರು ಮಹಾನಗರ ಪಾಲಿಕೆ ಹಂಪನ ಕಟ್ಟಾ ರೈಲ್ವೇ ಸ್ಟೇಶನ್‌ನಿಂದ ನಂದಿ ಗುಡ್ಡ ವೃತ್ತದವರೆಗೆ ಚೈ.0.00 ಮಿ. ನಿಂದ 800.00 ಮಿ. ವರೆಗೆ ಬಲಬದಿಯಲ್ಲಿ ಮಳೆ ನೀರು ಹರಿಯಲು ಮುಚ್ಚು ಚರಂಡಿ ನಿರ್ಮಾಣ	100.00
8		ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಹಂಪನಕಟ್ಟಾ ರೈಲ್ವೇ ಸ್ಟೇಶನ್‌ನಿಂದ ನಂದಿ ಗುಡ್ಡ ವೃತ್ತದವರೆಗೆ ಚೈ. 0.00 ಮಿ.ನಿಂದ 800.00ಮಿ. ವರೆಗೆ ಎಡಬದಿಯಲ್ಲಿ ಮಳೆ ನೀರು ಹರಿಯಲು ಮುಚ್ಚು ಚರಂಡಿ ನಿರ್ಮಾಣ	100.00
9	1	ಕೋಡಿಯಲ್ ಬೈಲ್ ಎಂ.ಜಿ. ರಸ್ತೆಯ ಮಳೆ ನೀರು ಬೃಹತ್ ಚರಂಡಿ ಅಭಿವೃದ್ಧಿ	170.00
	2	ಜಪ್ಪಿನ ಮೊಗರು ಮಳೆ ನೀರು ಬೃಹತ್ ಚರಂಡಿ ಅಭಿವೃದ್ಧಿ	100.00
	3	ಹೊಯ್ಗೆ ಬಜಾರ್ ಮಳೆ ನೀರು ಬೃಹತ್ ಚರಂಡಿ ಅಭಿವೃದ್ಧಿ	100.00
	4	ಕೂಳೂರು ಮಳೆ ನೀರು ಬೃಹತ್ ಚರಂಡಿ ಅಭಿವೃದ್ಧಿ	100.00
	5	ಮಂಗಳೂರು ನಗರದ ಎಲ್ಲಾ ಮಳೆ ನೀರಿನ ಚರಂಡಿಗಳ ಪೂರ್ಣ ಸರ್ವೆ ಮತ್ತು ತಾಂತ್ರಿಕ ವರದಿ ತಯಾರಿಸುವುದು	30.00
10		ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಸ್ಮಶಾನ ಅಭಿವೃದ್ಧಿ	
	a)	ನಂದಿಗುಡ್ಡ ಸ್ಮಶಾನ ಅಭಿವೃದ್ಧಿ	45.00
	b)	ಶಕ್ತಿನಗರ ಸ್ಮಶಾನ ಅಭಿವೃದ್ಧಿ	35.00
	c)	ಸುರತ್ಕಲ್ ಸ್ಮಶಾನ ಅಭಿವೃದ್ಧಿ	20.00
11		ಬಿಜೈ ಮಾರುಕಟ್ಟೆ ಅಭಿವೃದ್ಧಿ	140.00
b		ಚತುಷ್ಪಥ ಕಾಂಕ್ರೀಟ್ ರಸ್ತೆಗೆ ದಾರಿ ದೀಪ ಅಳವಡಿಕೆ	
1		ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಕುಂಟಿಕಾನ ವೃತ್ತದಿಂದ ಕರ್ನಾಟಕ ಬ್ಯಾಂಕ್‌ವರೆಗಿನ ಕಾಂಕ್ರೀಟ್ ರಸ್ತೆ ವಿಭಜಕದಲ್ಲಿ ವಿದ್ಯುತ್ ದೀಪ ಅಳವಡಿಕೆ	28.00
2		ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಪಳ್ನೀರ್ ರಸ್ತೆ, ಹಂಪನ ಕಟ್ಟಾ ವೃತ್ತದಿಂದ ಅವೇರಿ ವೃತ್ತದ ವರೆಗಿನ ಕಾಂಕ್ರೀಟ್ ರಸ್ತೆ ವಿಭಜಕದಲ್ಲಿ ವಿದ್ಯುತ್ ದೀಪ ಅಳವಡಿಕೆ	11.00
3		ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಬಲ್ಮಠ ಲೋವೆರ್ ಬೆಂದೂರ್‌ನಿಂದ ಕದ್ರಿ ಶಿವಭಾಗ್ ವೃತ್ತದವರೆಗಿನ ಕಾಂಕ್ರೀಟ್ ರಸ್ತೆ ವಿಭಜಕದಲ್ಲಿ ವಿದ್ಯುತ್ ದೀಪ ಅಳವಡಿಕೆ	29.00
4		ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಬಂಟ್ಸ್ ಹಾಸ್ಟೆಲ್‌ನಿಂದ ಶಿವಭಾಗ್ ವೃತ್ತದ ವರೆಗಿನ ಕಾಂಕ್ರೀಟ್ ರಸ್ತೆ ವಿಭಜಕದಲ್ಲಿ ವಿದ್ಯುತ್ ದೀಪ ಅಳವಡಿಕೆ	42.00
5		ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಕರಾವಳಿ ವೃತ್ತದಿಂದ ಕಂಕನಾಡಿ ವೃತ್ತದವರೆಗಿನ ಕಾಂಕ್ರೀಟ್ ರಸ್ತೆ ವಿಭಜಕದಲ್ಲಿ ವಿದ್ಯುತ್ ದೀಪ ಅಳವಡಿಕೆ	8.00
6		ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಮೇರಿ ಹಿಲ್ ವೃತ್ತದಿಂದ ಬೊಂದೇಲ್ ವೃತ್ತದವರೆಗಿನ ಕಾಂಕ್ರೀಟ್ ರಸ್ತೆ ವಿಭಜಕದಲ್ಲಿ ವಿದ್ಯುತ್ ದೀಪ ಅಳವಡಿಕೆ	42.00
7		ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಬೊಂದೇಲ್ ವೃತ್ತದಿಂದ ಮರಕಡ ಜಂಕ್ಷನ್‌ವರೆಗಿನ ಕಾಂಕ್ರೀಟ್ ರಸ್ತೆ ವಿಭಜಕದಲ್ಲಿ ವಿದ್ಯುತ್ ದೀಪ ಅಳವಡಿಕೆ	42.00
c		ಇಂಧನ ಉಳಿತಾಯ ಕಾಮಗಾರಿಗಳು	
		ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಇಂಧನ ಉಳಿತಾಯ ವ್ಯವಸ್ಥೆ (Pilot Project))	100.00
		Sub-Total	2308.00
		V ಉದ್ಯಾನವನಗಳ ನಿರ್ಮಾಣ/ಅಭಿವೃದ್ಧಿ ಮತ್ತು ನಗರ ಅರಣ್ಯೀಕರಣ	
1		ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಉದ್ಯಾನವನಗಳ ಅಭಿವೃದ್ಧಿ	
	ಎ)	ಬೊಂದೇಲ್ ವಸತಿ ಗೃಹದ ಬಡಾವಣೆಯಲ್ಲಿ ಪಾರ್ಕ್ ಅಭಿವೃದ್ಧಿ	20.00
	ಬಿ)	ನೇತ್ರಾವತಿ ನಗರ ಪಾರ್ಕ್ ಅಭಿವೃದ್ಧಿ	20.00
	ಸಿ)	ಅಬ್ಬಕ್ಕ ನಗರ ವಸತಿ ಪಾರ್ಕ್ ಅಭಿವೃದ್ಧಿ	20.00
	ಡಿ)	ಡಾ// ಶಿವರಾಮ ಕಾರಂತ್ ನಗರ ಬಡಾವಣೆ ಪಾರ್ಕ್ ಅಭಿವೃದ್ಧಿ	20.00
	ಇ)	ಕಾರ್ನಾಡ್ ಸದಾಶಿವ ರಾವ್ ನಗರ ಪಾರ್ಕ್ ಅಭಿವೃದ್ಧಿ	20.00
	2	ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಗುಜ್ಜರ ಕೆರೆ ಉದ್ಯಾನ ಅಭಿವೃದ್ಧಿ	160.00
		Sub-Total	260.00
		Grand-Total	10000.00

2) ಈ ಅನುಮೋದನೆಯನ್ನು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ನೀಡಲಾಗಿದೆ.

1) ಈ ಅನುಮೋದನೆಯನ್ನು ಕ್ರಿಯಾ ಯೋಜನೆಯಲ್ಲಿ ಅಳವಡಿಸಿರುವ ಕಾಮಗಾರಿಗಳ ಪಟ್ಟಿಗೆ ಮಾತ್ರ ಎಂದು ಪರಿಗಣಿಸುವುದು. ಈ ಅನುಮೋದನೆಯನ್ನು ಕಾಮಗಾರಿಗಳ ಪಟ್ಟಿಗೆ ಅಥವಾ ಯಾವುದೇ ಕಾಮಗಾರಿಗೆ ನೀಡಿರುವ ಆಡಳಿತಾತ್ಮಕ ಅನುಮೋದನೆ ಎಂದು ಪರಿಗಣಿಸುವಂತಿಲ್ಲ.

2) ಸರ್ಕಾರದ ಆದೇಶ ಸಂಖ್ಯೆ : ನಅಇ 167 ಎಸಿಬಿ 2010, ದಿನಾಂಕ : 13-08-2010 ರಲ್ಲಿ ಹೇಳಲಾದ ಸೂಚನೆ/ಷರತ್ತುಗಳನ್ನು ಪಾಲಿಸುವುದು.

3) ಸರ್ಕಾರದ ಸುತ್ತೋಲೆ ಸಂಖ್ಯೆ : ನಅಇ 167 ಎಸಿಬಿ 2010, ದಿನಾಂಕ : 24-08-2010ರಲ್ಲಿ ಹೇಳಲಾದ ಇತರೆ ಸೂಚನೆಗಳನ್ನು ಪಾಲಿಸತಕ್ಕದ್ದು.

4) ಕರ್ನಾಟಕ ಪೌರ ನಿಗಮಗಳ ನಿಯಮಗಳು, 1977ರಲ್ಲಿ ನೀಡಲಾಗಿರುವ ಸೂಚನೆಗಳಂತೆ ಪ್ರತಿ ಕಾಮಗಾರಿಯ ಅಂದಾಜು ಪಟ್ಟಿಯನ್ನು ತಯಾರಿಸಿ ಅದಕ್ಕೆ ಸಕ್ಷಮ ಪ್ರಾಧಿಕಾರದಿಂದ ಆಡಳಿತಾತ್ಮಕ ಅನುಮೋದನೆಯನ್ನು ಟೆಂಡರ್/ಇ ಪ್ರೊಕ್ಯೂರ್‌ಮೆಂಟ್ ಪ್ರಕ್ರಿಯೆ ಪ್ರಾರಂಭಿಸುವ ಮೊದಲು ಕಡ್ಡಾಯವಾಗಿ ಪಡೆದುಕೊಳ್ಳತಕ್ಕದ್ದು.

5) ನಿಯಮಾನುಸಾರ ರೂ. 2.00 ಕೋಟಿ ಮೊತ್ತಕ್ಕೆ ಮೀರಿದ ಕಾಮಗಾರಿಗಳ ಅಂದಾಜು ಪಟ್ಟಿಗೆ ಸರ್ಕಾರದ ಹಂತದಲ್ಲಿ ಕಡ್ಡಾಯವಾಗಿ ಆಡಳಿತಾತ್ಮಕ ಅನುಮೋದನೆ ಪಡೆದುಕೊಳ್ಳತಕ್ಕದ್ದು.

6) ಕಾಮಗಾರಿಗಳ ಪಟ್ಟಿಯ ಕ್ರಮಸಂಖ್ಯೆ-12 ರಲ್ಲಿನ ಕಾಮಗಾರಿಯ ಅಂದಾಜು ಮೊತ್ತ ರೂ. 5.00 ಕೋಟಿಗೆ ಮೀರಿರುವುದರಿಂದ ಕರ್ನಾಟಕ ಸರ್ಕಾರಿ (ವ್ಯವಹಾರ ನಿರ್ವಹಣೆ) ನಿಯಮಗಳು 1977ರನ್ವಯ ಅಂತಹ ಕಾಮಗಾರಿಗಳಿಗೆ ಸಚಿವ ಸಂಪುಟದ ಅನುಮೋದನೆ ಪಡೆಯಬೇಕಾಗಿದ್ದು, ಸದರಿ ಕಾಮಗಾರಿಯ ಅಂದಾಜು ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ಪಡೆಯಲು ಅಂದಾಜು ಪಟ್ಟಿಯೊಂದಿಗೆ (ಡಿ.ಪಿ.ಆರ್) ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

7) ಕಾಮಗಾರಿಯ ಗುಣಾತ್ಮಕ ಮಟ್ಟವನ್ನು ಕಾಪಾಡಿಕೊಳ್ಳಲು 3rd party consultant ಮೂಲಕ ದೃಢೀಕರಿಸಿಕೊಳ್ಳತಕ್ಕದ್ದು.

8) ಅನುಮೋದಿತ ಕ್ರಿಯಾ ಯೋಜನೆಯ ಕಾಮಗಾರಿಗಳ ಪಟ್ಟಿಯಲ್ಲಿನ ಯಾವುದೇ ಕಾಮಗಾರಿಗಳ ಸ್ವರೂಪ ಬದಲಾವಣೆ ಅಂದಾಜು ಮೊತ್ತ ಪರಿಷ್ಕರಣೆ ಮಾಡತಕ್ಕದ್ದಲ್ಲ.

9) ಕ್ರಿಯಾ ಯೋಜನೆಯಲ್ಲಿನ ಕಾಮಗಾರಿಗಳ ಅನುಷ್ಠಾನದ ಪ್ರಗತಿಯ ವರದಿಯನ್ನು ಕಾಲ ಕಾಲಕ್ಕೆ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

10) ಈ ಅನುದಾನದ ಅಡಿ ಕಾಮಗಾರಿಗಳನ್ನು ನಿರ್ವಹಿಸುವ ಸಲುವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ಅದರಡಿ ರಚಿಸಿರುವ ನಿಯಮಗಳು ಮತ್ತು ಹೊರಡಿಸಲಾದ ಸೂಚನೆಗಳಲ್ಲಿನ ಎಲ್ಲಾ ಅಂಶಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ಟೆಂಡರ್ ಪ್ರಕ್ರಿಯೆ ನಡೆಸುವುದು.

11) 2ನೇ ಹಂತದ ರೂ. 100 ಕೋಟಿ ಅನುದಾನವನ್ನು ಪಾಲಿಕೆಯ 2011-12ರಿಂದ 2013-14ರ 3 ವರ್ಷಗಳಿಗೆ ನಿಗದಿಪಡಿಸಿಕೊಂಡು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವುದು. ಮೊದಲನೇ ವರ್ಷದಲ್ಲಿ ರೂ. 30 ರಿಂದ 35 ಕೋಟಿ ಅನುದಾನದ ಮೊತ್ತದ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸುವುದು.

12) 2011-12 ನೇ ಸಾಲಿಗೆ ವಾಸ್ತವವಾಗಿ ಅಗತ್ಯವಾಗಿ ಬೇಕಾಗಿರುವ ಅನುದಾನವನ್ನು ಕಾಮಗಾರಿಗಳನ್ನು ಗುತ್ತಿಗೆದಾರರಿಗೆ ವಹಿಸಿಕೊಟ್ಟು ಕಾಮಗಾರಿ ಪ್ರಾರಂಭಿಸಿದ ನಂತರದ ಹಂತದಲ್ಲಿ ಅನುದಾನ ಬಿಡುಗಡೆ ಮಾಡಲು ಪರಿಗಣಿಸಲಾಗುವುದು.

3) ಈ ಆದೇಶವನ್ನು ಆರ್ಥಿಕ ಇಲಾಖೆಯು ತನ್ನ ಅನಧಿಕೃತ ಟಿಪ್ಪಣಿ ಸಂಖ್ಯೆ : ಆಇ 43 ವೆಚ್ಚ-9-2011, ದಿನಾಂಕ : 9-2-2011 ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಎಂ.ಆರ್. ಮಹೇಶ್‌ಕುಮಾರ್
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.
(ಮಹಾನಗರಪಾಲಿಕೆ-2)

ಪಿ. ಆರ್. 637

INFORMATION TECHNOLOGY, BIOTECHNOLOGY AND SCIENCE AND TECHNOLOGY SECRETARIAT

Corrigendum

No. ITD 01 MDA 2010 (P) Bangalore, Dated : 02-03-2011

In the subject portion of the Government No : ITD 01 MDA 2010 (P) dated : 19-02-2011, the word **"BT Fishing"** shall be read as **"BT Finishing"**.

By Order and in the name of the Governor of Karnataka
K. Borlingaiah
Under Secretary to Government (I/c),
Department of Information Technology,
Biotechnology and Science & Technology.

PR 638

ಕಂದಾಯ ಸಚಿವಾಲಯ

ವಿಷಯ : ಆಸರೆ ಯೋಜನೆಯಡಿಯಲ್ಲಿ ಮನೆ ನಿರ್ಮಾಣಕ್ಕಾಗಿ ವಿದ್ಯುಚ್ಛಕ್ತಿ ವ್ಯತ್ಯಯ ಉಂಟಾದ ಗ್ರಾಮಗಳಲ್ಲಿ ಡೀಸೆಲ್ ಜನರೇಟರನ್ನು ಬಾಡಿಗೆ ಆಧಾರದ ಮೇಲೆ ಪಡೆಯುವ ಬಗ್ಗೆ.

ಓದಲಾಗಿದೆ : 1) ಧಾರವಾಡ ಜಿಲ್ಲಾಧಿಕಾರಿಗಳ ಪತ್ರ ಸಂ : ಸಿಎಲ್/ಸಿಆರ್/2009-10, ದಿನಾಂಕ : 00-10-2010.
2) ಗದಗ್ ಜಿಲ್ಲಾಧಿಕಾರಿಗಳ ಪತ್ರ ಸಂ: ಪುನರ್ವಸತಿ ವಹಿ/ವಹಿ/2010-11, ದಿನಾಂಕ : 18-00-11-2010.

ಪ್ರಸ್ತಾವನೆ :

ಮೇಲೆ ಓದಲಾದ ಧಾರವಾಡ ಮತ್ತು ಗದಗ್ ಜಿಲ್ಲಾಧಿಕಾರಿಗಳ ಪತ್ರದಲ್ಲಿ ಆಸರೆ ಯೋಜನೆಯಡಿಯಲ್ಲಿ ಮನೆ ನಿರ್ಮಾಣಕ್ಕಾಗಿ ವಿದ್ಯುಚ್ಛಕ್ತಿ ವ್ಯತ್ಯಯ ಉಂಟಾದ ಗ್ರಾಮಗಳಲ್ಲಿ ಡೀಸೆಲ್ ಜನರೇಟರನ್ನು ಬಾಡಿಗೆ ಆಧಾರದ ಮೇಲೆ ಪಡೆಯಲಾಗಿರುತ್ತದೆ. ಈ ಡೀಸೆಲ್ ಜನರೇಟರ್‌ನಿಂದ ವಿದ್ಯುಚ್ಛಕ್ತಿ

ಪಡೆದು ಮನೆ ನಿರ್ಮಾಣಕ್ಕೆ ನೀರನ್ನು ಒದಗಿಸಲಾಗಿರುತ್ತದೆ. ಆದುದರಿಂದ, ಈ ಡೀಸೆಲ್ ಜನರೇಟರ್‌ನ ಬಾಡಿಗೆಯ ಹಣ ಮತ್ತು ವಾಟರ್ ಟ್ಯಾಂಕರ್ ಬಾಬ್ತು ಧಾರವಾಡ ಜಿಲ್ಲಾಧಿಕಾರಿಗಳು ರೂ. 10,20,455.35 ಮತ್ತು ಗದಗ್ ಜಿಲ್ಲಾಧಿಕಾರಿಗಳು -ರೂ. 7,68,604.57 ಗಳನ್ನು ಬಿಡುಗಡೆ ಮಾಡುವಂತೆ ಕೋರಿರುತ್ತಾರೆ. ಈ ಹಿನ್ನೆಲೆಯಲ್ಲಿ, ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ : ಆರ್‌ಡಿ 400 ಟಿಎನ್‌ಆರ್ 2010, ಬೆಂಗಳೂರು, ದಿನಾಂಕ : 1ನೇ ಮಾರ್ಚಿ 2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಆಸರೆ ಯೋಜನೆಯಡಿಯಲ್ಲಿ ಮನೆಗಳ ನಿರ್ಮಾಣಕ್ಕಾಗಿ ಡೀಸೆಲ್ ಜನರೇಟರನ್ನು ಬಾಡಿಗೆ ಆಧಾರದ ಮೇಲೆ ಪಡೆದ ಬಾಬ್ತು ಮತ್ತು ವಾಟರ್ ಟ್ಯಾಂಕರ್ ಬಾಬ್ತನ್ನು ಧಾರವಾಡ ಮತ್ತು ಗದಗ ಜಿಲ್ಲಾಧಿಕಾರಿಗಳಿಗೆ ಕೆಳಕಂಡಂತೆ ಬಿಡುಗಡೆ ಮಾಡಲಾಗಿದೆ.

1)	ಧಾರವಾಡ ಜಿಲ್ಲಾಧಿಕಾರಿಗಳು	ರೂ. 10,20,455-00
2)	ಗದಗ್ ಜಿಲ್ಲಾಧಿಕಾರಿಗಳು	ರೂ. 7,68,605-00
	ಒಟ್ಟು	ರೂ. 17,89,060-00

(ರೂಪಾಯಿ ಹದಿನೇಳು ಲಕ್ಷದ ಎಂಬತ್ತೊಂಬತ್ತು ಸಾವಿರದ ಅರವತ್ತು ಮಾತ್ರ).

ಈ ವೆಚ್ಚವನ್ನು ಲೆಕ್ಕ ಶೀರ್ಷಿಕೆ 8235-00-111-0-02 Public Contributions to the Calamity Relief ಅಡಿಯಲ್ಲಿ ಭರಿಸತಕ್ಕದ್ದು.

ಮೇಲಿನಂತೆ ಬಿಡುಗಡೆ ಮಾಡಿರುವ ಮೊತ್ತವನ್ನು ಜಿಲ್ಲಾಧಿಕಾರಿಗಳು ಸದರಿ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಡ್ರಾ ಮಾಡಲು ಪೇಯೀಸ್ ರಸೀದಿ (ಸಿಟಿಎಸ್-8) ಬಿಲ್ಲು ತಯಾರಿಸಿ, ಮೇಲು ಸಹಿ ಮಾಡಿ ಖಜಾನೆಗೆ ಸಲ್ಲಿಸಲು ಸೂಚಿಸಿದೆ.

ಈಗ ಬಿಡುಗಡೆ ಮಾಡುತ್ತಿರುವ ಅನುದಾನಕ್ಕೆ ಹಣ ಬಳಕೆ ಪತ್ರವನ್ನು ವೆಚ್ಚದ ವಿವರಗಳೊಂದಿಗೆ ಸಲ್ಲಿಸುವುದು. ಹಾಗೂ ಭೌತಿಕ ಹಾಗೂ ಆರ್ಥಿಕ ಪ್ರಗತಿಯ ವಿವರಗಳನ್ನು ಸಹ ಸಲ್ಲಿಸುವುದು.

ಈ ಮೊತ್ತವನ್ನು ಯಾವ ಉದ್ದೇಶಕ್ಕಾಗಿ ಬಿಡುಗಡೆ ಮಾಡಲಾಗಿದೆಯೋ ಅದೇ ಉದ್ದೇಶಕ್ಕೆ ಉಪಯೋಗಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಟಿ. ಗಂಗಾಧರ
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ವಿ.ನಿ & ಸೇವೆಗಳು-2)

ಪಿ. ಆರ್. 639

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವಾಲಯ

ವಿಷಯ : ಶಿವಮೊಗ್ಗ, ಚಿಕ್ಕಮಗಳೂರು ಮತ್ತು ಉತ್ತರ ಕನ್ನಡ ಜಿಲ್ಲೆಗಳನ್ನೊಳಗೊಂಡಂತೆ ಸಹ್ಯಾದ್ರಿ ಪಾರಂಪರಿಕ ಅಭಿವೃದ್ಧಿಗಾಗಿ ಶಿವಮೊಗ್ಗದಲ್ಲಿ "ಸಹ್ಯಾದ್ರಿ ಪಾರಂಪರಿಕ ಅಭಿವೃದ್ಧಿ ಪ್ರಾಧಿಕಾರ" ಸ್ಥಾಪನೆಗಾಗಿ ಅನುದಾನ ಬಿಡುಗಡೆ ಕುರಿತು.

ಓದಲಾಗಿದೆ : 1) ಸರ್ಕಾರದ ಆದೇಶ ಸಂಖ್ಯೆ ಕಸಂವಾಪ್ರ 145 ಕೆಎಂಯು 2009 ದಿನಾಂಕ : 28-10-2010

2) ಆಯುಕ್ತರು, ಪ್ರಾಚ್ಯವಸ್ತು ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆ ರವರ ದಿನಾಂಕ 14-02-2011 ರಂದು ಕೊನೆಗೊಂಡ ಪತ್ರ ಸಂಖ್ಯೆ : ಆಪ್ರಾಸಂಪ/ಸ.ಪ.ಅ.ಪ್ರಾ/ 2010-11.

ಪ್ರಸ್ತಾವನೆ :

2010-11ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಶಿವಮೊಗ್ಗ, ಉತ್ತರ ಕನ್ನಡ ಮತ್ತು ಚಿಕ್ಕಮಗಳೂರು ಜಿಲ್ಲೆಗಳ ಪಾರಂಪರಿಕ ಕ್ಷೇತ್ರಗಳ ಅಭಿವೃದ್ಧಿಗಾಗಿ ಶಿವಮೊಗ್ಗದಲ್ಲಿ ಸಹ್ಯಾದ್ರಿ ಪಾರಂಪರಿಕ ಅಭಿವೃದ್ಧಿ ಪ್ರಾಧಿಕಾರವನ್ನು ಸ್ಥಾಪಿಸುವ ಸಲುವಾಗಿ ರೂ. 20.00 ಕೋಟಿ ಬಿಡುಗಡೆ ಮಾಡುವುದಾಗಿ ಘೋಷಿಸಿರುತ್ತಾರೆ. ಆ ಮೇರೆಗೆ "ಸಹ್ಯಾದ್ರಿ ಪಾರಂಪರಿಕ ಅಭಿವೃದ್ಧಿ ಪ್ರಾಧಿಕಾರ ಸ್ಥಾಪನೆಗಾಗಿ ಮೇಲೆ (1) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಆಡಳಿತಾತ್ಮಕ ಮಂಜೂರಾತಿ ನೀಡಿ ಕಾರ್ಯಕಾರಿ ಆದೇಶವನ್ನು ಹೊರಡಿಸಲಾಗಿದೆ ಹಾಗೂ 2010-11ನೇ ಸಾಲಿನ ಆಯವ್ಯಯದಲ್ಲಿ ಪ್ರಾಧಿಕಾರದ ರಚನೆಗಾಗಿ ರೂ. 10.00 ಕೋಟಿ ಅನುದಾನ ಒದಗಿಸಲಾಗಿದೆ.

II.	Pan, Supari, Tobacco & Intoxicants	449	583	574	430	381	464	520	494.	363	431	479
III.	Fuel & Light	432	418	465	548	489	417	421	484	338	605	358
IV.	Housing	100	100	100	100	100	100	100	100	100	100	100
V.	Clothing, Bedding & Footwear	276	281	315	393	338	257	428	458	265	603	233

Group/Sub-Group	Bellary	Bhadra-vathi	Davan gere	Dan deli	Gul barga	Hari har	Hassan	Man dya	Man galore	Rai chur	Tum kur
1	2	3	4	5	6	7	8	9	10	11	12
VI. **MISCELLANEOUS:**											
(a) Medical Care	663	820	402	458	359	253	456	388	358	426	242
(b) Education, Recreation & Amusement	571	457	765	261	472	472	563	499	667	750	548
(c) Transport & Communication	422	513	520	397	597	541	453	46	466	494	473
(d) Personal Care & effects	333	336	370	337	403	307	333	354	354	308	318
(e) Others Miscellaneous Group	394 466	427 452	450 487	505 396	367 422	301 344	325 412	408 401	323 419	561 490	309 362
GENERAL INDEX	**450**	**443**	**484**	**469**	**421**	**396**	**448**	**473**	**438**	**504**	**387**
To convert to Base 1960 Multiply by Linking Factor.	**7.39**	**9.19**	**8.27**	...	**8.26**	**8.56**	**9.25**	**7.92**	**9.31**	...	...

For Director.

112/1(KTK)/2010 NCPI

Government of India

Ministry of Labour

Labour Bureau

'Cleremont', Shimla-171004

Dated:14-10-2010

CONSUMER PRICE INDEX NUMBERS FOR INDUSTRIAL WORKERS (BASE-2001=100)

ate: Karnataka Dated: Month/Year: August, 2010

Group/Sub-group/ centre	Bangalore	Belgaum	Hubli-Dharwar	Mercara	Mysore
1	2	3	4	5	6
Food					
a) Cereals & Products	201	196	198	185	198
b) Pulses & Products	225	228	244	225	213
c) Oils & Fats	189	198	174	161	169
d) Meat, Fish & Eggs	214	220	229	200	210
e) Milk & Products	178	156	140	169	180
f) Condiments & Spices	184	184	187	169	196
g) Vegetables & Fruits	162	201	169	176	157
h) Other Food	199	183	180	187	188
. FOOD GROUP	194	192	188	186	189
I-Pan, Supari, Tobacco & Intoxicants	174	158	167	145	168
II-Fuel & Light	137	150	149	224	147
V-Housing Index	197	187	216	101	197
V-Clothing, Bedding & Footwear	114	119	134	130	132

Group/Sub-group/ centre	Bangalore	Belgaum	Hubli-Dharwar	Mercara	Mysore
1	2	3	4	5	6
Miscellaneous					
(a) Medical Care	163	162	144	169	141
(b) Education, Recreation & Amusement	146	149	158	157	122
(c) Transport & Communication	222	234	225	164	182
(d) Personal Care & effects	167	156	155	147	149
(e) Others	180	152	170	175	173
VI. Miscellaneous Group	179	170	169	158	151
General Index	182	179	182	171	175

PR-1636

J.L. KAITH
ECONOMIC OFFICER.

GOVERNMENT OF KARNATAKA

DIRECTORATE OF ECONOMICS AND STATISTICS, BANGALORE-1

Consumer Price Index Numbers For Industrial Workers

No. DES 24 PWX 2010

State: Karnataka

Base: 1987-88=100

Month: September, 2010

Date :18-11-2010

	Group/Sub-Group	Bellary	Bhadra-vathi	Davan gere	Dan deli	Gul barga	Hari har	Hassan	Man dya	Man galore	Rai chur	Tum kur
	1	2	3	4	5	6	7	8	9	10	11	12
I.	**FOOD:**											
	(a) Cereals & Products	650	571	693	603	565	569	581	636	535	624	651
	(b) Pulses & Products	619	614	662	752	579	682	691	632	635	652	656
	(c) Oil & Fats	339	337	319	336	306	330	292	338	259	324	353
	(d) Meat, Fish & Eggs	651	619	661	561	706	669	568	656	888	710	584
	(e) Milk & Products	409	414	491	456	471	485	446	511	434	471	403
	(f) Condiments & Spices	483	558	757	656	429	394	493	468	495	615	522
	(g) Vegetables & Fruits	563	501	487	579	555	493	637	628	468	524	599
	(h) Other Food	473	617	519	569	498	463	477	455	433	489	487
	FOOD GROUP INDEX	**553**	**543**	**604**	**570**	**521**	**515**	**531**	**576**	**543**	**567**	**551**
II.	Pan, Supari, Tobacco & Intoxicants	469	590	586	429	379	462	516	502	363	431	474
III.	Fuel & Light	434	406	465	603	489	416	436	484	350	609	358
IV.	Housing	100	100	100	100	100	100	100	100	100	100	100
V.	Clothing, Bedding & Footwear	276	284	316	393	334	259	428	474	264	603	233

Group/Sub-Group	Bellary	Bhadra-vathi	Davan gere	Dan deli	Gul barga	Hari har	Hassan	Man dya	Man galore	Rai chur	Tum kur
1	2	3	4	5	6	7	8	9	10	11	12
VI. MISCELLANEOUS:											
(a) Medical Care	663	870	402	457	359	253	456	388	358	426	242
(b) Education, Recreation & Amusement	571	469	765	261	455	472	563	498	667	750	548
(c) Transport & Communication	422	532	520	397	597	545	453	46	467	494	475
(d) Personal Care & effects	334	338	368	340	403	307	333	354	355	314	322
(e) Others	394	432	450	496	367	297	325	409	340	561	314
Miscellaneous Group	467	463	487	394	418	343	412	401	424	492	365
GENERAL INDEX	**454**	**444**	**488**	**470**	**422**	**399**	**450**	**478**	**441**	**506**	**389**
To convert to Base 1960 Multiply by Linking Factor.	7.39	9.19	8.27	...	8.26	8.56	9.25	7.92	9.31	...	...

For Director.

112/1(KTK)/2010 NCPI

Government of India

Ministry of Labour

Labour Bureau

'Cleremont', Shimla-171004

Dated:03-11-2010

CONSUMER PRICE INDEX NUMBERS FOR INDUSTRIAL WORKERS (BASE-2001=100)

te: Karnataka Dated: Month/Year: September, 2010

Group/Sub-group/Centre	Bangalore	Belgaum	Hubli-Dharwar	Mercara	Mysore
1	2	3	4	5	6
ood					
a) Cereals & Products	199	197	197	181	202
b) Pulses & Products	219	213	228	216	211
c) Oils & Fats	205	198	192	171	172
d) Meat, Fish & Eggs	218	233	229	198	215
e) Milk & Products	179	178	145	169	180
) Condiments & Spices	206	205	219	176	212
g) Vegetables & Fruits	184	203	178	169	172
h) Other Food	203	197	179	185	188
FOOD GROUP	199	199	191	184	193
-Pan, Supari, Tobacco & Intoxicants	176	159	167	143	168
I-Fuel & Light	136	152	148	224	147
V-Housing Index	197	187	216	101	197
-Clothing, Bedding & Footwear	118	122	129	130	132

Group/Sub-group/Centre	Bangalore	Belgaum	Hubli-Dharwar	Mercara	Mysore
1	2	3	4	5	6
Miscellaneous					
(a) Medical Care	166	164	145	172	141
(b) Education, Recreation & Amusement	153	149	158	158	122
(c) Transport & Communication	223	234	233	165	184
(d) Personal Care & effects	169	158	158	149	153
(e) Others	168	154	139	175	173
VI. Miscellaneous Group	181	171	168	159	153
General Index	185	183	183	169	178

J.L. KAITH

PR-1657

ECONOMIC OFFICER.

GOVERNMENT OF KARNATAKA

DIRECTORATE OF ECONOMICS AND STATISTICS, BANGALORE-1

Consumer Price Index Numbers For Industrial Workers

No. DES 24 PWX 2010

Month: October, 2010

State: Karnataka

Base: 1987-88=100

Date :21-12-2010

Group/Sub-Group		Bellary	Bhadra-vathi	Davan gere	Dan deli	Gul barga	Hari har	Hassan	Man dya	Man galore	Rai chur	Tum kur
1		2	3	4	5	6	7	8	9	10	11	12
I.	FOOD:											
	(a) Cereals & Products	653	570	695	613	562	571	581	638	535	624	653
	(b) Pulses & Products	611	581	640	749	580	686	681	644	641	625	619
	(c) Oil & Fats	343	337	322	335	306	335	292	342	267	330	356
	(d) Meat, Fish & Eggs	651	614	666	539	710	669	568	656	888	710	622
	(e) Milk & Products	409	414	489	467	478	485	446	511	434	471	403
	(f) Condiments & Spices	514	566	791	657	449	411	519	526	520	628	524
	(g) Vegetables & Fruits	582	526	538	603	536	514	645	621	467	539	649
	(h) Other Food	473	616	519	567	531	464	477	462	436	505	485
	FOOD GROUP INDEX	**558**	**542**	**610**	**574**	**525**	**520**	**533**	**583**	**546**	**569**	**556**
II.	Pan, Supari, Tobacco & Intoxicants	469	605	597	426	390	450	535	472	363	431	498
III.	Fuel & Light	433	421	465	604	489	424	436	484	363	609	358
IV.	Housing	100	100	100	100	100	100	100	100	100	100	100
V.	Clothing, Bedding & Footwear	276	284	321	393	338	240	428	474	264	610	233

	Group/Sub-Group	Bellary	Bhadra-vathi	Davan gere	Dan deli	Gul barga	Hari har	Hassan	Man dya	Man galore	Rai chur	Tum kur
	1	2	3	4	5	6	7	8	9	10	11	12
VI.	**MISCELLANEOUS:**											
	(a) Medical Care	663	870	402	469	359	253	456	388	358	426	242
	(b) Education, Recreation & Amusement	571	469	764	261	455	472	563	498	667	751	548
	(c) Transport & Communication	422	532	520	397	574	545	453	46	467	494	475
	(d) Personal Care & effects	336	339	370	339	403	307	333	355	358	314	331
	(e) Others	394	457	456	496	371	297	325	409	340	565	314
	Miscellaneous Group	467	470	489	396	416	343	412	401	425	494	367
	GENERAL INDEX	**457**	**447**	**492**	**472**	**425**	**400**	**452**	**480**	**444**	**508**	**392**
	To convert to Base 1960 Multiply by Linking Factor.											

For Director.

112/1(KTK)/2010 NCPI
Government of India
Ministry of Labour
Labour Bureau

'Cleremont', Shimla-171004
Dated:03-12-2010

CONSUMER PRICE INDEX NUMBERS FOR INDUSTRIAL WORKERS (BASE-2001=100)

State: Karnataka Dated: Month/Year: October, 2010

Group/Sub-group/ Centre	Bangalore	Belgaum	Hubli-Dharwar	Mercara	Mysore
1	2	3	4	5	6
Food					
(a) Cereals & Products	193	195	196	182	200
(b) Pulses & Products	212	212	226	215	202
(c) Oils & Fats	204	186	199	172	172
(d) Meat, Fish & Eggs	216	233	227	202	222
(e) Milk & Products	179	177	144	169	180
(f) Condiments & Spices	219	208	227	186	214
(g) Vegetables & Fruits	180	213	194	187	176
(h) Other Food	203	197	179	186	188
I. FOOD GROUP	197	199	193	187	193
II-Pan, Supari, Tobacco & Intoxicants	176	159	167	143	173
III-Fuel & Light	136	152	148	261	147
IV-Housing Index	197	187	216	101	197
V-Clothing, Bedding & Footwear	113	116	128	130	132

Group/Sub-group/ Centre	Bangalore	Belgaum	Hubli-Dharwar	Mercara	Mysore
1	2	3	4	5	6
Miscellaneous:					
(a) Medical Care	166	164	145	156	141
(b) Education, Recreation & Amusement	147	149	158	158	122
(c) Transport & Communication	223	235	234	165	185
(d) Personal Care & effects	165	158	158	151	156
(e) Others	169	154	139	174	173
VI. Miscellaneous Group	179	171	168	159	154
General Index	184	183	183	175	178

PR-1779

J.L. KAITH
ECONOMIC OFFICER.

ನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಬೆಂಗಳೂರು ರವರ ನಡವಳಿ

ವಿಷಯ: ಕೋಲಾರ ಜಿಲ್ಲೆ, ಮುಳಬಾಗಿಲು ತಾಲ್ಲೂಕು, ಬಂಡಹಳ್ಳಿ ಗ್ರಾಮದ ಸರ್ವೆ ನಂ.57ರಲ್ಲಿ 2.20 ಎಕರೆಗೆ ಕಪ್ಪು ಶಿಲೆಗಾಗಿ ಶ್ರೀಮತಿ ಓ.ವಿ. ನಿರ್ಮಲಾದೇವಿರವರಿಗೆ ಮಂಜೂರಾಗಿದ್ದ ಕಲ್ಲು ಗಣಿಗುತ್ತಿಗೆ ಸಂಖ್ಯೆ: 719ರ ಗುತ್ತಿಗೆಯನ್ನು ಪುನರ್ ಸ್ಥಾಪಿಸಿರುವ ಬಗ್ಗೆ.

ಉಲ್ಲೇಖ: ಸರ್ಕಾರದ ಪತ್ರ ಸಂಖ್ಯೆ: ಸಿಐ 386 ಎಂಎಂಎನ್ 2010, ದಿನಾಂಕ:14.09.2010.

ಪ್ರಸ್ತಾವನೆ:

ಕೋಲಾರ ಜಿಲ್ಲೆ, ಮುಳಬಾಗಿಲು ತಾಲ್ಲೂಕು, ಬಂಡಹಳ್ಳಿ ಗ್ರಾಮದ ಸರ್ವೆ ನಂ.57ರಲ್ಲಿ 2.20 ಎಕರೆ ವಿಸ್ತೀರ್ಣದಲ್ಲಿ ಕಪ್ಪು ಅಲಂಕಾರಿಕ ಶಿಲೆಗಾಗಿ ಕಲ್ಲು ಗಣಿ ಗುತ್ತಿಗೆ ಸಂಖ್ಯೆ:719ರ ಗುತ್ತಿಗೆಯನ್ನು ಶ್ರೀಮತಿ ನಿರ್ಮಲಾದೇವಿರವರ ಹೆಸರಿನಲ್ಲಿ ದಿನಾಂಕ:01.07.2005 ರಿಂದ 10 ವರ್ಷಗಳಿಗಾಗಿ ಗುತ್ತಿಗೆ ಮಂಜೂರು ಮಾಡಲಾಗಿತ್ತು. ಗುತ್ತಿಗೆದಾರರು ಗುತ್ತಿಗೆ ಮೇಲಿನ ಬಾಕಿಯನ್ನು ಪಾವತಿಸದೆ ಗುತ್ತಿಗೆಯನ್ನು ನಿಷ್ಕ್ರಿಯಗೊಳಿಸಿದ ಕಾರಣ ದಿನಾಂಕ:10.03.2010 ರಿಂದ ಜಾರಿಗೆ ಬರುವಂತೆ ನಿರ್ದೇಶಕರಿಗೆ ಪ್ರತ್ಯೋಜಿಸಿರುವ ಅಡಿಯಲ್ಲಿ ಗುತ್ತಿಗೆಯನ್ನು ರದ್ದುಗೊಳಿಸಲಾಗಿತ್ತು.

ಅದರಂತೆ ಗುತ್ತಿಗೆದಾರರು ಪರಿಷ್ಕರಣ ಅರ್ಜಿಯನ್ನು ನಿಯಮ 53(2)ರ ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮ 1994ರಂತೆ ಸರ್ಕಾರಕ್ಕೆ ಸಲ್ಲಿಸಿದ್ದು ಅದರಂತೆ ಸರ್ಕಾರವು ಉಲ್ಲೇಖಿತ ಪತ್ರದಲ್ಲಿ ಅರ್ಜಿಯನ್ನು ಪರಿಗಣಿಸಿ ಗುತ್ತಿಗೆಯನ್ನು ಪುನರ್ ಸ್ಥಾಪಿಸಲು ಆದೇಶಿಸಿರುವುದರಿಂದ ಈ ಆದೇಶ ಮಾಡಲಾಗಿದೆ.

ಆದೇಶ ಸಂಖ್ಯೆ: ಗಭೂಇ/ಕಗಗು/719/2010–11/10426, ದಿನಾಂಕ:15ನೇ ಅಕ್ಟೋಬರ್, 2010

ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ, ನಿರ್ದೇಶಕರಿಗೆ ಸರ್ಕಾರದ ಪತ್ರದ ದಿನಾಂಕ:14.09.2010ರಲ್ಲಿ ನಿರ್ದೇಶಿಸಿರುವಂತೆ ಕೋಲಾರ ಜಿಲ್ಲೆ, ಮುಳಬಾಗಿಲು ತಾಲ್ಲೂಕು, ಬಂಡಹಳ್ಳಿ ಗ್ರಾಮದ ಸರ್ವೆ ನಂ.57ರಲ್ಲಿ 2.20 ಎಕರೆ ವಿಸ್ತೀರ್ಣದಲ್ಲಿ ಕಪ್ಪು ಅಲಂಕಾರಿಕ ಶಿಲೆಗಾಗಿ ಕಲ್ಲು ಗಣಿ ಗುತ್ತಿಗೆ ಸಂಖ್ಯೆ:719ರ ಗುತ್ತಿಗೆಯನ್ನು ಶ್ರೀಮತಿ ನಿರ್ಮಲಾದೇವಿರವರ ಹೆಸರಿನಲ್ಲಿ ಕಲ್ಲುಗಣಿ ಗುತ್ತಿಗೆಯನ್ನು ಗುತ್ತಿಗೆ ರದ್ದುಗೊಳಿಸಿದ ದಿನಾಂಕ:10.03.2010 ರಿಂದ ಗುತ್ತಿಗೆಯನ್ನು ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮ 1994 ರ ನಿಯಮಗಳೊಳಗೊಂಡಂತೆ ಗುತ್ತಿಗೆಯನ್ನು ಪುನರ್ ಸ್ಥಾಪಿಸಲಾಗಿದೆ. ನಿಯಮ 6(3)ರ ಉಲ್ಲಂಘನೆ ಮಾಡಿದರಿಂದ ರೂ.10,000/–ಗಳ ದಂಡವನ್ನು ಪಾವತಿಸುವ ಷರತ್ತಿಗೆ ಒಳಪಡಿಸಿ, ಕಲ್ಲುಗಣಿ ಗುತ್ತಿಗೆ ಅವಧಿ ಹಾಗೂ ಇನ್ನಿತರ ಷರತ್ತಿನಂತೆ ಗುತ್ತಿಗೆಯನ್ನು ಪುನರ್ ಸ್ಥಾಪಿಸಲಾಗಿದೆ.

ಪಿ.ಆರ್.1533

ನಿರ್ದೇಶಕರು,
ಗಣಿ ಮತ್ತು ಭೂವಿಜ್ಞಾನ ಇಲಾಖೆ,
ಬೆಂಗಳೂರು.

ನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಬೆಂಗಳೂರು ರವರ ನಡವಳಿಗಳು

ಸಂಖ್ಯೆ: ಗಭೂಇ:ಗಗುಶಾ:29 ಎಎಂಎಲ್94: 10–11/1685, ದಿನಾಂಕ:06.10.2010

ವಿಷಯ: ಶ್ರೀ ಹೆಚ್. ಮಹಮದ್ ಇಕ್ಬಾಲ್ ರವರು ದಿನಾಂಕ:26.02.1994ರಂದು ಬಳ್ಳಾರಿಜಿಲ್ಲೆ,, ಹರಪನಹಳ್ಳಿ ತಾಲ್ಲೂಕು, ಯಾದಿಹಳ್ಳಿ ಮತ್ತು ಕಂಚಿಕೆರೆ ಗ್ರಾಮಗಳ 345.00 ಎಕರೆ ಪ್ರದೇಶದಲ್ಲಿ ವೈಟ್‌ಕ್ವಾಡ್ಜ್ ಖನಿಜಕ್ಕಾಗಿ ಸಲ್ಲಿಸಿರುವ ಗಣಿಗುತ್ತಿಗೆ ಅರ್ಜಿ ಬಗ್ಗೆ.

ಉಲ್ಲೇಖ: ಈ ಕಛೇರಿ ಪತ್ರ ಸಂಖ್ಯೆ: 29 ಎಎಂಎಲ್ 94:1164: ದಿನಾಂಕ:09.08.1994.

ಪ್ರಸ್ತಾವನೆ:

ಶ್ರೀ ಹೆಚ್. ಮಹಮದ್ ಇಕ್ಬಾಲ್ ರವರು ಬಳ್ಳಾರಿ ಜಿಲ್ಲೆ ಹರಪನಹಳ್ಳಿ ತಾಲ್ಲೂಕು, ಯಾದಿಹಳ್ಳಿ ಮತ್ತು ಕಂಚಿಕೆರೆ ಗ್ರಾಮಗಳ 345.00 ಎಕರೆ ಪ್ರದೇಶದಲ್ಲಿ ವೈಟ್‌ಕ್ವಾಡ್ಜ್ ಖನಿಜಕ್ಕಾಗಿ ಕೋರಿ ಸಲ್ಲಿಸಿರುವ ಗಣಿಗುತ್ತಿಗೆ ಅರ್ಜಿ ಸಂಖ್ಯೆ:29 ಎಎಂಎಲ್ 1994ನ್ನು ಪರಿಶೀಲಿಸಿದೆ.

ಅರ್ಜಿದಾರರು ಗಣಿಗುತ್ತಿಗೆಗಾಗಿ ಕೋರಿರುವ ಪ್ರದೇಶವು 15 ಎಎಂಎಲ್ 88ರ ಪ್ರದೇಶದ ಮೇಲೆ ಅತಿವ್ಯಾಪ್ತಿಯಾಗುತ್ತಿದ್ದು, ಪ್ರಸ್ತುತ ಅರ್ಜಿಯನ್ನು ಪರಿಗಣಿಸಲು ಸ್ಥಳದ ಲಭ್ಯತೆ ಇಲ್ಲದಿರುವುದರಿಂದ ಅರ್ಜಿಯನ್ನು ತಿರಸ್ಕರಿಸುವಂತೆ ಕೋರಿ, ಉಲ್ಲೇಖ (1) ರ ಈ ಕಛೇರಿ ಪತ್ರದಲ್ಲಿ

ರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿತ್ತು. ,ದಿನಾಂಕ:15.07.1998ರಲ್ಲಿ ನೆನಪೋಲೆಯನ್ನೂ ಸಹ ಬರೆಯಲಾಗಿತ್ತು. ಏತನ್ಮಧ್ಯೆ, ನಿರ್ದೇಶಕರಿಗೆ ಅರ್ಜಿಗಳನ್ನು ರಸ್ಕರಿಸುವುದಕ್ಕೆ ಅಧಿಕಾರ ಪ್ರತ್ಯಾಯೋಜನೆಯಾಗಿರುವುದರಿಂದ, ಕೆಳಕಂಡ ಆದೇಶ

ಆದೇಶ

ಸರ್ಕಾರದ ಆದೇಶ ಸಂಖ್ಯೆ: ಸಿಐ 03 ಎಂಎಂಎಂ 95 ದಿನಾಂಕ:27.05.1995 ಮತ್ತು ಸಿಐ 214 ಎಂಎಂಎಂ 2006 ನಾಂಕ:09.02.2007ರನ್ವಯ ನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಇವರಿಗೆ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ, ಣಿಗುತ್ತಿಗೆ ಅರ್ಜಿ ಸಂಖ್ಯೆ: 29 ಎಎಂಎಲ್ 1994ನ್ನು ಮೇಲೆ ವಿವರಿಸಿದ ಕಾರಣಗಳಿಗಾಗಿ ತಿರಸ್ಕರಿಸಲಾಗಿದೆ.

ನಿರ್ದೇಶಕರು,
ಗಣಿ ಮತ್ತು ಭೂವಿಜ್ಞಾನ ಇಲಾಖೆ,
ಬೆಂಗಳೂರು.

ಪಿ.ಆರ್.1534

ನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಬೆಂಗಳೂರು ರವರ ನಡವಳಿಗಳು

ಸಂಖ್ಯೆ: ಗಭೂಇ:ಗಗುಶಾ:1466 ಎಎಂಎಲ್04: 10–11/1696, ದಿನಾಂಕ:06.10.2010

ವಿಷಯ: ಶ್ರೀ ಹಟ್ಟಿ ಕುಮಾರಸ್ವಾಮಿ ರವರು ಬಳ್ಳಾರಿ ಜಿಲ್ಲೆ ಮತ್ತು ತಾಲ್ಲೂಕು, ಹಾವಿನಮಡುಗು ಗ್ರಾಮದಲ್ಲಿ 50.00 ಎಕರೆ ಪ್ರದೇಶದಲ್ಲಿ ಕಬ್ಬಿಣದ ಅದಿರು ಮತ್ತು ಮ್ಯಾಂಗನೀಸ್ ಖನಿಜಗಳಿಗಾಗಿ ಸಲ್ಲಿಸಿರುವ ಗಣಿಗುತ್ತಿಗೆ ಅರ್ಜಿ ಬಗ್ಗೆ.

ಉಲ್ಲೇಖ: 1) ಈ ಕಛೇರಿ ಸೂಚನ ಪತ್ರ ಸಂಖ್ಯೆ: ಗಭೂಇ:ಗಗುಶಾ:1466 ಎಎಂಎಲ್ 04/298, ದಿನಾಂಕ:12.04.2010.

2) ಅರ್ಜಿದಾರರ ಪತ್ರ ದಿನಾಂಕ:19.04.2010.

ಮೇಲಿನ ವಿಷಯಕ್ಕೆ ಸಂಬಂಧಪಟ್ಟಂತೆ, ಬಳ್ಳಾರಿ ಜಿಲ್ಲೆ ಮತ್ತು ತಾಲ್ಲೂಕು, ಹಾವಿನಮಡುಗು ಗ್ರಾಮದಲ್ಲಿ ಕಬ್ಬಿಣದ ಅದಿರು ಮತ್ತು ್ಯಾಂಗನೀಸ್ ಖನಿಜಗಳಿಗಾಗಿ ಗಣಿ ಗುತ್ತಿಗೆ ಕೋರಿ ಸಲ್ಲಿಸಿರುವ ಅರ್ಜಿ ಸಂಖ್ಯೆ:1466 ಎಎಂಎಲ್ 04ನ್ನು ಪರಿಶೀಲಿಸಲಾಯಿತು.

ಅರ್ಜಿದಾರರು ಗಣಿಗುತ್ತಿಗೆಗಾಗಿ ಕೋರಿರುವ ಪ್ರದೇಶವು ಅತಿವ್ಯಾಪ್ತಿಯಾಗುತ್ತಿರುವ ಬಗ್ಗೆ ಉಲ್ಲೇಖ (1)ರ ಈ ಕಛೇರಿ ಸೂಚನಾ ಪತ್ರದಲ್ಲಿ ಳಿಸಿ 30 ದಿನಗಳೊಳಗಾಗಿ ವಿವರಣೆಯನ್ನು ನೀಡುವಂತೆ ಸೂಚಿಸಲಾಗಿತ್ತು. ಉಲ್ಲೇಖ (2)ರಲ್ಲಿ ಅರ್ಜಿದಾರರು ನೀಡಿರುವ ವಿವರಣೆಯಲ್ಲಿ, ಯಾವುದೇ ೂರ್ವ ಅರ್ಜಿಗಳು ಇರುವುದು, ಅತಿಕ್ರಮಣ ಇರುವುದು ಸ್ಥಳದಲ್ಲಿ ಕಂಡುಬಂದಿರುವುದಿಲ್ಲವೆಂದೂ, ಜಿಲ್ಲಾಧಿಕಾರಿಗಳಿಗೆ ಬೇತಕರಾರು ಪತ್ರಕ್ಕೆ ಳುಹಿಸಿಕೊಡುವಂತೆ ಕೋರಿದ್ದಾರೆ. ಆದರೆ, ಅಪೇಕ್ಷಿತ ಪ್ರದೇಶವು ಪೂರ್ವ ಅರ್ಜಿಗಳ ಪ್ರದೇಶಕ್ಕೆ ಅತಿವ್ಯಾಪ್ತಿಯಾಗಿ ಮುಕ್ತ ಪ್ರದೇಶವು ಲಭ್ಯ ಇಲ್ಲದಿರುವ ನ್ನೆಲೆಯಲ್ಲಿ ಕೆಳಕಂಡ ಆದೇಶ.

ಆದೇಶ

ಸರ್ಕಾರದ ಆದೇಶ ಸಂಖ್ಯೆ: ಸಿಐ 03 ಎಂಎಂಎಂ 95 ದಿನಾಂಕ:27.05.1995 ಮತ್ತು ಸಿಐ 214 ಎಂಎಂಎಂ 2006 ನಾಂಕ:09.02.2007ರನ್ವಯ ನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಇವರಿಗೆ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ, ಣಿಗುತ್ತಿಗೆ ಅರ್ಜಿ ಸಂಖ್ಯೆ: 1466 ಎಎಂಎಲ್ 04ನ್ನು ಮೇಲೆ ವಿವರಿಸಿದ ಕಾರಣಗಳಿಗಾಗಿ ತಿರಸ್ಕರಿಸಲಾಗಿದೆ.

ನಿರ್ದೇಶಕರು,
ಗಣಿ ಮತ್ತು ಭೂವಿಜ್ಞಾನ ಇಲಾಖೆ,
ಬೆಂಗಳೂರು.

ಪಿ.ಆರ್.1535

ನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಬೆಂಗಳೂರು ರವರ ನಡವಳಿಗಳು

ಸಂಖ್ಯೆ: ಗಭೂಇ:ಗಗುಶಾ:25 ಎಎಂಎಲ್98/10–11/9883, ದಿನಾಂಕ:5ನೇ ಅಕ್ಟೋಬರ್, 2010

ವಿಷಯ: ಮೆ: ಅಲೈಡ್ ಮೈನಿಂಗ್ ಕಂಪನಿ ರವರು ಬಳ್ಳಾರಿ ಜಿಲ್ಲೆ ಮತ್ತು ತಾಲ್ಲೂಕು, ಕುಡಿತಿನಿ ಗ್ರಾಮದಲ್ಲಿ 1021.03 ಎಕರೆ ಪ್ರದೇಶದಲ್ಲಿ ಕಬ್ಬಿಣದ ಅದಿರು ಖನಿಜಕ್ಕಾಗಿ ಸಲ್ಲಿಸಿರುವ ಗಣಿಗುತ್ತಿಗೆ ಅರ್ಜಿ ಬಗ್ಗೆ.

ಉಲ್ಲೇಖ: 1) ಈ ಕಛೇರಿ ಸೂಚನ ಪತ್ರ ಸಂಖ್ಯೆ: ಗಭೂಇ:ಗಗುಶಾ:25 ಎಎಂಎಲ್ 98, ದಿನಾಂಕ:20.04.2010.

2) ಅರ್ಜಿದಾರರ ಪತ್ರ ದಿನಾಂಕ:20.05.2010.

ಮೇಲಿನ ವಿಷಯಕ್ಕೆ ಸಂಬಂಧಪಟ್ಟಂತೆ, ಬಳ್ಳಾರಿ ಜಿಲ್ಲೆ ಮತ್ತು ತಾಲ್ಲೂಕು, ಕುಡಿತಿನಿ ಗ್ರಾಮದಲ್ಲಿ ಕಬ್ಬಿಣದ ಅದಿರು ಖನಿಜಕ್ಕಾಗಿ ಗಣಿಗುತ್ತಿಗೆ ೋರಿ ಸಲ್ಲಿಸಿರುವ ಅರ್ಜಿ ಸಂಖ್ಯೆ: 25 ಎಎಂಎಲ್ 98ನ್ನು ಪರಿಶೀಲಿಸಲಾಯಿತು.

ಅರ್ಜಿದಾರರು ಗಣಿಗುತ್ತಿಗೆಗಾಗಿ ಕೋರಿರುವ ಪ್ರದೇಶವು ಅತಿವ್ಯಾಪ್ತಿಯಾಗುತ್ತಿರುವ ಬಗ್ಗೆ ಉಲ್ಲೇಖ (1)ರ ಈ ಕಛೇರಿ ಸೂಚನಾ ಪತ್ರದಲ್ಲಿ ಳಿಸಿ 30 ದಿನಗಳೊಳಗಾಗಿ ವಿವರಣೆಯನ್ನು ನೀಡುವಂತೆ ಸೂಚಿಸಲಾಗಿತ್ತು. ಉಲ್ಲೇಖ (2)ರಲ್ಲಿ ಅರ್ಜಿದಾರರು ನೀಡಿರುವ ವಿವರಣೆಯಲ್ಲಿ, ಪುನಃ 90 ದಿನಗಳ ಕಾಲಾವಕಾಶವನ್ನು ಕೋರಿರುತ್ತಾರೆ. ಆದರೆ 125 ದಿನಗಳು ಕಳೆದರೂ ವಿವರಣೆ ಸಲ್ಲಿಸದಿರುವುದು, ಅರ್ಜಿಯನ್ನು ಮುಂದುವರಿಸುವ ಬಗ್ಗೆ ಆಸಕ್ತಿ ಇಲ್ಲದಿರುವುದು ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ ಕೆಳಕಂಡ ಆದೇಶ

ಆದೇಶ

ಸರ್ಕಾರದ ಆದೇಶ ಸಂಖ್ಯೆ: ಸಿಐ 03 ಎಂಎಂಎಂ 95 ದಿನಾಂಕ:27.05.1995 ಮತ್ತು ಸಿಐ 214 ಎಂಎಂಎಂ 200 ದಿನಾಂಕ:09.02.2007ರನ್ವಯ ನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಇವರಿಗೆ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಗಣಿಗುತ್ತಿಗೆ ಅರ್ಜಿ ಸಂಖ್ಯೆ: 25 ಎಎಂಎಲ್ 98ನ್ನು ಮೇಲೆ ವಿವರಿಸಿದ ಕಾರಣಗಳಿಗಾಗಿ ತಿರಸ್ಕರಿಸಲಾಗಿದೆ.

ನಿರ್ದೇಶಕರು,
ಗಣಿ ಮತ್ತು ಭೂವಿಜ್ಞಾನ ಇಲಾಖೆ,
ಬೆಂಗಳೂರು.

ಪಿ.ಆರ್.1527

ನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಬೆಂಗಳೂರು ರವರ ನಡವಳಿಗಳು

ಸಂಖ್ಯೆ: ಗಭೂಇ:ಗಗುಶಾ:149 ಎಎಂಎಲ್2002/10-11/9355, ದಿನಾಂಕ:9ನೇ ಡಿಸೆಂಬರ್, 2010

ವಿಷಯ: ಶ್ರೀ ಆರ್. ಶ್ರೀನಿವಾಸ ರವರು ದಿನಾಂಕ:22.11.2002ರಂದು ಬಳ್ಳಾರಿ ಜಿಲ್ಲೆ, ಸಂಡೂರು ತಾಲ್ಲೂಕು, ಎಸ್.ಎಂ.ಬ್ಲಾಕ್‌ನಲ್ಲಿ 46-00 ಎಕರೆ ಪ್ರದೇಶದಲ್ಲಿ ಕಬ್ಬಿಣದ ಅದಿರು ಖನಿಜಕ್ಕಾಗಿ ಸಲ್ಲಿಸಿರುವ ಗಣಿಗುತ್ತಿಗೆ ಅರ್ಜಿ ಬಗ್ಗೆ.

ಉಲ್ಲೇಖ: ಈ ಕಛೇರಿ ನೋಟೀಸ್ ಸಂಖ್ಯೆ: 149 ಎಎಂಎಲ್ 2002:3768, ದಿನಾಂಕ:20.06.2007.

ಪ್ರಸ್ತಾವನೆ:

ಶ್ರೀ ಆರ್. ಶ್ರೀನಿವಾಸ ಇವರು ಬಳ್ಳಾರಿ ಜಿಲ್ಲೆ, ಸಂಡೂರು ತಾಲ್ಲೂಕು, ಎಸ್.ಎಂ.ಬ್ಲಾಕ್ ನಲ್ಲಿ 46-00 ಎಕರೆ ಪ್ರದೇಶದಲ್ಲಿ ಕಬ್ಬಿಣದ ಅದಿರು ಖನಿಜಕ್ಕಾಗಿ ಕೋರಿ ಸಲ್ಲಿಸಿರುವ ಗಣಿ ಗುತ್ತಿಗೆ ಅರ್ಜಿ ಸಂಖ್ಯೆ:149 ಎಎಂಎಲ್ 2002ನ್ನು ಪರಿಶೀಲಿಸಿದೆ.

ಅರ್ಜಿದಾರರು ಗಣಿಗುತ್ತಿಗೆಗಾಗಿ ಕೋರಿರುವ ಪ್ರದೇಶವು ಸರ್ಕಾರಿ ಸ್ವಾಯತ್ಥ ಸಂಸ್ಥೆಯಾದ ಮೆ: ಎಂಎಂಎಲ್ ರವರಿಗೆ ಮಂಜೂರಾದ 80.93 ಹೆಕ್ಟೇರ್ ಪ್ರದೇಶಕ್ಕೆ ಹಾಗು ಹಲವು ಪೂರ್ವ ಅರ್ಜಿಗಳ ಮೇಲೆ ಅತಿವ್ಯಾಪ್ತಿಯಾಗುತ್ತಿದೆ. ಈ ಬಗ್ಗೆ ದಿನಾಂಕ:20.06.2007ರಂದು ಈ ಕಛೇರಿಯಿಂದ ನೋಟೀಸ್ ಜಾರಿ ಮಾಡಲಾಗಿದೆ.

ಅರ್ಜಿದಾರರು ನೀಡಿರುವ ವಿವರಣೆಯಲ್ಲಿ ನಿರ್ದೇಶಕರಿಗೆ ಅರ್ಜಿಯನ್ನು ತಿರಸ್ಕರಿಸಲು ಅಧಿಕಾರವಿಲ್ಲವೆಂತಲೂ, ಆದಕಾರಣ ಸೂಚನೆಯನ್ನು ಹಿಂತೆಗೆದುಕೊಳ್ಳಲು ತಿಳಿಸಿದ್ದಾರೆ. ತದನಂತರ ಮೆ: ಎಂಎಂಎಲ್ ರವರಿಗೆ ಕಾರ್ಯಾನುಮತಿ ನೀಡಿದ ಪ್ರದೇಶದಲ್ಲಿ 80.93 ಹೆಕ್ಟೇರ್ ಪ್ರದೇಶಕ್ಕೆ ಪರಿಗಣಿಸಲಾಗಿದ್ದು, ಉಳಿದ ಪ್ರದೇಶವನ್ನು ತಮಗೆ ಮಂಜೂರು ಮಾಡಲು ಕೋರಿರುತ್ತಾರೆ. ಅಲ್ಲದೆ, ಮೆ: ಎಂಎಂಎಲ್ ರವರಿಗೆ ಅರಣ್ಯ ಅನುಮೋದನೆ ಇಲ್ಲದೆ ಗಣಿಕಾರ್ಯ ನಡೆಸಲು ಅನುಮತಿ ಕೊಟ್ಟಿರುವುದು ಮಾನ್ಯ ಸರ್ವೋಚ್ಛ ನ್ಯಾಯಾಲಯದ ಆದೇಶ ಹಾಗೂ ಅರಣ್ಯ ಸಂರಕ್ಷಣಾ ಕಾಯ್ದೆ 1980ರ ಸೆಕ್ಷನ್ (2)ರ ಉಲ್ಲಂಘನೆಯಾಗಿರುತ್ತದೆ ಎಂದು ತಿಳಿಸಿರುತ್ತಾರೆ.

ದಾಖಲೆಗಳನ್ನು ಪರಿಶೀಲಿಸಲಾಗಿ, ಗಣಿಗುತ್ತಿಗೆ ಕೋರಿ ಬಂದ ಅರ್ಜಿಗಳನ್ನು ತಿರಸ್ಕರಿಸಲು ಸರ್ಕಾರವು ನಿರ್ದೇಶಕರಿಗೆ ಅಧಿಕಾರ ಪ್ರತ್ಯಾಯೋಜನೆಯನ್ನು ಅಧಿಸೂಚನೆ ಸಂಖ್ಯೆ: ಸಿಐ 03 ಎಂಎಂಎಂ 95 ದಿನಾಂಕ:27.05.1995 ಮತ್ತು ಸಿಐ 214 ಎಂಎಂಎಂ 2006 ದಿನಾಂಕ:09.02.2007ರಲ್ಲಿ ನೀಡಿದೆ. ಮೆ: ಎಂಎಂಎಲ್ ರವರಿಗೆ ಗಣಿ ಗುತ್ತಿಗೆ ಮಂಜೂರಾಗದೆ, ಗಣಿಗಾರಿಕೆ ನಡೆಸಲು ಆದೇಶ ನೀಡಿರುವುದು ಸರ್ಕಾರದ ನಿರ್ಧಾರವಾಗಿರುತ್ತದೆ ಮತ್ತು ಗಣಿಗುತ್ತಿಗೆಯನ್ನು ಕಾರ್ಯಾನುಮತಿ ಆದೇಶ ನೀಡಿದ ದಿನಾಂಕದಿಂದಲೇ ಪೂರ್ವಾನ್ವಯವಾಗುವಂತೆ ಅರಣ್ಯ ಅನುಮೋದನೆಯನ್ನು ಪಡೆದು, ಅಮಲ್ಜಾರಿ ಮಾಡಲಾಗಿದೆ. ಅರಣ್ಯ ಕಾಯ್ದೆಯ ಉಲ್ಲಂಘನೆಯಾಗಿದ್ದ ಪಕ್ಷದಲ್ಲಿ ಅರಣ್ಯ ಇಲಾಖೆಯು ಪ್ರಸ್ತಾವನೆಗೆ ಅನುಮೋದನೆಯನ್ನು ನೀಡುತ್ತಿರಲಿಲ್ಲವೆಂಬುದನ್ನು ಗಮನಿಸಲಾಗಿದೆ. ಅಪೇಕ್ಷಿತ ಪ್ರದೇಶವು ಮೆ:ಎಂಎಂಎಲ್ ರವರ ಗಣಿಗುತ್ತಿಗೆ ಪ್ರದೇಶಕ್ಕೂ/ ಕಾರ್ಯಾನುಮತಿ ಪಡೆದಿದ್ದ ಪ್ರದೇಶಕ್ಕೂ ಅತಿವ್ಯಾಪ್ತಿಯಾಗುತ್ತಿರುವ ಕಾರಣ ಮತ್ತು ಅರ್ಜಿದಾರರಿಗೆ ಪರಿಗಣಿಸಲು ಸ್ಥಳದ ಲಭ್ಯತೆ ಇಲ್ಲದೇ ಇರುವ ಹಿನ್ನೆಲೆಯಲ್ಲಿ ಕೆಳಕಂಡ ಆದೇಶ.

ಆದೇಶ

ಸರ್ಕಾರದ ಆದೇಶ ಸಂಖ್ಯೆ: ಸಿಐ 03 ಎಂಎಂಎಂ 95 ದಿನಾಂಕ:27.05:1995 ಮತ್ತು ಸಿಐ 214 ಎಂಎಂಎಂ 2006 ದಿನಾಂಕ:09.02.2007ರನ್ವಯ ನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಇವರಿಗೆ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ, ಗಣಿಗುತ್ತಿಗೆ ಅರ್ಜಿ ಸಂಖ್ಯೆ: 149 ಎಎಂಎಲ್ 2002ನ್ನು ಮೇಲೆ ವಿವರಿಸಿದ ಕಾರಣಗಳಿಗಾಗಿ ತಿರಸ್ಕರಿಸಲಾಗಿದೆ.

ಪಿ.ಆರ್.1775

ನಿರ್ದೇಶಕರು,
ಗಣಿ ಮತ್ತು ಭೂವಿಜ್ಞಾನ ಇಲಾಖೆ,
ಬೆಂಗಳೂರು.

ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್, ಮಂಡ್ಯ ಜಿಲ್ಲೆ, ಮಂಡ್ಯ ಇವರ ಕಛೇರಿ ನಡವಳಿಗಳು

ವಿಷಯ: ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾದ ವಾಹನಗಳನ್ನು ಕಛೇರಿ ಕೆಲಸಕ್ಕೆ ಉಪಯೋಗಿಸುವ ಬಗ್ಗೆ.

ಉಲ್ಲೇಖ: ಅಬಕಾರಿ ಆಯುಕ್ತರು, ಬೆಂಗಳೂರು-ಇವರ ಸುತ್ತೋಲೆ ಸಂಖ್ಯೆ: ಇಸಿಸಿ/10/ಸಿಆರ್ಎಂ/2010, ದಿನಾಂಕ:25.02.2010.

ಪ್ರಸ್ತಾವನೆ:

ಅಬಕಾರಿ ಆಯುಕ್ತರು, ಬೆಂಗಳೂರು ಇವರು ಉಲ್ಲೇಖಿತ ಸುತ್ತೋಲೆಯಲ್ಲಿ ಇವರು ಅಬಕಾರಿ ಮೊಕದ್ದಮೆಯಲ್ಲಿ ಸರ್ಕಾರಕ್ಕೆ ಜಪ್ತುಪಡಿಸಿದ ವಾಹನಗಳನ್ನು ತನಿಖೆ ಪೂರ್ಣಗೊಂಡ ನಂತರ ಪ್ರಾಧಿಕೃತ ಅಧಿಕಾರಿ ಹಾಗೂ ಅಬಕಾರಿ ಉಪ ಆಯುಕ್ತರವರಿಂದ ಸರ್ಕಾರಕ್ಕೆ ಮುಟ್ಟುಗೋಲು

ಹಾಕಿಕೊಳ್ಳಲಾದ ವಾಹನಗಳನ್ನು ಮೇಲ್ಮನವಿ ಸಲ್ಲಿಸುವ ಅವಧಿ ಮುಕ್ತಾಯವಾದ ನಂತರ ಅಬಕಾರಿ ಇಲಾಖೆಯ ಕಾರ್ಯ ನಿರ್ವಹಣೆಗೆ ಉಪಯೋಗಿಸಿಕೊಳ್ಳಲು ಅನುಮತಿ ನೀಡಿರುತ್ತಾರೆ.

ನಿಬಂಧನೆಗಳು:

1) ಮುಟ್ಟುಗೋಲಾದ ವಾಹನಗಳನ್ನು ಕಛೇರಿ ಕೆಲಸಕ್ಕೆ ಬಳಸಲು ಅಬಕಾರಿ ಆಯುಕ್ತರು ಹಂಚಿಕೆ ಆದೇಶ ನೀಡಿದ್ದಲ್ಲಿ ಇಂತಹ ವಾಹನಗಳ ಬಗ್ಗೆ ಮಾಹಿತಿಯನ್ನು ಕಛೇರಿ ದಾಸ್ತಾನು ವಿಭಾಗ/ ಅಪರಾಧ ವಿಭಾಗದಲ್ಲಿ ಅನುಬಂಧ-1ರಂತೆ ನಿರ್ವಹಿಸುವುದು.
2) ಸದರಿ ವಾಹನವನ್ನು ಅಬಕಾರಿ ಉಪ ಆಯುಕ್ತರ ಹೆಸರಿನಲ್ಲಿ ಸಾರಿಗೆ ಅಧಿಕಾರಿಗಳಿಂದ ವಾಹನದ ಮಾಲೀಕತ್ವವನ್ನು ನೊಂದಾಯಿಸತಕ್ಕದ್ದು.
3) ಉಪ ನಿರ್ದೇಶಕರು, ಕೆ.ಜಿ.ಐ.ಡಿ.(ವಾಹನ) ಇವರಲ್ಲಿ ವಿಮೆ ಪಾಲಿಸಿ ಪಡೆದುಕೊಳ್ಳತಕ್ಕದ್ದು.
4) ಇಲಾಖೆಯ ಕಾರ್ಯನಿರ್ವಹಣೆಗೆ ಬಳಸಿಕೊಳ್ಳುವ ಪೂರ್ವದಲ್ಲಿ ಕಛೇರಿಯ ವಾಹನಗಳ ದಾಸ್ತಾನು ವಹಿಯಲ್ಲಿ ಅನುಬಂಧ-2 ರಂತೆ ವಹಿಯನ್ನು ನಿರ್ವಹಿಸುವುದು, ಈಗಾಗಲೇ ಹಂಚಿಕೆಯಾಗಿರುವ ಸರ್ಕಾರಿ ವಾಹನಗಳನ್ನು ವಹಿಯಲ್ಲಿ ಲೆಕ್ಕಕ್ಕೆ ತೆಗೆದುಕೊಳ್ಳುವುದು.
5) ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ/6/ಟಿಸಿಇ/87, ಬೆಂಗಳೂರು, ದಿನಾಂಕ:15.12.1992 ರ ಪ್ರಕಾರ ವಾಹನ ದುರಸ್ತಿ ಬಗ್ಗೆ ಸಾರಿಗೆ ಅಧಿಕಾರಿಗಳ ದೃಢೀಕರಣ ಪಡೆದು ಈಗಾಗಲೇ ನಿಗದಿಪಡಿಸಿದ ಚೆಕ್‌ಲಿಸ್ಟ್‌ನ ನಮೂನೆಯಲ್ಲಿ ವಿವರವಾದ ಪ್ರಸ್ತಾವನೆ ಸಲ್ಲಿಸುವುದು.

ಆದೇಶ ಸಂಖ್ಯೆ: ಇಎಕ್ಸ್‌ಇ/ಎಂಡಿವೈ/ಸಿಆರ್‌ಎಂ/12/2009-10, ದಿನಾಂಕ:17.08.2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಮಂಡ್ಯ ಜಿಲ್ಲೆಯ ವ್ಯಾಪ್ತಿಯಲ್ಲಿ ಅಬಕಾರಿ ಅಪರಾಧಕ್ಕಾಗಿ ಜಪ್ತುಗೊಳಿಸಲಾದ ಈ ಕೆಳಕಂಡ ಅನುಬಂಧದಲ್ಲಿ ಕಾಲಂ 2 ರಲ್ಲಿ ನಮೂದಿಸಿರುವ ವಾಹನಗಳನ್ನು ಕಾಲಂ 3 ರಲ್ಲಿ ಜಪ್ತುಪಡಿಸಿ, ಕಾಲಂ 4 ರಲ್ಲಿ ನಮೂದಿಸಿರುವ ಆದೇಶದಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ಹೀಗೆ ಮುಟ್ಟುಗೋಲು ಹಾಕಿಕೊಳ್ಳಲಾದ ವಾಹನಗಳನ್ನು ಉಲ್ಲೇಖಿತ ಸುತ್ತೋಲೆಯಲ್ಲಿನ ಅನುಮತಿ ರೀತ್ಯಾ ಜಿಲ್ಲೆಯ ಜಾರಿ ಮತ್ತು ತನಿಖಾ ಕಾರ್ಯಗಳಿಗೆ ಮೇಲ್ಕಂಡ ನಿಬಂಧನೆಗೊಳಪಟ್ಟು ಹಂಚಿಕೆ ಮಾಡಲಾಗಿದೆ. ಸದರಿ ವಾಹನವನ್ನು ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಂದ ಸರ್ಕಾರಿ ನೊಂದಣಿ ಮಾಡಿಸಿಕೊಂಡು ನಂತರ ಜಾರಿ ಮತ್ತು ತನಿಖಾ ಕಾರ್ಯಗಳಿಗೆ ಉಪಯೋಗಿಸಿಕೊಳ್ಳಲು ಆದೇಶಿಸಿದೆ.

ಅನುಬಂಧ

ಕ್ರ. ಸಂ.	ವಾಹನದ ವಿಧ ಮತ್ತು ನೋಂದಣಿ ಸಂಖ್ಯೆ	ವಾಹನವನ್ನು ಜಪ್ತುಪಡಿಸಿದ ಪ್ರ.ಮಾ.ವ. ಸಂಖ್ಯೆ ಮತ್ತು ದಿನಾಂಕ	ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡ ಆದೇಶ ಸಂಖ್ಯೆ ಮತ್ತು ದಿನಾಂಕ	ಹಂಚಿಕೆ ಮಾಡಲಾಗಿರುವ ಕಛೇರಿಯ ಹೆಸರು
1.	ಟಿ.ವಿ.ಎಸ್. ಸ್ಟಾರ್ ಸಿಟಿಬೈಕ್, ಸಂಖ್ಯೆ:ಕೆಎ-54/ಇ-1201	ಆರಕ್ಷಕ ಉಪ ನಿರೀಕ್ಷಕರು, ವಿಶೇಷ ಪೋಲೀಸ್ ಠಾಣೆ, ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ಘಟಕ, ಮಂಡ್ಯ ಇವರ ಅಪರಾಧ ಸಂಖ್ಯೆ: 10/2010, ದಿನಾಂಕ:25.03.2010	ಡಿಟಿಸಿಆರ್/526/2009-10, ದಿನಾಂಕ:19.07.2010	ಅಬಕಾರಿ ನಿರೀಕ್ಷಕರು, ಕ್ಷಿಪ್ರಕಾರ್ಯಪಡೆ, ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್‌ರವರ ಕಛೇರಿ, ಮಂಡ್ಯ ಜಿಲ್ಲೆ, ಮಂಡ್ಯ.

ಡೆಪ್ಯೂಟಿ ಕಮೀಷನರ್ ಆಫ್
ಎಕ್ಸೈಸ್‌ರವರ ಪರವಾಗಿ.

ಪಿ.ಆರ್.1333

ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆ

ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರ ಕಛೇರಿ, ನಂ.17, ಜಯನಿವಾಸ, ಶಂಕರಮಠ ರಸ್ತೆ, ಬಸವನಗುಡಿ, ಬೆಂಗಳೂರು-560 004

ಅಧಿಸೂಚನೆ

ಸಂಖ್ಯೆ: ಸಿಬ್ಬಂದಿ-1/ಪಿ.ಇ.ಎಸ್./22/2010-11, ದಿನಾಂಕ:28.08.2010

ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳು 1958 ನಿಯಮ 95(1) ಪ್ರಕಾರ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆಯ ಈ ಕೆಳಕಂಡ ಅಧಿಕಾರಿಗಳು 2011ನೇ ಕ್ಯಾಲೆಂಡರ್ ವರ್ಷದಲ್ಲಿ ಅವರುಗಳ ಹೆಸರಿನ ಮುಂದೆ ನಮೂದಿಸಿರುವ ದಿನಾಂಕಗಳಂದು ಸರ್ಕಾರಿ ಸೇವೆಯಿಂದ ವಯೋನಿವೃತ್ತಿ ಹೊಂದಲಿದ್ದಾರೆಂದು ಪ್ರಕಟಿಸಲಾಗಿದೆ.

ಕ್ರಮ ಸಂಖ್ಯೆ	ಅಧಿಕಾರಿ ಹೆಸರು ಮತ್ತು ಪದನಾಮ	ಜನ್ಮ ದಿನಾಂಕ	ವಯೋನಿವೃತ್ತಿ ದಿನಾಂಕ
	ಗ್ರೂಪ್ "ಎ" ಅಧಿಕಾರಿಗಳು ಯಾರು ಇರುವುದಿಲ್ಲ		
	ಗ್ರೂಪ್ "ಬಿ" ಅಧಿಕಾರಿಗಳು		
1.	ಶ್ರೀ ಎಸ್.ಡಿ. ಡೇನಿಯಲ್, ಸಹಾಯಕ ನಿರ್ದೇಶಕರು, ನಿಯಮ 441, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು.	28.01.1951	31.01.2011

ಕ್ರಮ ಸಂಖ್ಯೆ	ಅಧಿಕಾರಿ ಹೆಸರು ಮತ್ತು ಪದನಾಮ	ಜನ್ಮ ದಿನಾಂಕ	ವಯೋನಿವೃತ್ತಿ ದಿನಾಂಕ
2.	ಶ್ರೀ ಡಿ.ಬಿ. ಇನಾಂದಾರ್, ಸಹಾಯಕ ನಿರ್ದೇಶಕರು, ಬೆಳಗಾವಿ ಉಪವಿಭಾಗ, ಬೆಳಗಾವಿ	15.01.1951	31.01.2011
3.	ಶ್ರೀ ಎಸ್. ಜಗದೇವಪ್ಪ, ಸಹಾಯಕ ನಿರ್ದೇಶಕರು, ಸಿಂಧನೂರು ಉಪವಿಭಾಗ, ಸಿಂಧನೂರು.	20.02.1951	28.02.2011
4.	ಶ್ರೀ ಶರಣೇಗೌಡ, ಸಹಾಯಕ ನಿರ್ದೇಶಕರು, ಬಳ್ಳಾರಿ ಉಪವಿಭಾಗ, ಬಳ್ಳಾರಿ.	25.02.1951	28.02.2011
5.	ಶ್ರೀ ಪಿ. ವೆಂಕಟಾಚಲಯ್ಯ, ಸಹಾಯಕ ನಿರ್ದೇಶಕರು, (ಲೆಕ್ಕಪರಿಶೋಧನೆ-2), ನಿರ್ದೇಶಕರ ಕಛೇರಿ, ಬೆಂಗಳೂರು.	09.05.1951	31.05.2011
6.	ಶ್ರೀ ಎಂ.ಎನ್. ಇದ್ದಲಗಿ, ಸಹಾಯಕ ನಿರ್ದೇಶಕರು, ಜಮಖಂಡಿ ಉಪವಿಭಾಗ, ಜಮಖಂಡಿ.	01.06.1951	31.05.2011
7.	ಶ್ರೀ ಕೆ.ಎಲ್. ಲಮಾಣಿ, ಸಹಾಯಕ ನಿರ್ದೇಶಕರು, ಬಾಗಲಕೋಟೆ ಉಪವಿಭಾಗ, ಬಾಗಲಕೋಟೆ.	01.06.1951	31.05.2011
8.	ಶ್ರೀ ಬಿ. ಚಂದ್ರಾನಾಯಕ್, ಸಹಾಯಕ ನಿರ್ದೇಶಕರು, ಹರಪನಹಳ್ಳಿ ಉಪವಿಭಾಗ, ಹರಪನಹಳ್ಳಿ.	12.08.1951	31.08.2011
9.	ಶ್ರೀ ಜಿ. ಕೃಷ್ಣಾನಾಯಕ್, ಸಹಾಯಕ ನಿರ್ದೇಶಕರು, ಕೊಡಗು ಉಪವಿಭಾಗ, ಮಡಿಕೇರಿ.	04.08.1951	31.08.2011
10.	ಶ್ರೀ ಜಿ.ಎನ್. ನಾಗರಾಜರಾವ್, ಸಹಾಯಕ ನಿರ್ದೇಶಕರು, (ತನಿಖೆ ಮತ್ತು ಪರಿಶೀಲನಾ ಘಟಕ-2), ನಿರ್ದೇಶಕರ ಕಛೇರಿ, ಬೆಂಗಳೂರು.	19.10.1951	31.10.2011
11.	ಶ್ರೀ ಎಸ್.ಆರ್. ಶಿವಾನಂದಮೂರ್ತಿ, ಸಹಾಯಕ ನಿರ್ದೇಶಕರು, (ತನಿಖೆ ಮತ್ತು ಪರಿಶೀಲನಾ ಘಟಕ-2), ನಿರ್ದೇಶಕರ ಕಛೇರಿ, ಬೆಂಗಳೂರು.	14.10.1951	31.10.2011

ನಿರ್ದೇಶಕರು,
ಸಹಕಾರ ಸಂಘಗಳ ಲೆಕ್ಕಪರಿಶೋಧನಾ
ನಿರ್ದೇಶಕರ ಕಛೇರಿ, ಬೆಂಗಳೂರು.

ಪಿ.ಆರ್.1334

ಕೃಷಿ ನಿರ್ದೇಶಕರು ಹಾಗೂ ಶಿಸ್ತು ಪ್ರಾಧಿಕಾರಿ, ಬೆಂಗಳೂರು ಇವರ ನಡವಳಿಗಳು

ವಿಷಯ: ಶ್ರೀ ಮಹದೇವ, 'ಡಿ' ಗುಂಪಿನ ನೌಕರರು, ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಜಲಾನಯನ ಅಭಿವೃದ್ಧಿ ಇಲಾಖೆ, ಮೈಸೂರು ಇವರ ಅನಧಿಕೃತ ಗೈರು ಹಾಜರಾತಿ ಬಗ್ಗೆ ಶಿಸ್ತುಕ್ರಮ.

ಓದಲಾಗಿದೆ:
1) ಆಯುಕ್ತರು ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು ಇವರ ಸೂಚನಾ ಪತ್ರ ಸಂ: ಜಅಇ/ವಿನಿ-6/33/2004-05 ದಿನಾಂಕ:23.11.2004.
2) ಶ್ರೀ ಮಹದೇವ, 'ಡಿ' ಗುಂಪಿನ ನೌಕರರು ಇವರ ಹೇಳಿಕೆ ದಿನಾಂಕ:05.01.2005.
3) ಆಯುಕ್ತರು ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು ಇವರ ಆದೇಶ ಸಂಖ್ಯೆ: ಜಅಇ/ಆಡಳಿತ/ವಿನಿ-6/33/2004-05 ದಿನಾಂಕ:09.03.2005.
4) ವಿಚಾರಣಾಧಿಕಾರಿಗಳ ವಿಚಾರಣಾ ವರದಿ ದಿನಾಂಕ:20.05.2005.
5) ಆಯುಕ್ತರು ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರುರವರ ಪತ್ರಸಂಖ್ಯೆ: ಜಅಇ/ಆಡಳಿತ-3/ವಿನಿ-6/33/2004-05 ದಿನಾಂಕ:23.10.2006.

6) 2ನೇ ಕಾರಣ ಕೇಳುವ ಸೂಚನಾ ಪತ್ರ ಸಂಖ್ಯೆ: ಸಿಬ್ಬಂದಿ-1/ವಿಚಾರಣೆ-4/ಮೈಸೂರು/17/2006-07 ದಿನಾಂಕ:19/20.01.2009.

7) ನೌಕರರು ಹೇಳಿಕೆ ದಿನಾಂಕ:10.07.2009.

ಪ್ರಸ್ತಾವನೆ:

ಶ್ರೀ ಮಹದೇವ 'ಡಿ' ಗುಂಪಿನ ನೌಕರರು, ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಜಲಾನಯನ ಅಭಿವೃದ್ಧಿ ಇಲಾಖೆ, ಮೈಸೂರು ಇವರು ದಿನಾಂಕ:13.12.2003 ರಿಂದ 06.01.2004 ಕಛೇರಿ ಕರ್ತವ್ಯಕ್ಕೆ ಅನಧಿಕೃತ ಗೈರು ಹಾಜರಾಗಿರುತ್ತಾರೆ. ದಿನಾಂಕ:08.01.2004 ರಂದು ಕೃಷಿ ಅಧಿಕಾರಿ (ಸಂಚಾರಿ ಮಣ್ಣು ಆರೋಗ್ಯ ಕೇಂದ್ರ) ನಂಜನಗೂಡು ಇವರು ಸದರಿಯವರ ಸೇವೆಯನ್ನು ಬಿಡುಗಡೆಗೊಳಿಸಿ ಜಲಾನಯನ ಅಭಿವೃದ್ಧಿ ಇಲಾಖೆ ಬೆಂಗಳೂರು ಇಲ್ಲಿಗೆ ಕರ್ತವ್ಯಕ್ಕೆ ಹಾಜರಾಗಲು ಸೂಚಿಸಿದ್ದರು. ನೌಕರರು ಯಾವುದೇ ಕಛೇರಿಗೆ ಹಾಜರಾಗದೆ ಅನಧಿಕೃತ ಗೈರುಹಾಜರಿಯಲ್ಲಿಯೇ ಮುಂದುವರಿದಿರುತ್ತಾರೆ. ಆದ್ದರಿಂದ ಇವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ ನಿಯಮ 1957ರ ನಿಯಮ 11 ರಡಿಯಲ್ಲಿ ಶಿಸ್ತುಕ್ರಮ ಜರುಗಿಸಲು ಓದಲಾದ ಕ್ರಮಸಂಖ್ಯೆ (1)ರಲ್ಲಿ ಕಾರಣ ಕೇಳುವ ಸೂಚನಾ ಪತ್ರ ಹಾಗೂ ದೋಷಾರೋಪಣಾ ಪಟ್ಟಿ ಅನುಬಂಧ-1 ರಿಂದ 4ನ್ನು ಆಯುಕ್ತರು ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು ಇವರಿಂದ ಜಾರಿ ಮಾಡಲಾಗಿರುತ್ತದೆ. ನೌಕರರು ದೋಷಾರೋಪಣಾ ಪಟ್ಟಿ ಸ್ವೀಕರಿಸಿ ಓದಲಾದ ಕ್ರಮಸಂಖ್ಯೆ: (2) ರಲ್ಲಿ ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾರೆ. ಲಿಖಿತ ಹೇಳಿಕೆಯನ್ನು ಪರಿಶೀಲಿಸಲಾಗಿ ಸದರಿಯವರಿಗೆ ಮೈಗೆ ಹುಷಾರಿಲ್ಲದ ಹಾಗೂ ಆರ್ಥಿಕವಾಗಿ ತುಂಬಾ ತೊಂದರೆಯಲ್ಲಿದ್ದ ಕಾರಣದಿಂದ ಕರ್ತವ್ಯಕ್ಕೆ ಗೈರು ಹಾಜರಾಗಿರುವುದಾಗಿ ತಿಳಿಸಿರುತ್ತಾರೆ. ಇದನ್ನು ಪರಿಗಣಿಸಬಹುದಾದಂತಹ ಯಾವುದೇ ಅಂಶಗಳು ಕಂಡುಬರುತ್ತಿಲ್ಲವಾದ್ದರಿಂದ ಆರೋಪಗಳ ಬಗ್ಗೆ ಸತ್ಯಾಸತ್ಯತೆಯನ್ನು ಕಂಡುಕೊಳ್ಳುವ ಸಲುವಾಗಿ ಓದಲಾದ ಕ್ರಮಸಂಖ್ಯೆ (3)ರಲ್ಲಿ ಆಯುಕ್ತರು ಜಲಾನಯನ ಅಭಿವೃದ್ಧಿ ಇಲಾಖೆ ಬೆಂಗಳೂರು ರವರು ವಿಚಾರಣಾಧಿಕಾರಿ ಹಾಗೂ ಮಂಡನಾಧಿಕಾರಿಯವರನ್ನು ನೇಮಿಸಿರುತ್ತಾರೆ. ವಿಚಾರಣಾಧಿಕಾರಿಗಳು ವಿಚಾರಣೆ ಕೈಗೊಂಡು ಓದಲಾದ ಕ್ರಮಸಂಖ್ಯೆ (4)ರಲ್ಲಿ ವಿಚಾರಣಾ ವರದಿಯನ್ನು ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು ಇವರಿಗೆ ಸಲ್ಲಿಸಿರುತ್ತಾರೆ. ವರದಿಯಲ್ಲಿ ವಿಚಾರಣಾ ಸಮಯದಲ್ಲಿ ನೌಕರರು ತಮ್ಮ ವಿರುದ್ಧ ಮಾಡಲಾಗಿರುವ ಆರೋಪ ಒಪ್ಪಿಕೊಂಡಿದ್ದು ಆರೋಪ ಸಾಭೀತಾಗಿರುವ ಹಿನ್ನೆಲೆಯಲ್ಲಿ ಓದಲಾದ ಕ್ರಮಸಂಖ್ಯೆ (5)ರಲ್ಲಿ ಆಯುಕ್ತರು ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು ರವರು ಶ್ರೀ ಬಿ.ಮಹದೇವ, 'ಡಿ' ಗುಂಪಿನ ನೌಕರರು, ಇವರ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳಲು ಇವರ ಮಾತೃ ಇಲಾಖೆಯಾದ ಕೃಷಿ ಇಲಾಖೆಗೆ ವಿಚಾರಣಾ ವರದಿಯೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಓದಲಾದ ಕ್ರಮಸಂಖ್ಯೆ (6)ರಲ್ಲಿ ವಿಚಾರಣಾ ವರದಿಯೊಂದಿಗೆ 2ನೇ ಕಾರಣ ಕೇಳುವ ಸೂಚನಾ ಪತ್ರವನ್ನು ಜಾರಿ ಮಾಡಲಾಯಿತು. ನೌಕರರು ಸೂಚನಾ ಪತ್ರವನ್ನು ಸ್ವೀಕರಿಸಿ ಸ್ವೀಕೃತಿಯನ್ನು ಸಲ್ಲಿಸಿ ಓದಲಾದ ಕ್ರಮಸಂಖ್ಯೆ (7)ರಲ್ಲಿ ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾರೆ. ಸದರಿ ಹೇಳಿಕೆಯಲ್ಲಿ ಪರಿಗಣಿಸಬಹುದಾದಂತಹ ಯಾವುದೇ ಅಂಶಗಳು ಇರುವುದಿಲ್ಲ ಮತ್ತು ನೌಕರರು ದಿನಾಂಕ:13.12.2003 ರಿಂದ ಇಲ್ಲಿಯವರೆಗೆ ಯಾವುದೇ ಕಛೇರಿಗೆ/ ಇಲಾಖೆಗೆ ಹಾಜರಾಗದೆ ಅನಧಿಕೃತ ಗೈರುಹಾಜರಿಯಲ್ಲಿ ಮುಂದುವರೆದಿರುವುದನ್ನು ಗಂಭೀರವಾಗಿ ಪರಿಗಣಿಸಿ ನೌಕರರಿಗೆ ಸೂಕ್ತ ದಂಡನೆಯನ್ನು ವಿಧಿಸಲು ತೀರ್ಮಾನಿಸಿ ಈ ಕೆಳಕಂಡಂತೆ ದಂಡನೆ ವಿಧಿಸಿ ಆದೇಶ ಹೊರಡಿಸಲಾಗಿದೆ.

ಕಛೇರಿ ಆದೇಶ ಸಂಖ್ಯೆ: ಸಿಬ್ಬಂದಿ-1/ವಿಚಾರಣೆ-4/ಮೈಸೂರು/17/2006-07 ದಿನಾಂಕ:18.08.2010

ಈ ಕೆಳಗೆ ಸಹಿ ಮಾಡಿರುವ ಡಾ: ಕೆ.ವಿ. ಸರ್ವೇಶ್, ಕೃಷಿ ನಿರ್ದೇಶಕರು ಹಾಗೂ ಶಿಸ್ತು ಪ್ರಾಧಿಕಾರಿಗಳು, ಬೆಂಗಳೂರು ಆದ ನಾನು ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಶ್ರೀ ಮಹದೇವ, 'ಡಿ' ಗುಂಪಿನ ನೌಕರರು, ಹಿಂದಿನ ಕೃಷಿ ಅಧಿಕಾರಿ ಕಛೇರಿ, ಸಂಚಾರ ಮಣ್ಣು ಆರೋಗ್ಯ ಕೇಂದ್ರ, ನಂಜನಗೂಡು ಹಾಲಿ ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಜಲಾನಯನ ಅಭಿವೃದ್ಧಿ ಇಲಾಖೆ, ಮೈಸೂರು ಇವರನ್ನು ಆರೋಪಿ ಎಂದು ಪರಿಗಣಿಸಿ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ ನಿಯಮ 1957ರ ನಿಯಮ 8(vi)ರ ಪ್ರಕಾರ ತಕ್ಷಣದಿಂದ ಜಾರಿಗೆ ಬರುವಂತೆ ಸರ್ಕಾರಿ ಸೇವೆಯಿಂದ "ಕಡ್ಡಾಯ ನಿವೃತ್ತಿ" ಗೊಳಿಸುವ ದಂಡನೆಯನ್ನು ವಿಧಿಸಿ ಆದೇಶಿಸಿರುತ್ತೇನೆ.

ಸದರಿ ನೌಕರರ ಅನಧಿಕೃತ ಗೈರು ಹಾಜರಿ ಅವಧಿಯನ್ನು ಅನಧಿಕೃತ ಗೈರು ಹಾಜರಿ ಎಂದು ಪರಿಗಣಿಸಿ ಆದೇಶಿಸಿರುತ್ತೇನೆ.

ಡಾ: ಕೆ.ವಿ. ಸರ್ವೇಶ್
ಕೃಷಿ ನಿರ್ದೇಶಕರು ಹಾಗೂ
ಶಿಸ್ತು ಪ್ರಾಧಿಕಾರಿಗಳು.

ಪಿ.ಆರ್.1308

ಕಂದಾಯ ಇಲಾಖೆ

ಅಧಿಸೂಚನೆ

ಸಂಖ್ಯೆ: ಕಂಇ 48 ಎಲ್ಆರ್ಎಂ 2010, ಬೆಂಗಳೂರು, ದಿನಾಂಕ:18.11.2010

ಅಲ್ಟ್ರಾಟೆಕ್ ಸಿಮೆಂಟ್ ಲಿಮಿಟೆಡ್, ಕೊಪ್ಪಳ, ಇವರಿಗೆ ಕೊಪ್ಪಳ ಜಿಲ್ಲೆ, ಕೊಪ್ಪಳ ತಾಲ್ಲೂಕಿನ ಗಿಣಿಗೇರಾ ಗ್ರಾಮದ ಸರ್ವೆ ನಂಬರ್ 118 ರ ಕ್ಷೇತ್ರ 4-31 ಕೃಷಿ ಜಮೀನನ್ನು ಕೈಗಾರಿಕಾ ಉದ್ದೇಶದ ಸಲುವಾಗಿ ಅರ್ಜಿ ನಮೂನೆ 15-ಎ ಮತ್ತು ನಮೂನೆ 15-ಎಎ ರಲ್ಲಿನ ಮಾಹಿತಿಗಳನ್ನು ಅನುಸರಿಸಿ ಜಿಲ್ಲಾಧಿಕಾರಿ, ಕೊಪ್ಪಳ ಜಿಲ್ಲೆ, ಇವರ ಪತ್ರ ಸಂಖ್ಯೆ: ಕಂದಾಯ:ಭೂಸು/31:2009-10 ದಿನಾಂಕ:10.04.2010 ರಲ್ಲಿ ಪ್ರಸ್ತಾಪಿತ ಮೇಲ್ಕಂಡ

ಜಮೀನನ್ನು ಖರೀದಿಸಲು ಕರ್ನಾಟಕ ಭೂ ಸುಧಾರಣೆ ಅಧಿನಿಯಮ, 1961ರ ಕಲಂ 109(1)ರಡಿ ಅನುಮೋದನೆ/ ವಿನಾಯಿತಿ ನೀಡಲು ಶಿಫಾರಸು ಮಾಡಿರುತ್ತಾರೆ.

ಪ್ರಸ್ತಾಪಿತ ಜಮೀನನ್ನು ಖರೀದಿಗೆ ಪಡೆಯಲು ಖಾತೆದಾರರಿಂದ ವ್ಯವಹರಿಸಿಕೊಂಡಿದ್ದು ಹಾಗೂ ಸದರಿ ಜಮೀನು ಕರ್ನಾಟಕ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ (ಪಿ.ಟಿ.ಸಿ.ಎಲ್.) ಅಧಿನಿಯಮ 1978, ಕರ್ನಾಟಕ ಭೂ ಮಂಜೂರಾತಿ ನಿಯಮಾವಳಿಗಳು ಹಾಗೂ ಇನ್ನಿತರ ಪರಭಾರೆ ನಿಷೇಧ ಕಾಯ್ದೆಗಳ ವ್ಯಾಪ್ತಿಗೆ ಒಳಪಡುವುದಿಲ್ಲ.

ರಾಜ್ಯ ಸರ್ಕಾರವು ಸಾರ್ವಜನಿಕ ಹಿತಾಸಕ್ತಿಯ ಮೇಲೆ ಕಾರಣಗಳನ್ನು ದಾಖಲಿಸಿ ನಿರ್ದಿಷ್ಟ ಉದ್ದೇಶಕ್ಕಾಗಿ ಎಷ್ಟೇ ವಿಸ್ತೀರ್ಣದ ಭೂಮಿಯನ್ನು ಷರತ್ತು ಮತ್ತು ನಿಬಂಧನೆಗಳನ್ನು ವಿಧಿಸಿ ಕರ್ನಾಟಕ ಭೂ ಸುಧಾರಣಾ ಅಧಿನಿಯಮ 1961ರ ಕಲಂ 63, 79ಎ, 79ಬಿ ಅಥವಾ 80ರ ಅವಕಾಶಗಳಿಂದ ವಿನಾಯಿತಿ ನೀಡಲು ಸದರಿ ಅಧಿನಿಯಮದ ಕಲಂ 109(1ಎ) ರಡಿ ಅವಕಾಶ ಕಲ್ಪಿಸಿದೆ.

ಈ ಪ್ರಸ್ತಾವನೆಯು ಕರ್ನಾಟಕ ಭೂ ಸುಧಾರಣೆ (ತಿದ್ದುಪಡಿ) ಅಧಿನಿಯಮ 1995ರ ಕಲಂ 109(1ಎ) ಮತ್ತು ಕರ್ನಾಟಕ ಭೂ ಸುಧಾರಣೆ (ತಿದ್ದುಪಡಿ) ನಿಯಮಗಳು, 1996ರ ನಿಯಮ 38–ಬಿ ಮತ್ತು 38–ಸಿ ರಲ್ಲಿನ ಷರತ್ತುಗಳನ್ನು ಪೂರೈಸಿದ್ದು ಕರ್ನಾಟಕ ಭೂ ಸುಧಾರಣೆ ಅಧಿನಿಯಮ 1961ರ ಕಲಂ 63, 79ಎ, 79ಬಿ ಮತ್ತು 80ಕ್ಕೆ ವಿನಾಯಿತಿ ನೀಡಿ ಜಿಲ್ಲಾಧಿಕಾರಿಯವರ ವರದಿಯ ಪ್ರಕಾರ ಅಲ್ಟ್ರಾಟೆಕ್ ಸಿಮೆಂಟ್ ಲಿಮಿಟೆಡ್, ಕೊಪ್ಪಳ, ಇವರಿಗೆ ಕೊಪ್ಪಳ ಜಿಲ್ಲೆ, ಕೊಪ್ಪಳ ತಾಲ್ಲೂಕಿನ ಗಿಣಗೇರಾ ಗ್ರಾಮದ ಸರ್ವೆ ನಂಬರ್ 118ರ ಕ್ಷೇತ್ರ 4–31 ಕೃಷಿ ಜಮೀನನ್ನು ಕೈಗಾರಿಕಾ ಉದ್ದೇಶದ ಸಲುವಾಗಿ ಕರ್ನಾಟಕ ಭೂ ಸುಧಾರಣೆ ಕಾಯ್ದೆ 1961ರ ಕಲಂ 109ರಡಿ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟಂತೆ ಸರ್ಕಾರದ ಅನುಮತಿ ನೀಡಲಾಗಿದೆ:

1) ಯಾವ ಉದ್ದೇಶಕ್ಕಾಗಿ ಜಮೀನನ್ನು ಖರೀದಿಸಲು ಅನುಮತಿ ನೀಡಲಾಗಿದೆಯೋ ಅದೇ ಉದ್ದೇಶಕ್ಕಾಗಿ ಸದರಿ ಜಮೀನನ್ನು ಎರಡು ವರ್ಷಗಳೊಳಗಾಗಿ ಉಪಯೋಗಿಸತಕ್ಕದ್ದು, ಮತ್ತು ಆ ಬಗ್ಗೆ ಜಿಲ್ಲಾಧಿಕಾರಿಗಳ ಮುಖಾಂತರ ಸರ್ಕಾರಕ್ಕೆ ಲಿಖಿತವಾಗಿ ಮಾಹಿತಿ ನೀಡತಕ್ಕದ್ದು.
2) ವಿನಾಯಿತಿ ಪಡೆದವರು ಸರ್ಕಾರ ಅಥವಾ ಯಾವುದೇ ಷೆಡ್ಯೂಲ್ ಬ್ಯಾಂಕ್ ಅಥವಾ ಸಹಕಾರಿ, ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ಒಂದಕ್ಕೆ ಅಥವಾ ಕಂಪನಿ ಕಾಯ್ದೆ 1956ರ ಕಲಂ 3 ರಲ್ಲಿ ಹೇಳಿರುವಂತೆ ಶೇಕಡಾ 51 ಪೇಯ್ಡ್ ಆಫ್ ಷೇರು ಬಂಡವಾಳ ಹೊಂದಿದ ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದ ನಿಯಂತ್ರಿತ ಅಥವಾ ಎರಡರ ಹಿಡಿತ ಹೊಂದಿರುವ ಸರ್ಕಾರದ ಸಂಘ/ ಸಂಸ್ಥೆ ಒಂದಕ್ಕೆ ಖಾತರಿ ನೀಡಿ ಅಡಮಾನ ಹಾಗೂ ಇತರೆ ಹೊಣೆ ಮಾಡಿ ಸಾಲ ಪಡೆಯುವುದನ್ನು ಹೊರತುಪಡಿಸಿ ಸದರಿ ಜಮೀನನ್ನು ನಿಗದಿತ ಉದ್ದೇಶಕ್ಕಲ್ಲದೆ ಬೇರೆ ಉದ್ದೇಶಕ್ಕೆ ಬಳಸತಕ್ಕದ್ದಲ್ಲ.
3) ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969ರಂತೆ ಮಂಜೂರು ಮಾಡಬೇಕಾದಂತಹ ಯಾವುದೇ ಸರ್ಕಾರಿ ಜಮೀನುಗಳು ಇದ್ದಲ್ಲಿ ಹೊರತುಪಡಿಸಲಾಗಿದೆ.
4) ಜಮೀನು ನಗರಾಭಿವೃದ್ಧಿ ಪ್ರಾಧಿಕಾರದ ಸಿಡಿಪಿ/ ಒಡಿಪಿ ವ್ಯಾಪ್ತಿಯೊಳಗೆ ಬಂದರೆ, ಅದರಂತೆ ಅನುಮತಿ ಪಡೆದು ಉಪಯೋಗಿಸತಕ್ಕದ್ದು.
5) ಈ ಅನುಮತಿಯು ಕರ್ನಾಟಕ ಭೂಸುಧಾರಣೆ ಅಧಿನಿಯಮ, 1961ರ ಕಲಂ 109 ರನ್ವಯ ವಿನಾಯಿತಿ ಮಾತ್ರವಾಗಿರುತ್ತದೆ. ಬೇರೆ ಕಾನೂನುಗಳ ಉಲ್ಲಂಘನೆಯಾದಲ್ಲಿ ಸಂಬಂಧಿಸಿದ ಕಾಯ್ದೆಯಡಿ ಅಗತ್ಯ ಕ್ರಮ ಜರುಗಿಸಲು ಅವಕಾಶವಿರುತ್ತದೆ.
6) ಈ ಜಮೀನನ್ನು ವ್ಯವಸಾಯದಿಂದ ವ್ಯವಸಾಯೇತರ ಉದ್ದೇಶಕ್ಕಾಗಿ ಪರಿವರ್ತಿಸಿಕೊಳ್ಳಲು ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ ಕಲಂ 95ರಂತೆ ಜಿಲ್ಲಾಧಿಕಾರಿಗಳಿಂದ ಅನುಮತಿ ಪಡೆಯತಕ್ಕದ್ದು.
7) ಸಂಸ್ಥೆ ನಡೆಸುವ ಚಟುವಟಿಕೆಗಳು ಸ್ಥಳೀಯ ಕಾನೂನು, ಕರ್ನಾಟಕ ಮತ್ತು ಭಾರತದ ಕಾನೂನುಗಳನ್ನು ಪಾಲಿಸತಕ್ಕದ್ದು.
8) ಪ್ರಸ್ತಾಪಿತ ಜಮೀನುಗಳಲ್ಲಿ ಯಾವುದೇ ಅಭಿವೃದ್ಧಿ ಕಾರ್ಯ ಕೈಗೊಳ್ಳುವ ಮೊದಲು ಜಮೀನಿನ ವಿನ್ಯಾಸಕ್ಕೆ ನಗರ ಯೋಜನಾ ಇಲಾಖೆ/ ಅಭಿವೃದ್ಧಿ ಪ್ರಾಧಿಕಾರ/ ಸ್ಥಳೀಯ ಪ್ರಾಧಿಕಾರಗಳಿಂದ ಅನುಮೋದನೆ ಪಡೆಯತಕ್ಕದ್ದು.
9) ಮೇಲಿನ ಷರತ್ತುಗಳು ಉಲ್ಲಂಘನೆಯಾದಲ್ಲಿ ಈಗ ನೀಡಲಾಗಿರುವ ಅನುಮತಿಯನ್ನು ಕಾನೂನು ರೀತ್ಯ ರದ್ದುಪಡಿಸಲಾಗುವುದು ಮತ್ತು ಪ್ರಸ್ತಾಪಿತ ಭೂಮಿಯನ್ನು ಋಣಮುಕ್ತವಾಗಿ ಸರ್ಕಾರದಲ್ಲಿ ನಿಹಿತ ಮಾಡಿಕೊಳ್ಳಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್.1765

ಟಿ.ಎನ್. ನಾರಾಯಣ ಗೌಡ

ಸರ್ಕಾರದ ಅಧೀನ ಕಾರ್ಯದರ್ಶಿ,

ಕಂದಾಯ ಇಲಾಖೆ (ಭೂ ಸುಧಾರಣೆ)

COMMERCIAL TAXES DEPARTMENT

PROCEEDINGS OF THE COMMISSIONER OF COMMERCIAL TAXES, (KARNATAKA), BANGALORE-CLARIFICATION UNDER SECTION 59(4) OF THE KARNATAKA VALUE ADDED TAX ACT, 2003

Sub: KVAT Act, 2003-Clarification under Section 59(4) regarding the rate of tax applicable on 'pasta' a wheat based product.

Ref: Application Dated:20.04.2010 of R.R. Oomberbhoy Pvt Ltd., 230, Dodda Muniyamma Compound, 80 Feet Road Cross, Kacharkanahalli, St.Thomas Town Post, Bangalore-560 084.

In the application cited above, R.R. Oomberbhoy Pvt Ltd., Bangalore, has sought clarification regarding the rate of tax applicable on `pasta', a wheat based product.

2. Section 59(4) of the Karnataka Value Added Tax Act, 2003 empowers the Commissioner of Commercial Taxes to clarify the rate of tax payable under the Act, if he considers it necessary or expedient so to do, for the purpose of maintaining uniformity in the work of assessments and collection of revenue. It is examined and found that the clarification requested by the petitioner is within the scope of the aforesaid provision and it is necessary that the clarification be issued for the purpose of maintaining uniformity in the work of assessments and collection of revenue.

3. Hence the following clarification is issued.

Clarification No.CLR.CR.22/10-11, Dated:09.12.2010

It is clarified that 'pasta' is liable to tax at 13.5% under Section 4(1)(b) of the Karnataka Value Added Tax Act, 2003.

PRADEEP SINGH KHAROLA
Commissioner of Commercial
Taxes, (Karnataka), Bangalore.

PR-1762

ಕಂದಾಯ ಇಲಾಖೆ

ಅಧಿಸೂಚನೆ

ಸಂಖ್ಯೆ: ಕಂಇ 48 ಭೂದಾಸೇ(1) 2009, ಬೆಂಗಳೂರು, ದಿನಾಂಕ:16.12.2010

ವಿಷಯ: ಭೂದಾಖಲೆಗಳ ಜಂಟಿ ನಿರ್ದೇಶಕರು ವೃಂದದ ಜೇಷ್ಠತಾ ಪಟ್ಟಿಯನ್ನು ದಿನಾಂಕ:01.01.2009ರಲ್ಲಿದ್ದಂತೆ ಪ್ರಕಟಿಸುವ ಬಗ್ಗೆ.

ಉಲ್ಲೇಖ: 1) ಸರ್ಕಾರದ ಸಮಸಂಖ್ಯೆ ಪತ್ರ ದಿನಾಂಕ:15.12.2009.

2) ಆಯುಕ್ತರ ಪತ್ರ ಸಂಖ್ಯೆ: ಸಿಬ್ಬಂದಿ (ಜಿ) 37/2009–10, ದಿನಾಂಕ:02.08.2010 ಮತ್ತು ದಿನಾಂಕ:28.10.2009.

ಉಲ್ಲೇಖ (1)ರ ಅಧಿಸೂಚನೆಯಲ್ಲಿ ಭೂದಾಖಲೆಗಳ ಜಂಟಿ ನಿರ್ದೇಶಕರ ವೃಂದದ ತಾತ್ಕಾಲಿಕ ಜೇಷ್ಠತಾಪಟ್ಟಿಯನ್ನು ದಿನಾಂಕ:01.01.2009ರಲ್ಲಿದ್ದಂತೆ ಪ್ರಕಟಿಸಿರುವುದನ್ನು ರದ್ದುಪಡಿಸಿದೆ. ಮುಂದುವರೆದು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆಯ ಭೂದಾಖಲೆಗಳ ಜಂಟಿ ನಿರ್ದೇಶಕರ ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ದಿನಾಂಕ:01.01.2009 ರಲ್ಲಿದ್ದಂತೆ ಇದರೊಂದಿಗೆ ಲಗತ್ತಿಸಿದಂತೆ ಪ್ರಕಟಿಸಲಾಗಿದೆ.

ಈ ಕುರಿತು ಆಕ್ಷೇಪಣೆಗಳು ಇದ್ದಲ್ಲಿ ಬಾಧಿತರು ಪ್ರಕಟಣೆಯ ದಿನಾಂಕದಿಂದ 30 ದಿನಗಳೊಳಗೆ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬಹುಮಹಡಿಗಳ ಕಟ್ಟಡ, ಇವರಿಗೆ ಲಿಖಿತವಾಗಿ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಬಿ.ವಿ. ಚೌಕಿಮಠ
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಭೂಮಾಪನ)

ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆಯ ಭೂದಾಖಲೆಗಳ ಜಂಟಿ ನಿರ್ದೇಶಕರ ತಾತ್ಕಾಲಿಕ ಜೇಷ್ಠತಾ ಪಟ್ಟಿ

ದಿನಾಂಕ:01.01.2009 ರಲ್ಲಿದ್ದಂತೆ

ಕ್ರ ಸಂ.	ಅಧಿಕಾರಿಯ ಹೆಸರು ಶ್ರೀಯುತರಾದ	ಜನ್ಮ ದಿನಾಂಕ	ಸೇವೆಗೆ ಸೇರಿದ ದಿನಾಂಕ	ಭೂ.ಜಂ.ನಿ. (ಕಾನಿ) ಹುದ್ದೆಗೆ ಬಡ್ತಿ ಹೊಂದಿದ ದಿನಾಂಕ	ಷರಾ
1	2	3	4	5	6
1.	ಮುದ್ದುರಂಗಪ್ಪ	04.03.1952	21.01.1980	17.06.1992	
2.	ಎಂ. ಶಿವಮಾದಯ್ಯ	05.08.1954	21.01.1980	18.06.1992	
3.	ಸೈಯದ್ ಸಜ್ಜದ್ ಅಹ್ಮದ್	17.12.1950	21.01.1980	14.06.1993	
4.	ಕೃಷ್ಣಮೂರ್ತಿ ಗೋಪಾಲ್	09.03.1956	14.09.1984	06.09.2006	ಸರ್ಕಾರದ ಅಧಿಸೂಚನೆ ಸಂಖ್ಯೆ: ಕಂಇ 39 ಭೂದಾಸೇ(1) 2005, ದಿ:26.05.2010 ರಲ್ಲಿ ದಿನಾಂಕ:06.09.2006 ರಿಂದ ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ಸ್ಥಾನಪನ್ನಾಧಾರದ ಮೇಲೆ ಬಡ್ತಿ ಪಡೆದಿರುತ್ತಾರೆ.
5.	ಸಯ್ಯದ್ ಇಲಿಯಾಸ್ ಅಹ್ಮದ್	26.11.1955	28.09.1984	06.09.2006	

ಬಿ.ವಿ. ಚೌಕಿಮಠ
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಭೂಮಾಪನ)

ಪಿ.ಆರ್.1787

ಆಯುಕ್ತರು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ, ಬೆಂಗಳೂರು ರವರ ನಡವಳಿ

ಸಂಖ್ಯೆ: ಸಿಬ್ಬಂದಿ.ಶಿಸ್ತು. ಟ್ರ್ಯಾಪ್.21/2007–08, ದಿನಾಂಕ:20.09.2010

ವಿಷಯ: ಶ್ರೀ ಬಿ.ಎಲ್. ಯಡಹಳ್ಳಿ, ಭೂಮಾಪಕರು ಇವರ ವಿರುದ್ಧದ ಟ್ರ್ಯಾಪ್ ಪ್ರಕರಣದಲ್ಲಿನ ಅಂತಿಮ ಆದೇಶದ ಬಗ್ಗೆ.

ಉಲ್ಲೇಖ: 1) ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರ ಲೋಕ್.ಐಎನ್‌ವಿ(ಜ)/ಎಲ್–6/ಸಿಆರ್–1/2008/ಬಿಜಿಕೆಟಿ ದಿನಾಂಕ:24/28.01.2008, 21.04.2008 & 28.08.2008.

2) ಈ ಕಛೇರಿ ನಡವಳಿ ಸಮಸಂಖ್ಯೆ ದಿನಾಂಕ:01.04.2008, 28.06.2008 ಮತ್ತು 20.02.2009.

3) ಈ ಕಛೇರಿ ನಡವಳಿ ದಿನಾಂಕ:05.03.2009 (ಅಭಿಯೋಜನಾ ಮಂಜೂರಾತಿ ಕುರಿತು)

4) ಮಾನ್ಯ ಜಿಲ್ಲಾ ಸೆಷನ್ ಕೋರ್ಟ್, ಬಾಗಲಕೋಟೆ ರವರ ತೀರ್ಪಿನ ಸಂಖ್ಯೆ:47/2009 ದಿನಾಂಕ:02.07.2010.

5) ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರ ನಡವಳಿ ಸಂಖ್ಯೆ: ಲೋಕ್.ಐಎನ್‌ವಿ(ಜ)/ಎಲ್–6/ಸಿಆರ್–1/2008 ಬಿಜಿಕೆಟಿ ದಿನಾಂಕ:18/27.08.2010.

6) ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ.9.ಸೇಇವಿ 95 ದಿನಾಂಕ:26.06.1996.

ಪ್ರಸ್ತಾವನೆ:

ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರ ವರದಿ ದಿನಾಂಕ:24/28.01.2008ರ ಪ್ರಕಾರ ಶ್ರೀ ದುಂಡಪ್ಪ ಬಿನ್ ಗುಡದಪ್ಪ ಹಡಪದ, ತೊಲಮಟ್ಟಿ, ಬೀಳಗಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಇವರು ಬಾಗಲಕೋಟೆ ಜಿಲ್ಲೆ ಲೋಕಾಯುಕ್ತ ಕಛೇರಿಗೆ ದಿನಾಂಕ:22.01.2008ರಂದು ಫಿರ್ಯಾದಿ ನೀಡಿ, ಫಿರ್ಯಾದುದಾರರ ಸ.ನಂ.153 ರ 12 ಎಕರೆ ಜಮೀನನ್ನು ಸರ್ವೆ ಮಾಡಲು ಶ್ರೀ ಭೀಮಪ್ಪ ಲಕ್ಷ್ಮಪ್ಪ ಯಡಹಳ್ಳಿ, ದ್ವಿತೀಯ ದರ್ಜೆ ಭೂಮಾಪಕರು ಮತ್ತು ಶ್ರೀ ಮುತ್ತಪ್ಪ ಹನಮಪ್ಪ ತುರನೂರ, ದ್ವಿತೀಯ ದರ್ಜೆ ಭೂಮಾಪಕರು ಇವರುಗಳು ರೂ.1,500–00ಗಳ ಲಂಚದ ಹಣಕ್ಕೆ ಒತ್ತಾಯಿಸಿರುತ್ತಾರೆಂದು ದೂರು ನೀಡಿದ ಹಿನ್ನೆಲೆಯಲ್ಲಿ ಭ್ರಷ್ಟಾಚಾರ ನಿರೋಧಕ ಕಾಯಿದೆ 1988ರ ಕಲಂ 7, 13(1) (ಡಿ) ಕಲಂ 13(2)ರ ಅಡಿಯಲ್ಲಿ ಮೊಕದ್ದಮೆ ಸಂಖ್ಯೆ: 1/2008ರ ಪ್ರಕಾರ ದಿನಾಂಕ:22.01.2008ರಂದು ಪ್ರಕರಣ ದಾಖಲಿಸಿಕೊಂಡು ತನಿಖೆಯನ್ನು ಕೈಗೆತ್ತಿಕೊಂಡಿದ್ದು ದಿನಾಂಕ:22.01.2008ರಂದು ಲೋಕಾಯುಕ್ತರವರು ತಹಶೀಲ್ದಾರ್ ಕಛೇರಿ, ಬೀಳಗಿ ತಾಲ್ಲೂಕಿನಲ್ಲಿ ಬೀಸಿದ (ಟ್ರ್ಯಾಪ್) ಬಲೆಯಲ್ಲಿ ಶ್ರೀ ಭೀಮಪ್ಪ ಲಕ್ಷ್ಮಪ್ಪ ಯಡಹಳ್ಳಿ, ದ್ವಿತೀಯ ದರ್ಜೆ ಭೂಮಾಪಕರು ಇವರು ಫಿರ್ಯಾದುದಾರರಿಂದ ತಹಶೀಲ್ದಾರ್ ಕಛೇರಿ, ಬೀಳಗಿ ಕಛೇರಿಯಲ್ಲಿ ಲಂಚದ ಹಣವನ್ನು ಪಡೆಯುತ್ತಿರುವಾಗ ಸಿಕ್ಕಿಬಿದ್ದ ಹಿನ್ನೆಲೆಯಲ್ಲಿ ಈ ಕಛೇರಿ ನಡವಳಿ ದಿನಾಂಕ:24/28.01.2008ರಲ್ಲಿ ಶ್ರೀ ಬಿ.ಎಲ್. ಯಡಹಳ್ಳಿ, ದ್ವಿತೀಯ ದರ್ಜೆ ಭೂಮಾಪಕರು ಇವರನ್ನು ಅಮಾನತ್ತುಗೊಳಿಸಿದೆ. ನಂತರ ಶ್ರೀ ಎಂ.ಹೆಚ್. ತುರನೂರ, ದ್ವಿತೀಯ ದರ್ಜೆ ಭೂಮಾಪಕರು ಇವರು ಲಂಚವನ್ನು ತೆಗೆದುಕೊಳ್ಳಲು ಪ್ರೇರೇಪಿಸಿದ ಮೇರೆಗೆ ಉಲ್ಲೇಖ (1)ರ ದಿನಾಂಕ:28.06.2008ರಂದು ಸದರಿ ನೌಕರರನ್ನು ಅಮಾನತ್ತುಗೊಳಿಸಲಾಗಿದೆ.

ನಂತರ ನೌಕರರುಗಳನ್ನು ದಿನಾಂಕ:28.08.2008ರ ಈ ಕಛೇರಿ ನಡವಳಿಯಲ್ಲಿ ಅಮಾನತ್ತಿನಿಂದ ತೆರವುಗೊಳಿಸಿ, ಕ್ರಮವಾಗಿ ತಹಶೀಲ್ದಾರ್, ಇಂಡಿ ಮತ್ತು ತಹಶೀಲ್ದಾರ್, ರಾಮದುರ್ಗ ಕಛೇರಿಗೆ ಪುನರ್ ನೇಮಕಗೊಳಿಸಿ ಆದೇಶಿಸಲಾಗಿದೆ. ನಂತರ ನೌಕರರುಗಳನ್ನು ಸಕ್ಷಮ ನ್ಯಾಯಾಲಯದಲ್ಲಿ ಅಭಿಯೋಜನೆಗೆ ಒಳಪಡಿಸಲು ದಿನಾಂಕ:05.03.2009ರಂದು ಅಭಿಯೋಜನಾ ಮಂಜೂರಾತಿಯನ್ನು ನೀಡಲಾಗಿರುತ್ತದೆ.

ಸದರಿ ನೌಕರರುಗಳ ಕ್ರಿಮಿನಲ್ ಪ್ರಕರಣವು ಸಕ್ಷಮ ನ್ಯಾಯಾಲಯದಲ್ಲಿ ವಿಚಾರಣೆ ಹಂತದಲ್ಲಿದ್ದ ಸಮಯದಲ್ಲಿ ಶ್ರೀ ಮುತ್ತಪ್ಪ ಹನುಮಪ್ಪ ತುರನೂರ ಇವರು ದಿನಾಂಕ:09.12.2009ರಂದು ಮರಣ ಹೊಂದಿರುತ್ತಾರೆಂದು, ಸದರಿಯವರ ವಿರುದ್ಧದ ಪ್ರಕರಣವನ್ನು ರದ್ದುಗೊಳಿಸಿ (abated)ರುತ್ತಾರೆ. ಶ್ರೀ ಭೀಮಪ್ಪ ಲಕ್ಷ್ಮಪ್ಪ ಯಡಹಳ್ಳಿ, ಭೂಮಾಪಕರು ಇವರ ವಿರುದ್ಧ ಆರೋಪ ಸಾಬೀತಾಗಿದ್ದು, ಆರೋಪಿಗೆ 1988ರ ಲಂಚ ವಿರೋಧ ಕಾಯ್ದೆ ಕಲಂ 7ರಲ್ಲಿ ಮಾಡಿದ ಅಪರಾಧಕ್ಕಾಗಿ 4 ವರ್ಷಗಳ ಶಿಕ್ಷೆ ಮತ್ತು ರೂ.5000–00 ಗಳ ದಂಡ ವಿಧಿಸಿದ್ದು, ಪಾವತಿಸಲು ತಪ್ಪಿದಲ್ಲಿ ಹೆಚ್ಚಿನ 9 ತಿಂಗಳು ಸಾದಾ ಶಿಕ್ಷೆ ಮತ್ತು ಸದರಿ ಕಾಯ್ದೆ ಕಲಂ 13(1) (ಡಿ) ಸಹವಾಚ 13(2)ರ ಪ್ರಕಾರ ಮಾಡಿದ ಅಪರಾಧಕ್ಕಾಗಿ 5 ವರ್ಷ ಸಾದಾ ಶಿಕ್ಷೆ ಮತ್ತು ರೂ.6,000–00 ಗಳ ದಂಡ ವಿಧಿಸಿದ್ದು, ಪಾವತಿಸಲು ತಪ್ಪಿದಲ್ಲಿ 12 ತಿಂಗಳ ಹೆಚ್ಚಿನ ಸಾದಾಶಿಕ್ಷೆ ವಿಧಿಸಿ, ಈ ಎಲ್ಲಾ ಶಿಕ್ಷೆಗಳು ಒಟ್ಟಿಗೆ ಜಾರಿಗೆ ಬರುವಂತೆ ತೀರ್ಪು ನೀಡಿರುತ್ತಾರೆ.

ಉಲ್ಲೇಖ (5)ರ ಲೋಕಾಯುಕ್ತರವರ ಪತ್ರದಲ್ಲಿ ತಿಳಿಸಿರುವಂತೆ, ಸರ್ಕಾರದ ಸುತ್ತೋಲೆ ಸಂಖ್ಯೆ: ಸಿ.ಆ.ಸು.ಇ.ನಿ. 95 ದಿನಾಂಕ:26.06.1996 ರಂತೆ ಕ್ರಮ ತೆಗೆದುಕೊಳ್ಳಲು ಕೋರಿರುತ್ತಾರೆ. ಸರ್ಕಾರದ ಸುತ್ತೋಲೆ ದಿನಾಂಕ:26.06.1996ರಲ್ಲಿ ತಿಳಿಸಿರುವಂತೆ ಕರ್ನಾಟಕ ಸರ್ಕಾರಿ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(1) ರನುಸಾರ ಸದರಿ ನಿಯಮಗಳು, 11, 12 ಮತ್ತು 13ರಲ್ಲಿ ಏನೇ ಹೇಳಲಾಗಿದ್ದರೂ ಕ್ರಿಮಿನಲ್ ನ್ಯಾಯಾಲಯದಲ್ಲಿ ಕ್ರಿಮಿನಲ್ ಆರೋಪಕ್ಕಾಗಿ ದೋಷಸಿದ್ಧಿಯಾದ ಸರ್ಕಾರಿ ನೌಕರರನ್ನು ಪುನಃ ಇಲಾಖಾ ವಿಚಾರಣೆಗೆ ಒಳಪಡಿಸದೆಯೇ ಸೇವೆಯಿಂದ ವಜಾ ಮಾಡುವ ಅಥವಾ ತೆಗೆದುಹಾಕುವ ದಂಡನೆಯನ್ನು ವಿಧಿಸಬಹುದಾಗಿದೆ ಎಂದು ಅಕಸ್ಮಾತ್ ಅಪೀಲಿನಲ್ಲಿ ಆಪಾದಿತ ನೌಕರರು ಖುಲಾಸೆಯಾದಲ್ಲಿ ಅವರನ್ನು ಮತ್ತೆ ಕೆಲಸಕ್ಕೆ ತೆಗೆದುಕೊಂಡು ವಜಾಗೊಳಿಸಿದ ಆದೇಶ ಆಗದೇ ಇದ್ದಲ್ಲಿ ಲಭ್ಯವಾಗಬಹುದಾದ ಎಲ್ಲಾ ಸೇವಾ ಭತ್ಯೆಗಳಿಗೆ ಅರ್ಹರಾಗಿರುತ್ತಾರೆಂದು ಸರ್ಕಾರದ ಸುತ್ತೋಲೆಯ ಅಂಶವನ್ನು ಪರಿಗಣಿಸಿ, ಕ್ರಿಮಿನಲ್ ಆರೋಪಕ್ಕಾಗಿ ದೋಷಸಿದ್ಧಿಯಾದ ಸರ್ಕಾರಿ ನೌಕರರನ್ನು ಪುನಃ ಇಲಾಖಾ ವಿಚಾರಣೆಗೆ ಒಳಪಡಿಸದೆಯೇ ಸೇವೆಯಿಂದ ವಜಾ ಮಾಡುವ ಬಗ್ಗೆ ಅಭಿಪ್ರಾಯಪಟ್ಟು ಈ ಕೆಳಕಂಡಂತೆ ಆದೇಶಿಸಿದೆ.

ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಶ್ರೀಮತಿ ಜಿ. ಕಲ್ಪನಾ, ಭಾ.ಆ.ಸೇ. ಆಯುಕ್ತರು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ, ಬೆಂಗಳೂರು ಆದ ನಾನು ಕರ್ನಾಟಕ ಸರ್ಕಾರಿ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) 1957ರ ನಿಯಮ 9(3)ರ ಓದಿಕೊಂಡ ನಿಯಮ 8(viii)ರನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಶ್ರೀ ಭೀಮಪ್ಪ ಲಕ್ಷ್ಮಪ್ಪ ಯಡಹಳ್ಳಿ, ದ್ವಿತೀಯ ದರ್ಜೆ ಭೂಮಾಪಕರು, ತಹಶೀಲ್ದಾರ್ ಕಛೇರಿ, ಇಂಡಿ ಇವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಸೇವೆಯಿಂದ ವಜಾಗೊಳಿಸಿ ಆದೇಶಿಸಿದೆ.

ಆಯುಕ್ತರು,
ಭೂಮಾಪನ ಕಂದಾಯ ವ್ಯವಸ್ಥೆ ಮತ್ತು
ಭೂದಾಖಲೆಗಳು, ಬೆಂಗಳೂರು.

ಪಿ.ಆರ್.1532

ಸಹಕಾರ ಇಲಾಖೆ

ಸಹಕಾರ ಸಂಘಗಳ ಉಪನಿಬಂಧಕರು ಹಾಗೂ ಸಂಘ ಸಂಸ್ಥೆಗಳ ನೋಂದಣಾಧಿಕಾರಿಗಳ ಕಛೇರಿ, ರಾಮನಗರಜಿಲ್ಲೆ, ರಾಮನಗರ

ವಿಷಯ: ಸಮಾಪನೆಗೊಂಡಿರುವ ಗುಡ್ಡೇತಿಮ್ಮಸಂದ್ರ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ (ನಿ)., ಚನ್ನಪಟ್ಟಣ ತಾಲ್ಲೂಕು ಇದರ ನೋಂದಣಿ ಸಂಖ್ಯೆಯನ್ನು ರದ್ದುಪಡಿಸುವ ಬಗ್ಗೆ.

ಉಲ್ಲೇಖ: 1) ಸಹಕಾರ ಸಂಘಗಳ ಉಪನಿಬಂಧಕರು, ಬೆಂಗಳೂರು (ಗ್ರಾ) ಜಿಲ್ಲೆ ರವರು ಆದೇಶ ಸಂಖ್ಯೆ: ಡಿ.ಆರ್.ಬಿ./ಆರ್/ಸಮಾಪನೆ/68/2004–05 ದಿನಾಂಕ:21.06.2004.

2) ಸಹಕಾರ ಸಂಘಗಳ ಸಹಾಯಕ ನಿಬಂಧಕರು, ರಾಮನಗರ ಉಪವಿಭಾಗ, ರಾಮನಗರ ರವರ ಪತ್ರ ಸಸನಿರಾ46:ಸಮಾಪನೆ:15: 2010–11, ದಿನಾಂಕ:22.04.2010.

3) ಸಹಕಾರ ಅಭಿವೃದ್ಧಿ ಅಧಿಕಾರಿ, ಚನ್ನಪಟ್ಟಣರವರ ಪತ್ರ ಸಂಖ್ಯೆ: ಸಅಚ:ಗುಡೇ:146:2010–11.

ಪ್ರಸ್ತಾವನೆ:

ಗುಡ್ಡೇ ತಿಮ್ಮಸಂದ್ರ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ (ನಿ)., ಚನ್ನಪಟ್ಟಣ ತಾಲ್ಲೂಕು ಈ ಸಂಘವನ್ನು ಸಹಕಾರ ಸಂಘಗಳ ಸಹಾಯಕ ನಿಬಂಧಕರು, ರಾಮನಗರ ಇವರು ನೊಂದಣಿ ಸಂಖ್ಯೆ: ಸನಿರಾ 46/ಸಾಮಾನ್ಯ/ ನೋಂದಣಿ/25699/98–99 ದಿನಾಂಕ:25.06.1998ರ ರೀತ್ಯಾ ನೊಂದಾಯಿಸಲಾಗಿರುತ್ತದೆ. ಈ ಸಂಘವು ನೊಂದಣಿ ನಂತರ ಕೆಲವು ವರ್ಷಗಳು ಮಾತ್ರ ಕಾರ್ಯನಿರ್ವಹಿಸಿ, ಆನಂತರ ಕೆಲಸ ಕಾರ್ಯಗಳನ್ನು ನಿರ್ವಹಿಸದೇ ಸ್ಥಗಿತಗೊಂಡ ಹಿನ್ನಲೆಯಲ್ಲಿ ಈ ಸಂಘವನ್ನು ಉಲ್ಲೇಖ–1ರ ಆದೇಶದಲ್ಲಿ ಸಮಾಪನೆಗೊಳಿಸಿ ಸಹಕಾರ ಅಭಿವೃದ್ಧಿ ಅಧಿಕಾರಿ ಚನ್ನಪಟ್ಟಣ ಇವರನ್ನು ಈ ಸಂಘದ ಸಮಾಪನಾಧಿಕಾರಿಯಾಗಿ ನೇಮಕ ಮಾಡಲಾಗಿತ್ತು. ಸದರಿ ಸಮಾಪನಾಧಿಕಾರಿಯವರು ಸಂಘದ ಪ್ರಭಾರವನ್ನು ವಹಿಸಿಕೊಂಡು ಸಂಘದ ಸಮಾಪನಾ ನಡವಳಿಯನ್ನು ನಡೆಸಿರುತ್ತಾರೆ.

ಸದರಿ ಸಮಾಪನಾಧಿಕಾರಿಗಳು ದಿನಾಂಕ:15.03.2010ರಂದು ಸಾರ್ವಜನಿಕ ಪ್ರಕಟಣೆ ಹೊರಡಿಸಿ ಸಂಘದ ಪುನಃಶ್ಚೇತನಗೊಳಿಸುವ ಬಗ್ಗೆ ಆಸಕ್ತಿ ಇದ್ದಲ್ಲಿ ಅಥವಾ ಸಂಘದ ನೋಂದಣಿ ರದ್ಧತಿಯ ಬಗ್ಗೆ ಆಕ್ಷೇಪಣೆ ಇದ್ದಲ್ಲಿ ಖುದ್ದು ಲಿಖಿತ ಮನವಿ ಸಲ್ಲಿಸುವಂತೆಯೂ ತಪ್ಪಿದಲ್ಲಿ ಯಾರಿಗೂ ಸಂಘದ ಪುನಃಶ್ಚೇತನದ ಬಗ್ಗೆ ಆಸಕ್ತಿ ಇರುವುದಿಲ್ಲವೆಂತಲೂ ನೊಂದಣಿ ರದ್ಧತಿ ಬಗ್ಗೆ ಯಾರಿಂದಲೂ ಯಾವುದೇ ಆಕ್ಷೇಪಣೆ ಇರುವುದಿಲ್ಲವೆಂದು ಪರಿಗಣಿಸಿ, ನೊಂದಣಿ ರದ್ಧತಿಗೆ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದ್ದು ತಂಟೆ ತಕರಾರು ಸ್ವೀಕೃತಿಯಾಗದ ಕಾರಣ ದಿನಾಂಕ:29.03.2010 ರಂದು ಸಂಘದ ಆಸ್ತಿ–ಜವಾಬ್ದಾರಿಯನ್ನು ಶೂನ್ಯಗೊಳಿಸಿ ಸಂಘದ ನೊಂದಣಿ ರದ್ಧತಿಗೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಸದರಿ ಸಂಘದ ಉಳಿತಾಯ ಖಾತೆಯಲ್ಲಿ ರೂ.3085=44ಗಳನ್ನು ಸಹಕಾರ ಸಂಘಗಳ ಉಪ–ನಿಬಂಧಕರ ಪಿ.ಡಿ. ಖಾತೆಗೆ ಜಮಾಗೊಳಿಸಿರುತ್ತಾರೆ. ಉಳಿದಂತೆ ಸಂಘದ ಆಸ್ತಿ ಜವಾಬ್ದಾರಿಯನ್ನು ಶೂನ್ಯಗೊಳಿಸಿರುತ್ತಾರೆ. ಸಹಕಾರ ಸಂಘಗಳ ಸಹಾಯಕ ನಿಬಂಧಕರು, ರಾಮನಗರ ಉಪವಿಭಾಗ, ರಾಮನಗರ ರವರು ಸದರಿ ಸಮಾಪನಾಧಿಕಾರಿಗಳ ತೀರ್ಮಾನದಂತೆ, ಸದರಿ ಸಂಘವನ್ನು ಸಮಾಪನಾ ಸ್ಥಿತಿಯಲ್ಲಿ ಮುಂದುವರೆಸಿರುವುದು ಸಂಘದ ಸದಸ್ಯರಿಗಾಗಲೀ ಅಥವಾ ಸಾರ್ವಜನಿಕರಿಗಾಗಲೀ ಯಾವುದೇ ಪ್ರಯೋಜನವಿಲ್ಲದಿರುವುದರಿಂದ, ಸಂಘದ ನೋಂದಣಿ ಸಂಖ್ಯೆಯನ್ನು ರದ್ದುಗೊಳಿಸುವಂತೆ ಕೋರಿ ಉಲ್ಲೇಖ–2ರ ಪತ್ರದಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದೆ. ಈ ಸಂಘವನ್ನು ಮುಂದುವರಿಸಿಕೊಂಡು ಹೋಗಲು ಯಾರಿಗೂ ಆಸಕ್ತಿ ಇಲ್ಲದಿರುವುದನ್ನು ಮನಗಂಡು, ಈ ಸಂಘದ ನೊಂದಣಿಯನ್ನು ರದ್ದುಗೊಳಿಸುವುದು ಸೂಕ್ತ ಎಂದು ತೀರ್ಮಾನಿಸಿ, ಈ ಕೆಳಗಿನ ಆದೇಶವನ್ನು ನೀಡಲಾಗಿದೆ.

ಆದೇಶ

ಸಂಖ್ಯೆ: ಉನಿರಾ/ಸಮಾಪನೆ/8/2010–11, ದಿನಾಂಕ:21.07.2010

ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 75ರಲ್ಲಿ ದತ್ತವಾಗಿರುವ ಅಧಿಕಾರದ ಮೇರೆಗೆ ಡಿ.ಬಿ. ಲಿಂಗಣ್ಣಯ್ಯ ಸಹಕಾರ ಸಂಘಗಳ ಉಪನಿಬಂಧಕರು, ರಾಮನಗರ ಜಿಲ್ಲೆ, ರಾಮನಗರ ಆದ ನಾನು ಸಮಾಪನೆಯಲ್ಲಿರುವ ಗುಡ್ಡೇತಿಮ್ಮಸಂದ್ರ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ (ನಿ)., ಚನ್ನಪಟ್ಟಣ ಈ ಸಂಘದ ನೊಂದಣಿ ಸಂಖ್ಯೆ: ಸನಿರಾ 46/ಸಾಮಾನ್ಯ/ ನೋಂದಣಿ/25699/98–99, ದಿನಾಂಕ:25.06.1998 ಅನ್ನು ರದ್ದುಪಡಿಸಿರುತ್ತೇನೆ. ಈ ಆದೇಶದ ದಿನಾಂಕದಿಂದ ಈ ಸಂಘವು ಸಹಕಾರ ಸಂಸ್ಥೆಯಾಗಿ ಅಸ್ತಿತ್ವದಲ್ಲಿರುವುದಿಲ್ಲ.

ಸದರಿ ಸಂಘದ ಮೂಲ ನೊಂದಣಿ ಪತ್ರ ಹಾಗೂ ಲೆಕ್ಕ ಪುಸ್ತಕಗಳು ಇದ್ದಲ್ಲಿ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ರಾಮನಗರ ಉಪವಿಭಾಗ, ರಾಮನಗರ ಇವರ ಕಛೇರಿಯಲ್ಲಿ ದಾಖಲಿಸಿ ಸ್ವೀಕೃತಿಯನ್ನು ಪಡೆಯುವುದು.

ಈ ಆದೇಶವನ್ನು ನನ್ನ ಸಹಿ ಹಾಗೂ ಈ ಕಛೇರಿಯ ಮೊಹರಿನೊಂದಿಗೆ ದಿನಾಂಕ:21.07.2010 ರಂದು ನೀಡಲಾಗಿದೆ.

ಸಹಕಾರ ಸಂಘಗಳ ಉಪನಿಬಂಧಕರು,
ರಾಮನಗರ ಜಿಲ್ಲೆ, ರಾಮನಗರ.

ಪಿ.ಆರ್.1351

ಕರ್ನಾಟಕ ಸಹಕಾರಿಗಳ ನಿಬಂಧಕರು, ಇವರ ನ್ಯಾಯಾಲಯ,

ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1 ಅಲಿ–ಆಸ್ಕರ್ ರಸ್ತೆ, ಬೆಂಗಳೂರು–52

ದಾವಾ ಸಂಖ್ಯೆ: RCS/ DIS/ D4/ SOU/ 2/ 2010-11

ಅರ್ಜಿದಾರರು:	ಪ್ರತಿವಾದಿ
ಪ್ರಧಾನ ವ್ಯವಸ್ಥಾಪಕರು, ನವಕರ್ನಾಟಕ ಸೌಹಾರ್ದ ಕ್ರೆಡಿಟ್ ಕೋ–ಅಪರೇಟಿವ್ ಲಿ., ಹೊಸಪೇಟೆ, ಹಾವೇರಿ ಶಾಖೆ.	1) ಅರವಿಂದ ಫಕ್ಕೀರಪ್ಪ ದೊಡ್ಡಮನಿ, ವಯಸ್ಸು:43 ವರ್ಷ, ಉದ್ಯೋಗ:ವ್ಯಾಪಾರ ಸಾ: ಶಿದ್ದದೇವಪುರ, ಹಾವೇರಿ, ತಾ:ವ ಜಿ: ಹಾವೇರಿ.
	2) ಶ್ರೀ ಗಂಗಾಧರ ರೇವಣಸಿದ್ದಪ್ಪ ಸಾತೇನಹಳ್ಳಿ, ವಯಸ್ಸು:38 ವರ್ಷ, ಉದ್ಯೋಗ: ಪಿಗ್ಮಿ ಕಲೆಕ್ಟರ್, ಸಾ: ಯಾಲಕ್ಕಿ ಓಣಿ, ಹಾವೇರಿ. ತಾ:ವ ಜಿ: ಹಾವೇರಿ.
	3) ಶ್ರೀ ಶಂಭುಲಿಂಗ ಚನ್ನಬಸಪ್ಪ ಸಾತೇನಹಳ್ಳಿ ವಯಸ್ಸು: 40 ವರ್ಷ, ಉದ್ಯೋಗ: ಅಕ್ಕಿ ವ್ಯಾಪಾರ, ಸಾ: ಯಾಲಕ್ಕಿ ಓಣಿ, ಹಾವೇರಿ. ತಾ:ವ ಜಿ: ಹಾವೇರಿ.

ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997 ಕಲಂ 44(1) ರಡಿ ಷರತ್ತಿಗೊಳಪಟ್ಟ ತೀರ್ಪು ಪೂರ್ವ ಜಪ್ತಿ ಆದೇಶದ ನೋಟೀಸ್

ಮೇಲ್ಕಂಡ ಅರ್ಜಿದಾರರು ಈ ದಾವೆಯನ್ನು ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997ರ ಕಲಂ 39ರಡಿ ದಾಖಲಿಸಿ, ಪ್ರತಿವಾದಿಗಳಿಂದ ವಸೂಲಾಗಬೇಕಾದ ಸಾಲದ ಬಾಕಿ ಮೊತ್ತ ರೂ.33470–00 ವಸೂಲು ಮಾಡಲು ಡಿಕ್ರಿ ನೀಡಬೇಕೆಂದು ಕೋರಿರುತ್ತಾರೆ.

ಸದರಿ ಅರ್ಜಿಯೊಂದಿಗೆ ಅರ್ಜಿದಾರರು ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997ರ ಕಲಂ 44(1)ರಡಿ ಮಧ್ಯಂತರ ಅರ್ಜಿ ಸಲ್ಲಿಸಿ, 1ನೇ ಪ್ರತಿವಾದಿಗೆ ಸೇರಿದ ಸ್ಥಿರಾಸ್ತಿಗಳನ್ನು ಷರತ್ತುಗೊಳಪಟ್ಟು ತೀರ್ಪು ಪೂರ್ವ ಜಪ್ತಿ ಆದೇಶ ಮಾಡಲು ಕೋರಿರುತ್ತಾರೆ.

ಅರ್ಜಿದಾರರ ದಾವೆ ಅರ್ಜಿಯನ್ನು ಕಡತಕ್ಕೆ ತೆಗೆದುಕೊಂಡು ದಿನಾಂಕ:26.06.2010 ರಂದು ಪ್ರಕರಣದ ವಿಚಾರಣೆ ನಡೆಸಲಾಯಿತು. ಮಧ್ಯಂತರ ಅರ್ಜಿಯ ಬಗ್ಗೆ ಅರ್ಜಿದಾರರು ತಮ್ಮ ಕೋರಿಕೆ ಮಂಡಿಸಿರುತ್ತಾರೆ. ಹಾಗೂ ಅದಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ.

ಅರ್ಜಿದಾರರು ತಮ್ಮ ಕೋರಿಕೆಯಲ್ಲಿ 1ನೇ ಪ್ರತಿವಾದಿಯು ತಮ್ಮ ಸಂಸ್ಥೆಯಲ್ಲಿ ದಿನಾಂಕ:08.07.2008 ರಂದು ರೂ.22500/–ಗಳ ಸಾಲ ಪಡೆದಿದ್ದು ಈ ಸಾಲ ತೀರುವಳಿಯಾಗದೆ ಸುಸ್ತಿದಾರರಾಗಿರುತ್ತಾರೆಂದು ಈ ಸಾಲಕ್ಕೆ 2ನೇ ಹಾಗೂ 3ನೇ ಪ್ರತಿವಾದಿಗಳು ಜಾಮೀನುದಾರರೆಂದು, 1ನೇ ಪ್ರತಿವಾದಿಯು ತಮ್ಮ ಸ್ಥಿರಾಸ್ಥಿಯಾದ ಷೆಡ್ಯೂಲ್ ಸ್ವತ್ತನ್ನು ಈಗ ಪರಭಾರೆ ಮಾಡಲು ಉದ್ದೇಶಿಸಿದ್ದಾರೆಂದು ಇದನ್ನು ಅವರು ಪರಭಾರೆ ಮಾಡಿದಲ್ಲಿ ಈ ದಾವೆಯಲ್ಲಿ ಡಿಕ್ರಿ ನೀಡಿದರೂ ಸಾಲ ವಸೂಲಾಗದೆ ಹೋಗುವ ಸಂಭವವಿರುವುದರಿಂದ ತೀರ್ಪು ಪೂರ್ವ ಜಪ್ತಿ ಆದೇಶ ಹೊರಡಿಸಲು ಕೋರಿರುತ್ತಾರೆ.

ಅರ್ಜಿದಾರರ ಅರ್ಜಿ ಮತ್ತು ಕೋರಿಕೆಯನ್ನು ಹಾಗೂ ಅರ್ಜಿದಾರರ ಸಹಕಾರಿ ಪರ ಸಲ್ಲಿಸಿರುವ ದಾಖಲೆಗಳು, ಪ್ರಮಾಣ ಪತ್ರದ ಅಂಶಗಳನ್ನು ಪರಿಶೀಲಿಸಿದೆ. ಅರ್ಜಿದಾರರ ಸಂಸ್ಥೆಯಲ್ಲಿ ಸಾಲ ಪಡೆದಿದ್ದು ಸಾಲಗಾರರ ಹೆಸರಿನಲ್ಲಿರುವ ಸ್ಥಿರಾಸ್ತಿಯನ್ನು ತೀರ್ಪು ಪೂರ್ವ ಜಪ್ತಿ ಆದೇಶ ಹೊರಡಿಸಲು ಕೋರಿರುವುದನ್ನು ಪರಿಶೀಲಿಸಲಾಗಿದೆ. ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997ರ ಕಲಂ 44ರ ರೀತ್ಯಾ ಷರತ್ತಿಗೊಳಪಟ್ಟ ತೀರ್ಪು ಪೂರ್ವ ಜಪ್ತಿ ಮಾಡಲು ಸಲ್ಲಿಸಿರುವ ಅರ್ಜಿಯನ್ನು ಅಂಗೀಕರಿಸುವುದು ಈ ಹಂತದಲ್ಲಿ ಅಗತ್ಯವೆಂದು ಮನಗಂಡು, ಕೆಳಕಂಡ ಮಧ್ಯಂತರ ಆದೇಶವನ್ನು ಹೊರಡಿಸಿದೆ.

ಮಧ್ಯಂತರ ಆದೇಶ

ಈ ಆದೇಶದ ಅನುಬಂಧದಲ್ಲಿ ವಿವರಿಸಿರುವ 1ನೇ ಪ್ರತಿವಾದಿಯ ಹೆಸರಿನಲ್ಲಿನ ಸ್ಥಿರಾಸ್ತಿಗಳನ್ನು ಈ ನ್ಯಾಯಾಲಯದಲ್ಲಿ ಅರ್ಜಿದಾರರು ದಾಖಲು ಮಾಡಿರುವ ದಾವೆ ಅರ್ಜಿಯ ಅಂತಿಮ ಆದೇಶಕ್ಕೆ ಒಳಪಟ್ಟು, ಸೌಹಾರ್ದ ಸಹಕಾರಿ ಕಾಯ್ದೆ 1997ರ ಕಲಂ 44(1)ರಡಿ ಸದರಿ ಸ್ಥಿರಾಸ್ತಿಗಳನ್ನು ಷರತ್ತಿಗೊಳಪಟ್ಟು ತೀರ್ಪು ಪೂರ್ವ ಜಪ್ತಿ ಮಾಡಿ, ಆದೇಶ ಹೊರಡಿಸಿದೆ. 1ನೇ ಪ್ರತಿವಾದಿಯು ಈ ಆದೇಶವನ್ನು ತೆರವುಗೊಳಿಸಲು ಇಚ್ಚಿಸಿದಲ್ಲಿ, ಅರ್ಜಿದಾರರ ಸಹಕಾರಿಯಲ್ಲಾಗಲೀ, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನಲ್ಲಾಗಲೀ, ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕಿನಲ್ಲಾಗಲೀ ಅಥವಾ ಇನ್ನಾವುದೇ ಸಹಕಾರ ಬ್ಯಾಂಕಿನಲ್ಲಿ ರೂ.34.000 (ರೂಪಾಯಿ ಮೂವತ್ತ ನಾಲ್ಕು ಸಾವಿರಗಳು ಮಾತ್ರ) ಗಳನ್ನು ಠೇವಣಿ ಮಾಡಿ, ಸಂಬಂಧಿಸಿದ ರಶೀದಿಯನ್ನು ಈ ಆದೇಶ ಪಡೆದ ದಿನದಿಂದ 15 ದಿವಸಗಳ ಒಳಗಾಗಿ ಈ ನ್ಯಾಯಾಲಯಕ್ಕೆ ಸಲ್ಲಿಸಲು ಸೂಚಿಸಿದೆ. ವಿಫಲರಾದಲ್ಲಿ ಪ್ರತಿವಾದಿಯ ಆಕ್ಷೇಪಣೆ ಏನೂ ಇಲ್ಲವೆಂದು ಪರಿಗಣಿಸಿ, ಲಭ್ಯವಿರುವ ದಾಖಲೆಗಳು ಮತ್ತು ಅರ್ಹತೆಯ ಅನುಸಾರ ಸದರಿ ಸ್ಥಿರಾಸ್ತಿಗಳನ್ನು ಷರತ್ತಿಗೊಳಪಟ್ಟು ತೀರ್ಪು ಪೂರ್ವ ಜಪ್ತಿ ಮಾಡಿಕೊಂಡಿರುವುದನ್ನು ಸ್ಥಿರೀಕರಣಗೊಳಿಸಿ, ಆದೇಶಿಸಲಾಗುವುದೆಂದು ಈ ಮೂಲಕ ಪ್ರತಿವಾದಿಗಳಿಗೆ ಆದೇಶಿಸಿದೆ. ಈ ಪ್ರಕರಣದ ಮುಂದಿನ ವಿಚಾರಣೆಯನ್ನು ದಿನಾಂಕ:18.09.2010 ರಂದು ಬೆಳಿಗ್ಗೆ 11–00 ಗಂಟೆಗೆ ನಿಗದಿಪಡಿಸಿದೆ.

ಈ ಆದೇಶವನ್ನು ಶೀಘ್ರಲಿಪಿಗಾರರಿಗೆ ಉಕ್ತಲೇಖನ ನೀಡಿ, ಸೂಕ್ತ ತಿದ್ದುಪಡಿ ಆದ ನಂತರ, ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ದಿನಾಂಕ:26.06.2010 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಿದೆ.

ಸಹಕಾರಿಗಳ ನಿಬಂಧಕರು,
ಕರ್ನಾಟಕ ರಾಜ್ಯ, ಬೆಂಗಳೂರು.

ಸಹಕಾರ ಸಂಘಗಳ ನಿಬಂಧಕರು (ಕರ್ನಾಟಕ ರಾಜ್ಯ, ಬೆಂಗಳೂರು) ಇವರ ನ್ಯಾಯಾಲಯ, ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಅಲಿ–ಆಸ್ಕರ್ ರಸ್ತೆ, ಬೆಂಗಳೂರು–52

ದಾವೆ ಸಂಖ್ಯೆ: ಆರ್‌ಸಿಎಸ್/ ಡಿಐಎಸ್/ ಡಿ4/ ಸೌ/ 2/2010–11

ಅನುಬಂಧ

ಶ್ರೀ ಅರವಿಂದ ಫಕ್ಕೀರಪ್ಪ ದೊಡ್ಡಮನಿ, ಇವರಿಗೆ ಸೇರಿದ, ಪರತ್ತಿಗೊಳಪಟ್ಟು, ತೀರ್ಪು ಪೂರ್ವ ಜಪ್ತಿ ನೋಟೀಸ್ ಆದೇಶಕ್ಕೆ ಒಳಪಡಿಸಿದ ಸ್ಥಿರಾಸ್ತಿಗಳ ವಿವರಗಳು

ಹಾವೇರಿ ಜಿಲ್ಲೆ, ಹಾವೇರಿ ತಾಲ್ಲೂಕು, ಹಾವೇರಿ ಗ್ರಾಮದ ಸಿಟಿ ಸರ್ವೆ ನಂ.2814–ಎ ನಲ್ಲಿ 3–54–5–ಚೌ–ಮೀ. ಟೆನ್ನೂರು ಬಿ 683 ಚೌ–ಪೂ ಇದು ಪೂರಾ

ಚೆಕ್ಕುಬಂದಿ:

ಪೂರ್ವಕ್ಕೆ: ಸರಕಾರಿ ರಸ್ತೆ

ಪಶ್ಚಿಮಕ್ಕೆ: ರಾಜಶೇಖರ ಮುರಿಗೆಪ್ಪ ಕವಲುಗುಡ್ಡ ಇವರ ಆಸ್ತಿ

ಉತ್ತರಕ್ಕೆ: ಅಮೀಜಾನ ಮುಲ್ಲಾ ಇವರ ಆಸ್ತಿ

ದಕ್ಷಿಣಕ್ಕೆ: ಗಣೇಶಪ್ಪ ಅಂಗಡಿ ಇವರ ಆಸ್ತಿ

ಸಹಕಾರಿಗಳ ನಿಬಂಧಕರು,
ಕರ್ನಾಟಕ ರಾಜ್ಯ, ಬೆಂಗಳೂರು.

ಪಿ.ಆರ್.1397

ಸಹಕಾರ ಇಲಾಖೆ

ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1 ಅಲಿ–ಆಸ್ಕರ್ ರೋಡ್, ಬೆಂಗಳೂರು–560052

ನಂ.ಯುಬಿಸಿ–3/82/ಸಮಾಪನೆ/2010–11, ದಿನಾಂಕ:25.08.2010

ವಿಷಯ: ಬೆಳಗಾಂ ಕೆಥೋಲಿಕ್ ಕೋ–ಆಪರೇಟಿವ್ ಬ್ಯಾಂಕ್ ಲಿ., ಬೆಳಗಾಂ ಇದನ್ನು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 72ಎ ರನ್ವಯ ಸಮಾಪನೆಗೊಳಿಸುವ ಬಗ್ಗೆ.

ಉಲ್ಲೇಖ: 1) ಜನರಲ್ ಮ್ಯಾನೇಜರ್, ಆರ್.ಬಿ.ಐ. ಮುಂಬೈ ಇವರ ಪತ್ರ ಸಂಖ್ಯೆ: ಯುಬಿಡಿ:ಸಿಓ: ಬಿಎಸ್‌ಡಿ/ ಎನ್‌ಎಸ್‌ಬಿ/ 111/ 937/ 12.23.018/2010–11, ದಿನಾಂಕ:30.07.2010.

2) ಕಾರ್ಯನಿರ್ವಾಹಕ ನಿರ್ದೇಶಕರು, ಆರ್‌ಬಿಐ. ಮುಂಬೈ ಇವರ ಪತ್ರ ಸಂಖ್ಯೆ: ಯುಬಿಡಿ: ಸಿಓ: ಬಿಎಸ್‌ಡಿ/ 111/ ಎಲ್‌ಸಿಆರ್/62/12.23.018/ 2010–11 ದಿನಾಂಕ:27.07.2010.

ಪ್ರಸ್ತಾವನೆ:

ಬೆಳಗಾಂ ಕೆಥೋಲಿಕ್ ಕೋ–ಆಪರೇಟಿವ್ ಬ್ಯಾಂಕ್ ಲಿ., ಬೆಳಗಾಂ ಇದು ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ 1949ರ ಕಲಂ 11(1), 22(3)(ಎ), ಮತ್ತು 22(3)(ಬಿ) ಗಳನ್ನು ಪಾಲಿಸಲು ವಿಫಲವಾಗಿದ್ದು, ಠೇವಣಿದಾರರ ಹಿತಾಸಕ್ತಿಗೆ ವಿರುದ್ಧವಾಗಿ ಕೆಲಸ ನಿರ್ವಹಿಸುತ್ತಿದ್ದುದರಿಂದ ಬ್ಯಾಂಕಿಂಗ್ ವ್ಯವಹಾರ ನಡೆಸಲು ನೀಡಿದ್ದ ಪರವಾನಗಿಯನ್ನು ಭಾರತೀಯ ರಿಸರ್ವ್ ಬ್ಯಾಂಕ್ ರದ್ದುಗೊಳಿಸಿದೆ ಹಾಗೂ ಉಲ್ಲೇಖ (2)ರ ಪತ್ರದಲ್ಲಿ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 72ಎ ರಡಿ ಬ್ಯಾಂಕಿನ ಸಮಾಪನೆಗೆ ಆದೇಶಿಸುವಂತೆ ತಿಳಿಸಿರುವುದರ ಮೇರೆಗೆ ಈ ಕೆಳಕಂಡ ಆದೇಶ ಹೊರಡಿಸಿದೆ.

ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 72ಎ ರಡಿ ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಓ/201/ಸಿಎಲ್‌ಎಂ/2008 ದಿನಾಂಕ:27.05.2010ರಲ್ಲಿ ಸಹಕಾರ ಸಂಘಗಳ ಜಂಟಿ ನಿಬಂಧಕರು (ಪಟ್ಟಣ ಬ್ಯಾಂಕುಗಳ ವಿಭಾಗ), ಸಹಕಾರ ಸಂಘಗಳ ನಿಬಂಧಕರ ಕಛೇರಿ, ಬೆಂಗಳೂರು ಇವರಿಗೆ ದತ್ತವಾದ ಅಧಿಕಾರದನ್ವಯ ಬೆಳಗಾಂ ಕೆಥೋಲಿಕ್ ಕೋ–ಆಪರೇಟಿವ್ ಬ್ಯಾಂಕ್ ಲಿ., ಬೆಳಗಾಂ ಇದನ್ನು ಸಮಾಪನೆಗೊಳಿಸಿ ಕಲಂ 73(1)ರನ್ವಯ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಬೆಳಗಾಂ ಉಪವಿಭಾಗ, ಇವರನ್ನು ಸಮಾಪಕರನ್ನಾಗಿ ಹೆಚ್ಚುವರಿ ಪ್ರಭಾರದಲ್ಲಿ ನೇಮಿಸಲಾಗಿದೆ.

ಸಮಾಪಕರು ಕೂಡಲೇ ಬ್ಯಾಂಕಿನ ಪ್ರಭಾರ ವಹಿಸಿಕೊಂಡು ಈ ಕಛೇರಿಗೆ ವರದಿ ಮಾಡುವುದು ಮತ್ತು ಸಹಕಾರ ಸಂಘಗಳ ಕಾಯ್ದೆ, ನಿಯಮ ಮತ್ತು ಈ ಕಛೇರಿಯ ನಿರ್ದೇಶನ, ಸುತ್ತೋಲೆಗಳಿಗೆ ಅನುಸಾರವಾಗಿ ಬ್ಯಾಂಕಿನ ಆಸ್ತಿ–ಜವಾಬ್ದಾರಿಗಳ ವಿಲೇವಾರಿಗೆ ಕ್ರಮ ತೆಗೆದುಕೊಳ್ಳತಕ್ಕದ್ದು.

ಈ ಆದೇಶವನ್ನು ನನ್ನ ಸಹಿ ಹಾಗೂ ಕಛೇರಿ ಮೊಹರಿನೊಂದಿಗೆ ದಿನಾಂಕ:25.08.2010 ರಂದು ಹೊರಡಿಸಲಾಗಿದೆ.

ಎನ್. ರಾಜಣ್ಣ
ಸಹಕಾರ ಸಂಘಗಳ ಜಂಟಿ ನಿಬಂಧಕರು
(ಪಟ್ಟಣ ಬ್ಯಾಂಕುಗಳ ವಿಭಾಗ)

ಪಿ.ಆರ್.1331

ಕರ್ನಾಟಕ ಸಹಕಾರಿಗಳ ನಿಬಂಧಕರು, ಇವರ ನ್ಯಾಯಾಲಯ,
ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1 ಅಲಿ–ಆಸ್ಕರ್ ರಸ್ತೆ, ಬೆಂಗಳೂರು–52

ದಾವಾ ಸಂಖ್ಯೆ: RCS/ DIS/ D4/ SOU/ 1/ 2010-11

ಅರ್ಜಿದಾರರು:	ಪ್ರತಿವಾದಿ
ಪ್ರಧಾನ ವ್ಯವಸ್ಥಾಪಕರು, ನವಕರ್ನಾಟಕ ಸೌಹಾರ್ಧ ಕ್ರೆಡಿಟ್ ಕೋ–ಅಪರೇಟಿವ್ ಲಿ., ಹೊಸಪೇಟೆ, ಹಾವೇರಿ ಶಾಖೆ.	1) ಆನಂದ ಉದ್ದಪ್ಪ ಕಡಕೋಳ ವಯಸ್ಸು: 26 ವರ್ಷ, ಉದ್ಯೋಗ: ವ್ಯಾಪಾರ ಸಾ: ಶಿವಾಜಿನಗರ, 2ನೇ ಕ್ರಾಸ್, ಹಾವೇರಿ ತಾ: ವ ಜಿ: ಹಾವೇರಿ.

	2) ಶ್ರೀ ಶಬ್ಬೀರ ಅಹ್ಮದ ಗೌಸುಸಾಬ ಅತ್ತಾರ, ವಯಸ್ಸು: 30 ವರ್ಷ, ಉದ್ಯೋಗ: ವ್ಯಾಪಾರ ಸಾ: ಶಿವಾಜಿನಗರ, 3ನೇ ಕ್ರಾಸ್, ಹಾವೇರಿ ತಾ: ವ ಜಿ: ಹಾವೇರಿ.
	3) ಶ್ರೀ ಉದ್ದಪ್ಪ ಭೀಮಪ್ಪ ಕಡಕೋಳ ವಯಸ್ಸು: 54 ವರ್ಷ, ಉದ್ಯೋಗ: ವ್ಯಾಪಾರ ಸಾ: ಶಿವಾಜಿನಗರ, 2ನೇ ಕ್ರಾಸ್, ಹಾವೇರಿ ತಾ: ವ ಜಿ: ಹಾವೇರಿ.

ಕರ್ನಾಟಕ ಸೌಹಾರ್ಧ ಸಹಕಾರಿ ಕಾಯ್ದೆ 1997 ಕಲಂ 44(1) ರಡಿ ಷರತ್ತಿಗೊಳಪಟ್ಟ ತೀರ್ಪು ಪೂರ್ವ ಜಪ್ತಿ ಆದೇಶದ ನೋಟೀಸ್

ಮೇಲ್ಕಂಡ ಅರ್ಜಿದಾರರು ಈ ದಾವೆಯನ್ನು ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997ರ ಕಲಂ 39ರಡಿ ದಾಖಲಿಸಿ, ಪ್ರತಿವಾದಿಗಳಿಂದ ವಸೂಲಾಗಬೇಕಾದ ಸಾಲದ ಬಾಕಿ ಮೊತ್ತ ರೂ.26470–00 ವಸೂಲು ಮಾಡಲು ಡಿಕ್ರಿ ನೀಡಬೇಕೆಂದು ಕೋರಿರುತ್ತಾರೆ.

ಸದರಿ ಅರ್ಜಿಯೊಂದಿಗೆ ಅರ್ಜಿದಾರರು ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997ರ ಕಲಂ 44(1)ರಡಿ ಮಧ್ಯಂತರ ಅರ್ಜಿ ಸಲ್ಲಿಸಿ, 1ನೇ ಪ್ರತಿವಾದಿಗೆ ಸೇರಿದ ಸ್ಥಿರಾಸ್ತಿಗಳನ್ನು ಷರತ್ತುಗೊಳಪಟ್ಟು ತೀರ್ಪು ಪೂರ್ವ ಜಪ್ತಿ ಆದೇಶ ಮಾಡಲು ಕೋರಿರುತ್ತಾರೆ.

ಅರ್ಜಿದಾರರ ದಾವೆ ಅರ್ಜಿಯನ್ನು ಕಡತಕ್ಕೆ ತೆಗೆದುಕೊಂಡು ದಿನಾಂಕ:26.06.2010 ರಂದು ಪ್ರಕರಣದ ವಿಚಾರಣೆ ನಡೆಸಲಾಯಿತು. ಮಧ್ಯಂತರ ಅರ್ಜಿಯ ಬಗ್ಗೆ ಅರ್ಜಿದಾರರು ತಮ್ಮ ಕೋರಿಕೆ ಮಂಡಿಸಿರುತ್ತಾರೆ. ಹಾಗೂ ಅದಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ.

ಅರ್ಜಿದಾರರು ತಮ್ಮ ಕೋರಿಕೆಯಲ್ಲಿ 1ನೇ ಪ್ರತಿವಾದಿಯು ತಮ್ಮ ಸಂಸ್ಥೆಯಲ್ಲಿ ದಿನಾಂಕ:29.03.2003 ರಂದು ರೂ.25000/–ಗಳ ಸಾಲ ಪಡೆದಿದ್ದು ಈ ಸಾಲ ತೀರುವಳಿಯಾಗದೆ ಸುಸ್ತಿದಾರರಾಗಿರುತ್ತಾರೆಂದು ಈ ಸಾಲಕ್ಕೆ 2ನೇ ಹಾಗೂ 3ನೇ ಪ್ರತಿವಾದಿಗಳು ಜಾಮೀನುದಾರರೆಂದು, 1ನೇ ಪ್ರತಿವಾದಿಯ ತಮ್ಮ ಸ್ಥಿರಾಸ್ಥಿಯಾದ ಷೆಡ್ಯೂಲ್ ಸ್ವತ್ತನ್ನು ಈಗ ಪರಭಾರೆ ಮಾಡಲು ಉದ್ದೇಶಿಸಿದ್ದಾರೆಂದು ಇದನ್ನು ಅವರು ಪರಭಾರೆ ಮಾಡಿದಲ್ಲಿ ಈ ದಾವೆಯಲ್ಲಿ ಡಿಕ್ರಿ ನೀಡಿದರೂ ಸಾಲ ವಸೂಲಾಗದೆ ಹೋಗುವ ಸಂಭವವಿರುವುದರಿಂದ ತೀರ್ಪು ಪೂರ್ವ ಜಪ್ತಿ ಆದೇಶ ಹೊರಡಿಸಲು ಕೋರಿರುತ್ತಾರೆ.

4. ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ದಿನಾಂಕ: 25–05–2011 ರಂದು ಸಂಜೆ 3.00 ಗಂಟೆಯವರೆಗೆ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಸಂಶೋಧನೆ, ಬೆಂಗಳೂರು ಅಥವಾ ಅವರಿಂದ ನಿಯೋಜಿಸಲ್ಪಟ್ಟ ಅಧಿಕಾರಿಗಳು ಸ್ವೀಕರಿಸುವರು ಮತ್ತು ಮೇಲ್ಕಂಡ ದಿನಾಂಕದಂದು ಕಾರಣಾಂತರದಿಂದ ಟೆಂಡರ್ ನಡೆಯದಿದ್ದರೆ ಇದೇ ಪ್ರಕಟಣೆಯ ಷರತ್ತಿಗೆ ಒಳಪಟ್ಟು ಪುನಃ ದಿನಾಂಕ: 27–05–2011 ಸಂಜೆ 3.00 ಗಂಟೆಗೆ ಎರಡನೇ ಬಾರಿಗೆ ನೋಂದಾಯಿತ ಇಚ್ಛೆಯುಳ್ಳ ಅರಣ್ಯ ಗುತ್ತಿಗೆದಾರರಿಂದ ಭರ್ತಿ ಮಾಡಿ ಸಲ್ಲಿಸುವ ಟೆಂಡರ್‌ಗಳನ್ನು ಸ್ವೀಕೃತಿ ಮಾಡಲಾಗುವುದು. ಈ ಬಗ್ಗೆ ಮತ್ತೆ ಪ್ರತ್ಯೇಕವಾದ ಪ್ರಕಟಣೆ ಹೊರಡಿಸುವುದಿಲ್ಲ.
5. ತಪ್ಶೀಲಿನಲ್ಲಿ ಕಾಣಿಸಿರುವ ಫಸಲನ್ನು ದಿನಾಂಕ: 31–08–2013 ರವರೆಗೆ ಸಂಗ್ರಹಿಸುವ ಹಕ್ಕನ್ನು ಗುತ್ತಿಗೆದಾರರು ಪಡೆದಿರುತ್ತಾರೆ.
6. ಹಿಂದಿನ ಹರಾಜಿನಲ್ಲಿ ಅಥವಾ ಟೆಂಡರ್‌ನಲ್ಲಿ ವಿಜೇತರಾಗಿ ಪಡೆದ ಫಸಲಿನ ಬಾಬ್ತು ಬಾಕಿ ಹೊಂದಿರುವ ಅರಣ್ಯ ಗುತ್ತಿಗೆದಾರರು ಟೆಂಡರ್ / ಹರಾಜಿನಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ.
7. ಗೋಡಂಬಿ ಮತ್ತು ನೇರಳೆ ಮರಗಳಲ್ಲಿ ಕಸಿ ಮರಗಳೂ ಸೇರಿರುತ್ತವೆ. ಮರಗಳ ಸಂಖ್ಯೆಯನ್ನು ಮೇಲೆ ನಮೂದಿಸಿದ್ದು, ಸದರಿ ಮರಗಳಲ್ಲಿ ಫಸಲು ಬಿಡುವ ಮರಗಳ ಸಂಖ್ಯೆ ಹೆಚ್ಚು ಅಥವಾ ಕಡಿಮೆಯಾಗುವ ಸಾಧ್ಯತೆಯಿರುತ್ತದೆ. ಇದಕ್ಕೆ ಇಲಾಖೆಗೆ ಯಾವುದೇ ರೀತಿ ಜವಾಬ್ದಾರಿಯಿರುವುದಿಲ್ಲ.
8. ದಿನಾಂಕ: 25–05–2011 ಮತ್ತು 27–05–2011 ರಂದು ಮಧ್ಯಾಹ್ನ 3.00 ಗಂಟೆಯವರೆಗೆ ಟೆಂಡರ್ ಫಾರಂಗಳನ್ನು ಈ ಕಚೇರಿಯಲ್ಲಿ ಪ್ರತ್ಯೇಕವಾಗಿ ನಿಗಧಿಪಡಿಸಿದ ಟೆಂಡರ್ ಪೆಟ್ಟಿಗೆಯಲ್ಲಿ ಹಾಕತಕ್ಕದ್ದು. ಹಾಗೂ ಅದೇ ದಿನ ಮಧ್ಯಾಹ್ನ 3.30 ಗಂಟೆಯ ನಂತರ ಟೆಂಡರ್ ಫಾರಂಗಳನ್ನು ಹರಾಜು ಮುಗಿದ ಕೂಡಲೇ ತೆಗೆಯಲಾಗುವುದು.
9. ಇಲಾಖಾ ಉಪಯೋಗಕ್ಕೆ ಅಂದರೆ ಸಂಶೋಧನಾ ಚಟುವಟಿಕೆಗಳಿಗೆ ಬೇಕಾಗಿರುವ ಕ್ಲೋನಲ್ ಆರ್ಚರ್ಡ್ಸ್ ಮತ್ತು ಸೀಡ್ಲಿಂಗ್ ಸೀಡ್ ಆರ್ಚರ್ಡ್ಸ್‌ಗಳಲ್ಲಿ ಸಂಗ್ರಹಿಸಿದ ಹಣ್ಣು ಮತ್ತು ಬೀಜಗಳನ್ನು ಇಲಾಖಾ ಸಿಬ್ಬಂದಿಯ ಉಸ್ತುವಾರಿಯಲ್ಲಿ ಸಂಗ್ರಹಿಸಿ ಇಲಾಖೆಗೆ ಕೊಡತಕ್ಕದ್ದು. ನಲ್ಲಾಳ–ಎ1 ರಲ್ಲಿ ನೇರಳೆ ಹಣ್ಣಿನ 50 ಬೀಜೋತ್ಪಾದನ ಮರಗಳಿದ್ದು ಈ ಮರಗಳಿಂದ ಹಣ್ಣುಗಳನ್ನು ಇಲಾಖೆ ಸಂಗ್ರಹಿಸುತ್ತದೆ, ಈ ಮರಗಳನ್ನು ಟೆಂಡರ್‌ನಿಂದ ಹೊರತುಪಡಿಸಲಾಗಿದೆ. ನಲ್ಲಾಳ–ಎ2 ನಲ್ಲಿ 30 ಮರಗಳು ಮತ್ತು ನಲ್ಲಾಳ–ಸಿ ನಲ್ಲಿ 20 ಗೋಡಂಬಿ ಬೀಜೋತ್ಪಾದನ ಮರಗಳಿದ್ದು ಈ ಮರಗಳಿಂದ ಹಣ್ಣುಗಳನ್ನು ಇಲಾಖೆ ಸಂಗ್ರಹಿಸುತ್ತದೆ, ಈ ಮರಗಳನ್ನು ಟೆಂಡರ್‌ನಿಂದ ಹೊರತುಪಡಿಸಲಾಗಿದೆ
10. ಯಶಸ್ವಿ ಬಿಡ್ / ಟೆಂಡರ್‌ದಾರರು ಹರಾಜು ಮುಗಿದ ಕೂಡಲೇ ಹರಾಜು / ಟೆಂಡರ್ ಪೂರ್ಣ ಹಣದೊಂದಿಗೆ ಚಾಲ್ತಿಯಲ್ಲಿರುವ ತೆರಿಗೆಗಳನ್ನು ಪೂರ್ಣವಾಗಿ ಪಾವತಿಸತಕ್ಕದ್ದು. ತಪ್ಪಿದಲ್ಲಿ ಅಂತಹವರ ಇ.ಎಂ.ಡಿ. ಹಣವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಹರಾಜು / ಟೆಂಡರ್ ನಿಯಮದಂತೆ ಕ್ರಮ ತೆಗೆದುಕೊಳ್ಳಲಾಗುವುದು.
11. ಮೇಲ್ಕಂಡ ಟೆಂಡರ್ / ಹರಾಜಿನಲ್ಲಿ ಭಾಗವಹಿಸುವ ಮುನ್ನ ಅರಣ್ಯ ಗುತ್ತಿಗೆದಾರರು ಆಯಾಯಾ ಸಂಶೋಧನಾ ವಲಯ ಅರಣ್ಯಾಧಿಕಾರಿಯವರನ್ನು ಸಂಪರ್ಕಿಸಿ, ನೋಡಲು ಅನುಮತಿ ಪಡೆದು ಸಂಶೋಧನಾ ಕೇಂದ್ರ ಪ್ರದೇಶದಲ್ಲಿರುವ ಫಸಲುಗಳನ್ನು ಪರಿಶೀಲಿಸಿಕೊಳ್ಳಬಹುದು.
12. ಪ್ರತಿ ಸಂಶೋಧನಾ ವಲಯಕ್ಕೆ ಬೇರೆ ಬೇರೆ ಟೆಂಡರ್ ಫಾರಂನ್ನು ನಿಗಧಿತ ಇ.ಎಂ.ಡಿ ಯೊಂದಿಗೆ ಲಗತ್ತಿಸಿ ಸಲ್ಲಿಸಬೇಕು.
13. ಗುತ್ತಿಗೆದಾರರು ಷರತ್ತುಗಳನ್ನೊಳಗೊಂಡ ಟೆಂಡರ್‌ಗಳನ್ನು ಸಲ್ಲಿಸಿದಲ್ಲಿ ಅವುಗಳನ್ನು ತಿರಸ್ಕರಿಸಲಾಗುವುದು ಮತ್ತು ಇದರ ಬಗ್ಗೆ ಏನಾದರೂ ತಕರಾರುಗಳು ಉದ್ಭವವಾದಲ್ಲಿ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಸಂಶೋಧನೆ, ಬೆಂಗಳೂರು ರವರ ತೀರ್ಮಾನವೇ ಅಂತಿಮವಾಗಿರುತ್ತದೆ.
14. ನಿಗಧಿಪಡಿಸಿದ ಅವಧಿಯ ನಂತರ ಬಂದ ಟೆಂಡರ್‌ಗಳನ್ನು ಸ್ವೀಕರಿಸುವುದಿಲ್ಲ.
15. ಯಾವುದೇ ಕಾರಣಗಳನ್ನು ನೀಡದೇ ಟೆಂಡರ್‌ಗಳನ್ನು ಒಪ್ಪುವ ಹಾಗೂ ತಿರಸ್ಕರಿಸುವ ಹಕ್ಕನ್ನು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಸಂಶೋಧನೆ, ಬೆಂಗಳೂರು ಇವರು ಕಾಯ್ದಿರಿಸಿಕೊಂಡಿರುತ್ತಾರೆ.
16. ಫಸಲನ್ನು ಸಂಗ್ರಹಿಸುವಾಗ ಇತರೆ ನೆಡುತೋಪುಗಳು / ಸಂಶೋಧನಾ ಪ್ಲಾಟುಗಳನ್ನು ಹಾಳು ಮಾಡಿದ್ದಲ್ಲಿ, ಗಿಡ, ಮರಗಳನ್ನು ಕಡಿದು ನಾಶಪಡಿಸಿದ್ದಲ್ಲಿ ಸರ್ಕಾರಕ್ಕೆ ಆದ ನಷ್ಟವನ್ನು ಸಂಬಂಧಪಟ್ಟ ಗುತ್ತಿಗೆದಾರರಿಂದ ವಸೂಲು ಮಾಡಲಾಗುವುದು.
17. ಯಾವುದೇ ವಿಭಾಗದಲ್ಲಿ ಗುತ್ತಿಗೆದಾರರು ಡೀಫಾಲ್ಟರ್ ಆಗಿದ್ದರೆ ಅಂತಹವರು ಟೆಂಡರ್‌ನಲ್ಲಿ ಭಾಗವಹಿಸಲು ಅರ್ಹರಾಗಿರುವುದಿಲ್ಲ.
18. ಟೆಂಡರ್ / ಹರಾಜಿನಲ್ಲಿ ಸಫಲರಾದ ಗುತ್ತಿಗೆದಾರರು ಸೂರ್ಯೋದಯದ ನಂತರ ಮತ್ತು ಸೂರ್ಯಾಸ್ತಮದ ಮೊದಲು ಫಸಲನ್ನು ಸಂಗ್ರಹಿಸಬೇಕು.

19. ಅರಣ್ಯ ಗುತ್ತಿಗೆದಾರರಾಗಿ ನೋಂದಾಯಿಸಲು ಟೆಂಡರ್ ನಡೆಯುವ ಹಿಂದಿನ ದಿನ ಅಥವಾ ಟೆಂಡರ್ ದಿನ ಅರ್ಜಿ ಸಲ್ಲಿಸಿದ್ದಲ್ಲಿ ಅರಣ್ಯ ಗುತ್ತಿಗೆದಾರರಾಗಿ ನೋಂದಾವಣೆಯಾಗದೇ ಈ ಟೆಂಡರ್ / ಹರಾಜಿನಲ್ಲಿ ಭಾಗವಹಿಸಲು ಅರ್ಹರಿರುವುದಿಲ್ಲ.
20. ಯಾವುದೇ ಇ.ಎಂ.ಡಿ ಯನ್ನು ಟೆಂಡರ್‌ನಲ್ಲಿ ಹಾಕದೆ ಟೆಂಡರ್ ಹಾಕಿ ಹರಾಜಿನಲ್ಲಿ ಭಾಗವಹಿಸಿ ಇ.ಎಂ.ಡಿ ಪಾವತಿ ಮಾಡಿದ್ದು, ಟೆಂಡರ್‌ನ ಹೆಚ್ಚಿನ ಬೆಲೆ ನಮೂದಿಸಿದಲ್ಲಿ ಅಂತಹ ಗುತ್ತಿಗೆದಾರರ ಹರಾಜಿನ ಇ.ಎಂ.ಡಿ ಯನ್ನು ಪರಿಗಣಿಸಿ ಹೆಚ್ಚಿನ ಬೆಲೆ ಬಂದಿರುವ ಟೆಂಡರ್‌ನ ಅಂಗೀಕರಿಸಲಾಗುವುದು.
21. ಇಲಾಖೆಗೆ ಬೇಕಾದ ಬೀಜಗಳನ್ನು ನೀಡಲು ಗುತ್ತಿಗೆದಾರರಿಗೆ ಇಲಾಖೆಯು ಸೂಚಿಸಿದಾಗ ಅಷ್ಟು ಬೀಜಗಳನ್ನು ಇಲಾಖೆಯ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ಕಾಲಕಾಲಕ್ಕೆ ನಿಗಧಿಪಡಿಸಿದ ದರಕ್ಕೆ ಇಲಾಖೆಗೆ ಒದಗಿಸಬೇಕಾಗಿರುತ್ತದೆ.

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ,
ಸಂಶೋಧನೆ, ಬೆಂಗಳೂರು.

ಪಿ.ಆರ್.186

ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮ ನಿಯಮಿತ, (ಕರ್ನಾಟಕ ರಾಜ್ಯ ಸರ್ಕಾರದ ಒಂದು ಸಂಸ್ಥೆ)

ಹೊನ್ನಾಳಿ ರಸ್ತೆ, ಶಿವಮೊಗ್ಗ–577201

ಸಂಕ್ಷಿಪ್ತ ಟೆಂಡರ್ ಕಂ ಬಹಿರಂಗ ಹರಾಜು ಪ್ರಕಟಣೆ

ಸಂಖ್ಯೆ: ಕರಾಅಕೈನಿ/ಶಿವ/ಸಾಮಿಲ್/11–12, ದಿನಾಂಕ:18.04.2011

ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮ ನಿಯಮಿತ, ಸಾಮಿಲ್ ಘಟಕ, ಹೊನ್ನಾಳಿ ರಸ್ತೆ, ಶಿವಮೊಗ್ಗ ಆವರಣದಲ್ಲಿರುವ ಹಳೆಯ ಯಂತ್ರೋಪಕರಣಗಳು ಹಾಗೂ ಅನುಪಯುಕ್ತ ವಸ್ತುಗಳನ್ನು ದಿನಾಂಕ: 25.05.2011ರಂದು ಟೆಂಡರ್ ಕಂ ಬಹಿರಂಗ ಹರಾಜು ಮೂಲಕ ವಿಲೆ ಮಾಡಲಾಗುವುದು. ಖರೀದಿಸಲಿಚ್ಛಿಸುವವರು ಆ ದಿನ ಭಾಗವಹಿಸಿ ದರಗಳನ್ನು ಸೂಚಿಸಬಹುದಾಗಿರುತ್ತದೆ. ಹೆಚ್ಚಿನ ವಿವರಗಳನ್ನು ಕೆಲಸದ ದಿನಗಳಂದು ಪ್ರಾದೇಶಿಕ ವ್ಯವಸ್ಥಾಪಕರು ಕೆ.ಎಸ್.ಎಫ್.ಐ.ಸಿ. ಲಿ., ಹೊನ್ನಾಳಿ ರಸ್ತೆ, ಶಿವಮೊಗ್ಗ ರವರ ಕಛೇರಿಗೆ ಸಂಪರ್ಕಿಸಿ ಪಡೆದುಕೊಳ್ಳುವುದು.

ಇ.ಎಂ.ಡಿ.: 1) ₹ 35000=00 ಹಳೆಯ ಯಂತ್ರೋಪಕರಣಗಳು ಮತ್ತು ಅನುಪಯುಕ್ತ ವಸ್ತುಗಳಿಗೆ.

2) ₹ 5000=00 ಅನುಪಯುಕ್ತ ವಸ್ತುಗಳಿಗೆ ಮಾತ್ರ.

ಉಪ ಅರಣ್ಯ ಸಂರಕ್ಷಣಾಧಿಕಾರಿಗಳು
ಹಾಗೂ ಪ್ರಾದೇಶಿಕ ವ್ಯವಸ್ಥಾಪಕರು,
ಕೆ.ಎಸ್.ಎಫ್.ಐ.ಸಿ. ಶಿವಮೊಗ್ಗ.

THE KARNATAKA STATE FOREST INDUSTRIES CORPORATION LTD.,

(GOVERNMENT OF KARNATAKA UNDERTAKING) HONNALI ROAD, SHIMOGA-577201

No.KSFIC/SMG/Tender-cum. auction/11-12, Dated:18.04.2011

BRIEF TENDER-CUM-AUCTION SALE NOTIFICATION

It is hereby notified for the information of general public that old machineries and un-serviceable materials are kept for disposal through Tender-cum-Auction Sale on 25.05.2011 in KSFIC premises, Honnali Road, Shimoga.

For further information, please contact the office of the Regional Manager, KSFIC Ltd., Honnali Road, Shimoga on all working days during office hours.

E.M.D. Rs.35,000.00 for old machineries & un-serviceable articles.

E.M.D. Rs.5,000.00 for un-serviceable articles only.

PD-54

Deputy Conservator of Forests &
Regional Manager, KSFIC Ltd.,
Shimoga.

ಪೌರಾಡಳಿತ ನಿರ್ದೇಶನಾಲಯ

9ನೇ ಮಹಡಿ, ವಿಶ್ವೇಶ್ವರಯ್ಯ ಕೇಂದ್ರ, ಡಾ: ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು–1 ದಿನಾಂಕ:25.03.2011

ಈ ಕಛೇರಿಯ ಅಧಿಸೂಚನೆ ಸಂಖ್ಯೆ: DMA/ADM/EST/CR37/2008-09 ದಿನಾಂಕ:24.09.2009ನ್ನು ಮುಂದುವರೆಸುತ್ತಾ 1 ಪ್ರಥಮ ದರ್ಜೆ ಕಂದಾಯ ನಿರೀಕ್ಷಕರ ಹುದ್ದೆಗೆ ನಾಲ್ಕನೇ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಕರ್ನಾಟಕ ನಾಗರೀಕ ಸೇವಾ (ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ನೇರನೇಮಕಾತಿ) (ಸಾಮಾನ್ಯ) ನಿಯಮಗಳು 2001ರಡಿ ಕಾಲಕಾಲಕ್ಕೆ ತಿದ್ದುಪಡಿ ಹೊಂದಿರುವ ನಿಯಮಗಳ ಆಧಾರಗಳ ಮೇಲೆ ಸಿದ್ದಪಡಿಸಿ ಸಮಸಂಖ್ಯೆ ಅಧಿಸೂಚನೆಯನ್ನು ದಿನಾಂಕ:03.03.2011ರಲ್ಲಿ ಪ್ರಕಟಿಸಿ ಆಕ್ಷೇಪಣೆಗಳನ್ನು ಆಹ್ವಾನಿಸಿದ್ದು, ಪ್ರಕಟಣೆ ನೀಡಿದ 15 ದಿನಗಳ ಒಳಗೆ ಆಕ್ಷೇಪಣೆಗಳನ್ನು ಸಲ್ಲಿಸಲು ತಿಳಿಸಲಾಗಿತ್ತು. ಸ್ವೀಕೃತಗೊಂಡ ಆಕ್ಷೇಪಣೆಗಳನ್ನು ಪರಿಗಣಿಸಿದ್ದು ಅಂತಿಮವಾಗಿ 1 ಅಭ್ಯರ್ಥಿಯ ಅಂತಿಮ ಆಯ್ಕೆ ಪಟ್ಟಿಯನ್ನು ಸದರಿ ನಿಯಮ 6ರಡಿ ತಯಾರಿಸಿ ಅಭ್ಯರ್ಥಿಯ ಮಾಹಿತಿಗಾಗಿ ಪ್ರಕಟಿಸಲಾಗಿದೆ.

ನೇಮಕಾತಿ ಪ್ರಾಧಿಕಾರ : ಆಯುಕ್ತರು

ಇಲಾಖೆಯ ಹೆಸರು: ಪೌರಾಡಳಿತ ನಿರ್ದೇಶನಾಲಯ

ಕ್ರ ಸಂ.	ಅಭ್ಯರ್ಥಿಯ ಹೆಸರು	ರೋಲ್ ಸಂಖ್ಯೆ	ಜನ್ಮ ದಿನಾಂಕ	ಪ್ರವರ್ಗ ಹಂಚಿಕೆ	ಪಡೆದ ಅಂಕಗಳು
1.	ಶ್ರೀನಿವಾಸಮೂರ್ತಿ ಎಂ.	ಎಸಿ371	08.06.1978	ಪ.ಜಾ.ಮ.ಯೋ(ಪ.ಜಾ–ಇತರೆ ಪರಿವರ್ತಿಸಲಾಗಿದೆ) ಪ.ಜಾ.	178

ಆಯುಕ್ತರು,
ಪೌರಾಡಳಿತ ನಿರ್ದೇಶನಾಲಯ,
ನಗರಾಭಿವೃದ್ಧಿ ಇಲಾಖೆ
ಕರ್ನಾಟಕ ಸರ್ಕಾರ, ಬೆಂಗಳೂರು.

DIRECTORATE OF MUNICIPAL ADMINISTRATION

9th floor, Visveswaraiah Towers, Dr. B.R. Ambedkar Veedhi, Bangalore-560001, Dated:25.03.2011

In pursuance of this office notification No.DMA/ADM/EST/CR:37/08-09, Dated:24.09.2009, the Fourth provisional select list of candidates for 1 Post Of FGRI for urban Local Bodies of Directorate of Municipal Administration, prepared on the basis of Karnataka Civil Services (Direct Recruitment by Competitive Examinations) (General) Rules, 2001 as amended from time to time, was published vide Notification of even number Dated:03.03.2011 inviting Objections, if any, from Candidates likely to be affected within 15 days of its publication. The Objections received have been considered and the Final Select List of the Candidate is prepared under Rule (6) of the said rules and is hereby published for the information of the candidates.

Appointing Authority: COMMISSIONER

Name of the Department: Directorate of Municipal Administration

Sl. No.	Name of Candidate	Roll No.	Date of Birth	Category allocation	Marks
1.	SRINIVASA MURTHY M.	AC371	08-Jun-78	SC-EXM (conv. To SC-OTH)/ SC	178

Commissioner
Directorate of Municipal Administration
Department of Urban Development Government
of Karnataka, Bangalore.

ಪೌರಾಡಳಿತ ನಿರ್ದೇಶನಾಲಯ

9ನೇ ಮಹಡಿ, ವಿಶ್ವೇಶ್ವರಯ್ಯ ಕೇಂದ್ರ, ಡಾ॥ ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು–1 ದಿನಾಂಕ:25.03.2011

ಈ ಕಛೇರಿಯ ಅಧಿಸೂಚನೆ ಸಂಖ್ಯೆ: DMA/ADM/EST/CR37/2008-09 ದಿನಾಂಕ:24.09.2009ನ್ನು ಮುಂದುವರೆಸುತ್ತಾ 12 ಪ್ರಥಮ ದರ್ಜೆ ಕಂದಾಯ ಸಹಾಯಕರ ಹುದ್ದೆಗಳಿಗೆ ಮೂರನೇ ತಾತ್ಕಾಲಿಕ ಆಯ್ಕೆಪಟ್ಟಿಯನ್ನು ಕರ್ನಾಟಕ ನಾಗರೀಕ ಸೇವಾ (ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ನೇರನೇಮಕಾತಿ) (ಸಾಮಾನ್ಯ) ನಿಯಮಗಳು 2001ರಡಿ ಕಾಲಕಾಲಕ್ಕೆ ತಿದ್ದುಪಡಿ ಹೊಂದಿರುವ ನಿಯಮಗಳ ಆಧಾರಗಳ ಮೇಲೆ ಸಿದ್ದಪಡಿಸಿ ಸಮಸಂಖ್ಯೆ ಅಧಿಸೂಚನೆಯನ್ನು ದಿನಾಂಕ:17.02.2011ರಲ್ಲಿ ಪ್ರಕಟಿಸಿ ಆಕ್ಷೇಪಣೆಗಳನ್ನು ಆಹ್ವಾನಿಸಿದ್ದು, ಪ್ರಕಟಣೆ ನೀಡಿದ 15 ದಿನಗಳ ಒಳಗೆ ಆಕ್ಷೇಪಣೆಗಳನ್ನು ಸಲ್ಲಿಸಲು ತಿಳಿಸಲಾಗಿತ್ತು. ಸ್ವೀಕೃತಗೊಂಡ ಆಕ್ಷೇಪಣೆಗಳನ್ನು ಪರಿಗಣಿಸಿದ್ದು ಅಂತಿಮವಾಗಿ 8 ಅಭ್ಯರ್ಥಿಗಳ ಅಂತಿಮ ಆಯ್ಕೆ ಪಟ್ಟಿಯನ್ನು ಸದರಿ ನಿಯಮ 6ರಡಿ ತಯಾರಿಸಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಲಾಗಿದೆ.

ನೇಮಕಾತಿ ಪ್ರಾಧಿಕಾರ : ಆಯುಕ್ತರು

ಇಲಾಖೆಯ ಹೆಸರು: ಪೌರಾಡಳಿತ ನಿರ್ದೇಶನಾಲಯ

ಕ್ರ ಸಂ.	ಅಭ್ಯರ್ಥಿಯ ಹೆಸರು	ರೋಲ್ ಸಂಖ್ಯೆ	ಜನ್ಮ ದಿನಾಂಕ	ಪ್ರವರ್ಗ ಹಂಚಿಕೆ	ಪಡೆದ ಅಂಕಗಳು
1.	ಚಂದ್ರಶೇಖರ್ ಆರ್.ಜಿ.	ಎಕ್ಸ್‌ಡಿ431	24.10.1980	ಸಾ.ಅ–ಇತರೆ/ಸಾ.ಅ.–ಕ.ಮಾ.ಅ.	184
2.	ಈರಪ್ಪ ಶೇಖಪ್ಪ ಕೊಡ್ಲಿ	ಎನ್‌ಇ088	0[illegible].05.1977	ಸಾ.ಅ.–ಗ್ರಾ.ಅ./3ಬಿ.–ಗ್ರಾ.ಅ.–ಕ.ಮಾ.ಅ.	182
3.	ಮಾಬುಸಾಬ ನದಾಫ್	ಎನ್‌ಡಿ447	15.08.1978	ವರ್ಗ–1 ಗ್ರಾ.ಅ./ವರ್ಗ–1 ಗ್ರಾ.ಅ.–ಕ.ಮಾ.ಅ.	179

ಕ್ರ. ಸಂ.	ಅಭ್ಯರ್ಥಿಯ ಹೆಸರು	ರೋಲ್ ಸಂಖ್ಯೆ	ಜನ್ಮ ದಿನಾಂಕ	ಪ್ರವರ್ಗ ಹಂಚಿಕೆ	ಪಡೆದ ಅಂಕಗಳು
4.	ಶ್ರೀಧರ ಎಲ್.ಸಿ.	ಸಿಸಿ389	07.04.1983	ಪ.ಜಾ–ಕ.ಮಾ.ಅ./ಪ.ಜಾ–ಗ್ರಾ.ಅ.–ಕ.ಮಾ.ಅ.	178
5.	ಸುನಿಲ್ ಟಿ.ಎಸ್.	ಎಕ್ಸ್ಎ267	13.08.1979	ಪ.ಜಾ–ಮ.ಯೋ(ಪ.ಜಾ– ಇತರೆ ಪರಿವರ್ತಿಸಲಾಗಿದೆ) ಪ.ಜಾ.	178
6.	ಮುಜಾಹಿದ್‌ಪಾಶಾ ಎಮ್.ಜಿ.	ಯುಎಫ್121	26.03.1984	2ಬಿ–ಗ್ರಾ.ಅ./2ಬಿ–ಗ್ರಾ.ಅ.ಕ.ಮಾ.ಅ.	176
7.	ಮೊಹನಕುಮಾರಿ ಎ.ಬಿ.	ಸಿಎಲ್034	10.05.1982	ಸಾ.ಅ.–ಮ.ಅ./3ಎ–ಮ.ಅ.–ಗ್ರಾ.ಅ.–ಕ.ಮಾ.ಅ.	170
8.	ಬಸವರಾಜ ಹೂಗಾರ	ಎನ್‌ಸಿ493	01.06.1969	ಸಾ.ಅ.–ಮಾ.ಯೋ/3ಬಿ–ಮಾ.ಯೋ–ಕ.ಮಾ.ಅ.	143

ಆಯುಕ್ತರು,
ಪೌರಾಡಳಿತ ನಿರ್ದೇಶನಾಲಯ,
ನಗರಾಭಿವೃದ್ಧಿ ಇಲಾಖೆ
ಕರ್ನಾಟಕ ಸರ್ಕಾರ, ಬೆಂಗಳೂರು.

DIRECTORATE OF MUNICIPAL ADMINISTRATION

9th floor, Visveswaraiah Towers, Dr. B.R. Ambedkar Veedhi, Bangalore-560001, Dated:25.03.2011

In pursuance of this office notification No.DMA/ADM/EST/CR:37/08-09, Dated:24.09.2009, the Third provisional select list of candidates for 12 Posts of FDA for urban Local Bodies of Directorate of Municipal Administration, prepared on the basis of Karnataka Civil Services (Direct Recruitment by Competitive Examinations) (General) Rules, 2001 as amended from time to time, was published vide Notification of even number Dated:17.02.2011 inviting Objections, if any, from Candidates likely to be affected within 15 days of its publication. The Objections received have been considered and the Final Select List of 8 Candidates is prepared under Rule (6) of the said rules and is hereby published for the information of the candidates.

Appointing Authority: COMMISSIONER

Name of the Department: Directorate of Municipal Administration

Sl. No.	Name of Candidate	Roll No.	Date of Birth	Category allocation	Marks
1.	CHANDRASHEKHAR R.G.	XD431	24.10.1980	GM-OTH/GM-KMC	184
2.	IRAPPA SHEKHAPPA KODLI	NE088	01.05.1977	GM-RC-/IIIB-RC-KMC	182
3.	MABUSAB NADAF	ND447	15.08.1978	CAT1-RC/CAT1-RC-KMC	179
4.	SRIDHAR L.C.	CC389	07.04.1983	SC-KMC/SC-RC-KMC	178
5.	SUNIL T.S.	XA267	13.08.1979	SC-EXM(CONVERTED TO SC-OTH)/SC	178
6.	MUJAHID PASHA M.G.	UF121	26.03.1984	IIB-RC/IIB-RC-KMC	176
7.	MOHANAKUMARI A.B.	CL034	10.05.1982	GM-WC/IIIA-WC-RC-KMC	170
8.	BASAVARAJ HUGAR	NC493	01.06.1969	GM-EXM/IIIB-EXM-KMC	143

PR-181

Commissioner
Directorate of Municipal Administration
Department of Urban Development Government
of Karnataka, Bangalore.

IN THE COURT OF THE IV ADDL. CITY CIVIL JUDGE, MAYOHALL, BANGALORE-CCH-21

P & S.C. NO.25013/2011, HG:27.05.2011

PETITIONER:

Mrs. Lakshmamma @ Lakshmi 46 yrs W/o Late T.N. Shivalingaiah R/at No.567, 6th Cross, 'B' Block, B.D.A. Layout, Lingarajapuram Bangalore-84.

V/s

RESPONDENT: Nil

PUBLIC NOTICE

Notice is hereby given that a petition has been made to this Court Under Sec 372 of the Indian Succession Act, for grant of Succession Certificate to the estate of the deceased Sri T.N. Shivalingaiah @ Shivalinge Gowda Who died on 07.10.2010 at Bangalore.

Be it known that No caveat has been entered and the said petition is posted for hearing on 27.05.2011 at 11 'O clock. Any person's claiming to have any interest may come and participate in the proceedings before grant of Succession Certificate.

SCHEDULE

Amount lying in the Canara Bank Frazer Town Branch, Bangalore.

Given under my hand and the seal of the Court, this the 19th day of April 2011

By Order of the Court,
Asst. Registrar
City Civil Court Mayo Hall Unit, Bangalore.

PD-49

IN THE COURT OF THE IV ADDL. CITY CIVIL JUDGE, MAYOHALL, BANGALORE-CCH-21

P & S.C. NO.25014/2011, HG:27.05.2011

PETITIONER:

Mr. George Mathew 52 yrs S/o Mr. P.V. George R/at No.12, Cannaught road Queens Road Cross, Bangalore-52.

V/s

RESPONDENT: NIL

PUBLIC NOTICE

Notice is hereby given that a petition has been made to this Court Under Sec 372 of the Indian Succession Act, for grant of Succession Certificate in respect of amount of the deceased late Mr. Ajin Mathew Who died on 06.05.2010 at Bangalore.

Be it to known that No caveat has been entered and the said petition is posted for hearing on 27.05.2011 at 11 'O clock. Any person's claiming to have any interest may come and participate in the proceedings before grant of Succession Certificate to the petitioners.

SCHEDULE

Oriental Insurance Company Limited Rs.1,00,000/- Claim bearing No.421704/31/2011/000001.

Given under my hand and the seal of the Court, this the 19th day of April 2011

By Order of the Court,
Asst. Registrar
City Civil Court Mayo Hall Unit, Bangalore.

PD-51

IN THE COURT OF THE IV ADDL. CITY CIVIL JUDGE, MAYOHALL, BANGALORE-CCH-21

P & S.C. NO.25045/2010, HG:18.06.2011

PETITIONER:

Sri Achudan Chandrahasan S/o Sri Chandrahasan 72 yrs R/at No.15. (Old No.135, Vannarpet Main Road) Kashi Vishwanath Temple Road, Viveknagar Post, Bangalore-47.

V/s

RESPONDENT: NIL

PUBLIC NOTICE

Notice is hereby given that a petition has been made to this Court Under Sec 372 of the Indian Succession Act, for grant of Succession Certificate to the estate of the deceased Smt. C. Saraswathi Who died on 30.08.2010 at Bangalore.

Be it known that No caveat has been entered and the said petition is posted for hearing on 18.06.2011 at 11 'O clock. Any person's claiming to have any interest may come and participate in the proceedings before grant of Succession Certificate.

SCHEDULE

Saving Bank Account bearing No.0970101000951 with M/s Canara Bank, having its branch office at Viveknagar, Bangalore-47 and presently having a sum of Rs.9,78,596.05/-

Given under my hand and the seal of the Court, this the day of April-19th. 2011

By Order of the Court,
Asst. Registrar
City Civil Court Mayo Hall Unit, Bangalore.

PD-52

ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು–01

ಅಧಿಸೂಚನೆ

ಸಂಖ್ಯೆ: ಆರ್(3)06/2011–12/ಪಿಎಸ್‌ಸಿ, ದಿನಾಂಕ:28–04–2011

1. ಕರ್ನಾಟಕ ನಾಗರೀಕ ಸೇವೆಗಳು (ಶೀಘ್ರಲಿಪಿಗಾರರ ಮತ್ತು ಬೆರಳಚ್ಚುಗಾರರ ನೇಮಕಾತಿ) ನಿಯಮಾವಳಿಗಳು 1983 ಮತ್ತು ಅದಕ್ಕೆ ಕಾಲಕಾಲಕ್ಕೆ ಮಾಡಿರುವ ತಿದ್ದುಪಡಿಗಳನ್ವಯ ಈ ಕೆಳಕಂಡಂತೆ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿನ ಶೀಘ್ರಲಿಪಿಗಾರರ ಮತ್ತು ಬೆರಳಚ್ಚುಗಾರರ ಹುದ್ದೆಗಳನ್ನು ಭರ್ತಿಮಾಡಲು **ON-LINE** ಮೂಲಕ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ.

ಕ್ರಮ ಸಂಖ್ಯೆ	ಇಲಾಖೆಗಳ ಹೆಸರು	ಶೀಘ್ರಲಿಪಿಗಾರರ ಹುದ್ದೆಗಳ ಸಂಖ್ಯೆ	ಬೆರಳಚ್ಚುಗಾರರ ಹುದ್ದೆಗಳ ಸಂಖ್ಯೆ
1.	ಕರ್ನಾಟಕ ಸರ್ಕಾರದ ಸಚಿವಾಲಯ	50	150
2.	ಭಾಷಾಂತರ ನಿರ್ದೇಶನಾಲಯ	02	04
3.	ಸಾರಿಗೆ ಇಲಾಖೆ	08	30
4.	ಎನ್ ಸಿ ಸಿ	–	01
5.	ರಾಜ್ಯ ಲೆಕ್ಕ ಪತ್ರ ಇಲಾಖೆ	–	07
6.	ಆಯುಷ್ ಇಲಾಖೆ	02	–
7.	ಕರ್ನಾಟಕ ಮೇಲ್ಮನವಿ ಪ್ರಾಧಿಕಾರ	05	03
8.	ಪದವಿ ಪೂರ್ವ ಶಿಕ್ಷಣ ಇಲಾಖೆ	–	02
9.	ಗೃಹರಕ್ಷಕ ದಳ ಮತ್ತು ಪೌರ ರಕ್ಷಣಾ ಇಲಾಖೆ	–	12
10.	ಕರ್ನಾಟಕ ಗೃಹ ಮಂಡಳಿ	–	06
	ಒಟ್ಟು	**67**	**215**

ಅಭ್ಯರ್ಥಿಗಳು ಒಂದು ಹುದ್ದೆಗೆ ಒಂದೇ ಅರ್ಜಿ ಸಲ್ಲಿಸತಕ್ಕದ್ದು, ಒಂದಕ್ಕಿಂತ ಹೆಚ್ಚು ಅರ್ಜಿಗಳನ್ನು ಸಲ್ಲಿಸಿದ್ದಲ್ಲಿ, ಅಂತಹ ಅರ್ಜಿಗಳನ್ನು ಯಾವುದೇ ಮುನ್ಸೂಚನೆಯಿಲ್ಲದೇ ತಿರಸ್ಕರಿಸಲಾಗುವುದು.

ಅರ್ಜಿಗಳನ್ನು ಆನ್–ಲೈನ್ (On-line) (ಎಲೆಕ್ಟ್ರಾನಿಕ್ ಮಾರ್ಗ) ಮುಖಾಂತರ ಮಾತ್ರ ಸಲ್ಲಿಸತಕ್ಕದ್ದು, ಅರ್ಜಿಗಳನ್ನು ಖುದ್ದಾಗಿ ಅಥವಾ ಅಂಚೆ ಮೂಲಕ ಪ್ರತ್ಯೇಕವಾಗಿ ಸಲ್ಲಿಸಲು ಅವಕಾಶವಿರುವುದಿಲ್ಲ, ಇಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ಶುಲ್ಕ:–

ಸಾಮಾನ್ಯ ಅರ್ಹತೆ, ಪ್ರವರ್ಗ 2(ಎ), 2(ಬಿ), 3(ಎ), 3(ಬಿ) ಗೆ ಸೇರಿದ ಅಭ್ಯರ್ಥಿಗಳಿಗೆ	**ರೂ. 300/–**
ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ–1 ಮತ್ತು ಅಂಗವಿಕಲ ಹಾಗೂ ಮಾಜಿ ಸೈನಿಕ ಅಭ್ಯರ್ಥಿಗಳಿಗೆ	**ರೂ. 25/–**

1) ಅಭ್ಯರ್ಥಿಗಳು ಯಾವುದೇ ತಪ್ಪು ಮಾಹಿತಿಯನ್ನು ನೀಡದೇ ಅರ್ಜಿ ಭರ್ತಿ ಮಾಡಲು On-Line ನಲ್ಲಿ ನೀಡಿರುವ ಸೂಚನೆಗಳನ್ವಯ ಗಮನಿಸಿ ಭರ್ತಿ ಮಾಡತಕ್ಕದ್ದು.

2) ತಪ್ಪು ಮಾಹಿತಿಗಳನ್ನು ನೀಡಿ ಅರ್ಜಿ ಸಲ್ಲಿಸಿದಲ್ಲಿ ಅಂತಹವರ ವಿರುದ್ಧ ಆಯೋಗವು ಕಾನೂನಿನನ್ವಯ ಸೂಕ್ತ ಕ್ರಮಕೈಗೊಳ್ಳುವುದು.

2.1 ಈ ಕೆಳಗೆ ನಿಗದಿಪಡಿಸಿದ ಯಾವುದಾದರು ಒಂದು ಮಾದರಿಯಲ್ಲಿ ಮಾತ್ರ ನಿಗದಿತ ಶುಲ್ಕವನ್ನು ಪಾವತಿಸತಕ್ಕದ್ದು. ಇವುಗಳನ್ನು ಹೊರತುಪಡಿಸಿ ಇತರೆ ಸಹಕಾರಿ ಬ್ಯಾಂಕ್/ಬ್ಯಾಂಕಿನ ಶಾಖೆಗಳಲ್ಲಿ ಶುಲ್ಕ ಸಂದಾಯ ಮಾಡಿದಲ್ಲಿ ಪರಿಗಣಿಸಲಾಗುವುದಿಲ್ಲ ಹಾಗೂ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

(ಅ) ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಗಳಲ್ಲಿ ಚಲನ್ ನೀಡಿ ಹಣ ಪಾವತಿಸಬಹುದು.

(ಆ) ಯಾವುದೇ ಎನ್.ಇ.ಎಫ್.ಟಿ (N.E.F.T) ಸೌಲಭ್ಯವುಳ್ಳ ಇತರೆ ಬ್ಯಾಂಕಿನ ಶಾಖೆಗಳಲ್ಲಿ (ಸಹಕಾರಿ ಬ್ಯಾಂಕ್‌ಗಳನ್ನು ಹೊರತುಪಡಿಸಿ) ಎನ್.ಇ.ಎಫ್.ಟಿ (N.E.F.T) ಚಲನ್ ನೀಡಿ ಹಣ ಪಾವತಿಸಬಹುದು.

* ಎನ್.ಇ.ಎಫ್.ಟಿ (N.E.F.T) ಅಂದರೆ ನ್ಯಾಷನಲ್ ಎಲೆಕ್ಟ್ರಾನಿಕ್ ಫಂಡ್ ಟ್ರಾನ್ಸಫರ್. ಈ ಸೌಲಭ್ಯವುಳ್ಳ ಯಾವುದೇ ಬ್ಯಾಂಕ್‌ನಿಂದ ಹಣವನ್ನು ಇತರೆ ಬ್ಯಾಂಕ್/ವ್ಯಕ್ತಿ/ಸಂಸ್ಥೆಗೆ ವರ್ಗಾಯಿಸಬಹುದು. ಆದ್ದರಿಂದ ಅಭ್ಯರ್ಥಿಗಳು ಅವರಿಗೆ ಅನುಕೂಲವಾಗುವಂತೆ ಯಾವುದೇ ಎನ್.ಇ.ಎಫ್.ಟಿ (N.E.F.T) ಸೌಲಭ್ಯವುಳ್ಳ ಬ್ಯಾಂಕ್‌ನಲ್ಲಿ (ಸಹಕಾರಿ ಬ್ಯಾಂಕ್‌ಗಳನ್ನು ಹೊರತುಪಡಿಸಿ) ಈ ಸಂಬಂಧ ಮುದ್ರಿತವಾಗುವ ಚಲನ್ ಅನ್ನು ಡೌನ್‌ಲೋಡ್ ಮಾಡಿಕೊಂಡು ಶುಲ್ಕವನ್ನು ಪಾವತಿಸಿ ಬ್ಯಾಂಕಿನವರು ನೀಡುವ ಚಲನ್ ಪ್ರತಿಯನ್ನು ಇಟ್ಟುಕೊಳ್ಳಬೇಕು. ಈ ಸೌಲಭ್ಯಕ್ಕಾಗಿ ಅಭ್ಯರ್ಥಿಯು ರೂ. 6/– ರ ಸೇವಾ ಶುಲ್ಕವನ್ನು ಪಾವತಿಸಬೇಕಾಗುತ್ತದೆ.

3. ಆನ್–ಲೈನ್ (On-line) ಮುಖಾಂತರ ಅರ್ಜಿ ಸಲ್ಲಿಸುವ ವಿಧಾನ: ಅಭ್ಯರ್ಥಿಗಳು ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸುವ ಮುನ್ನ ಅವರ ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು ಒಂದು ಬಿಳಿ ಹಾಳೆಯ ಮೇಲೆ ಅಂಟಿಸಿ ಅದರ ಕೆಳಗೆ ಅವರ ಸಹಿಯನ್ನು ಸ್ಕ್ಯಾನ್ ಮಾಡಿ UPLOAD ಮಾಡಲು ಸಿದ್ಧವಾಗಿಟ್ಟುಕೊಂಡಿರಬೇಕು.

ಅಭ್ಯರ್ಥಿಗಳು ಆಯೋಗದ ಅಧಿಕೃತ ವೆಬ್‌ಸೈಟ್ http://kpsc.kar.nic.in ನಲ್ಲಿ ಅರ್ಜಿ ಸಲ್ಲಿಸಲು ಬೇಕಾದ ಸೂಚನೆಗಳನ್ನು ವೀಕ್ಷಿಸಲು 'Instructions for ON LINE application for Stenographer/Typist ಎನ್ನುವ ಲಿಂಕನ್ನು ಕ್ಲಿಕ್ ಮಾಡಬೇಕು. ಅರ್ಜಿಯನ್ನು ಸಲ್ಲಿಸಲು 'Submit Fresh application' ಎನ್ನುವ ಲಿಂಕನ್ನು ಕ್ಲಿಕ್ ಮಾಡಬೇಕು. ಅರ್ಜಿಯಲ್ಲಿನ ವಿವರಗಳನ್ನು ಭರ್ತಿ ಮಾಡಿದ ನಂತರ 'Preview' ಬಟನ್ ಒತ್ತಿ ಅರ್ಜಿಯಲ್ಲಿ ನಮೂದಿಸಿರುವ ವಿವರಗಳನ್ನು ಮತ್ತೊಮ್ಮೆ ಕೂಲಂಕಷವಾಗಿ ನೋಡಿಕೊಳ್ಳಬೇಕು. ನಮೂದಿಸಿರುವ ವಿವರಗಳಲ್ಲಿ ಏನಾದರೂ ತಪ್ಪುಗಳಾಗಿದ್ದಲ್ಲಿ ಅದನ್ನು ಸರಿಪಡಿಸಲು edit ಮೇಲೆ ಕ್ಲಿಕ್ ಮಾಡಿ ನಂತರ ಅಗತ್ಯ ತಿದ್ದುಪಡಿಗಳನ್ನು ಮಾಡಬಹುದು. ಆನಂತರ ಅರ್ಜಿಯಲ್ಲಿ ಭರ್ತಿ ಮಾಡಿರುವ ಎಲ್ಲಾ ವಿವರಗಳು ಸರಿಯಾಗಿರುತ್ತವೆಯೆಂದು ಮನದಟ್ಟು ಮಾಡಿಕೊಂಡ ತರುವಾಯ, 'Submit' ಬಟನ್ ಅನ್ನು ಒತ್ತಬೇಕು. ಆ ನಂತರ ಪರದೆಯ ಮೇಲೆ ಮೂಡುವ Password ಮತ್ತು Application No. (ಅರ್ಜಿಯ ಸಂಖ್ಯೆ) ಅನ್ನು ಅಭ್ಯರ್ಥಿಯು ಗುರುತು ಹಾಕಿಕೊಳ್ಳತಕ್ಕದ್ದು. ಮುಂದೆ ಚಲನ್ ಮುದ್ರಿಸಲು ಮತ್ತು ಅರ್ಜಿಯ ಸ್ಥಿತಿಯನ್ನು ನೋಡಲು ಈ ಮಾಹಿತಿಗಳು ಅವಶ್ಯವಿರುತ್ತದೆ.

3.1 ಅರ್ಜಿಯ ಶುಲ್ಕವನ್ನು ಪಾವತಿಸಲು ಬೇಕಾದ ಬ್ಯಾಂಕ್ ಚಲನನ್ನು ಮುದ್ರಿಸಲು 'Generate Challan' ಎನ್ನುವ ಲಿಂಕನ್ನು ಕ್ಲಿಕ್ ಮಾಡಬೇಕು. ಶುಲ್ಕವನ್ನು 'Syndicate Bank' ಶಾಖೆಗಳಲ್ಲಿ ಪಾವತಿಸಲು 'Syndicate Bank Challan' ಎನ್ನುವ ಲಿಂಕನ್ನು ಕ್ಲಿಕ್ ಮಾಡಬೇಕು. ಇತರೆ ಯಾವುದೇ NEFT ವ್ಯವಸ್ಥೆ ಇರುವ (ಸಹಕಾರಿ ಬ್ಯಾಂಕುಗಳನ್ನು ಹೊರತುಪಡಿಸಿ) 'NEFT Challan' ಎನ್ನುವ ಲಿಂಕನ್ನು ಕ್ಲಿಕ್ ಮಾಡಿ ಚಲನ್‌ಗಳನ್ನು ಪಡೆದುಕೊಂಡು ಶುಲ್ಕವನ್ನು ನಿಗದಿಪಡಿಸಿದ ಕೊನೆಯ ದಿನಾಂಕದ ಒಳಗೆ ಸಂದಾಯಮಾಡಬೇಕು. ಶುಲ್ಕ ಸಂದಾಯ ಮಾಡದ ಅರ್ಜಿಗಳನ್ನು ತಿರಸ್ಕೃತಗೊಳಿಸಲಾಗುವುದು.

3.2 ಅರ್ಜಿಯ ಪ್ರತಿಯನ್ನು ಮುದ್ರಿಸಿಕೊಳ್ಳಲು ಅಭ್ಯರ್ಥಿಯು 'Print Application Form' ಎನ್ನುವ ಲಿಂಕನ್ನು ಕ್ಲಿಕ್ ಮಾಡಬೇಕು. ಅರ್ಜಿಯ ಪ್ರತಿಯನ್ನು ಮತ್ತು ಶುಲ್ಕ ಸಂದಾಯ ಮಾಡಿದ ಚಲನ್‌ಅನ್ನು ಕಡ್ಡಾಯವಾಗಿ ಅಭ್ಯರ್ಥಿಗಳು ತಮ್ಮೊಂದಿಗೆ ಇಟ್ಟುಕೊಳ್ಳತಕ್ಕದ್ದು. ಆಯೋಗವು ಅಪೇಕ್ಷಿಸಿದಾಗ ಈ ಚಲನ್ ಅನ್ನು ಹಾಜರುಪಡಿಸಬೇಕು.

3.3 ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದವರೆಗೂ ವಿಳಂಬ ಮಾಡದೆ ಮುಂಚಿತವಾಗಿ ಅರ್ಜಿಗಳನ್ನು ಸಲ್ಲಿಸತಕ್ಕದ್ದು. ಒಮ್ಮೆ ಅರ್ಜಿ ಶುಲ್ಕವನ್ನು ಪಾವತಿಸಿದ ನಂತರ ಅದನ್ನು ಯಾವುದೇ ಸಂದರ್ಭದಲ್ಲಿಯೂ ಹಿಂದಿರುಗಿಸಲಾಗುವುದಿಲ್ಲ. ಅಥವಾ ಅದನ್ನು ಇತರೆ ಯಾವುದೇ ಪರೀಕ್ಷೆ ಅಥವಾ ನೇಮಕಾತಿಗಳಿಗೆ ಹೊಂದಿಸಿಕೊಳ್ಳಲಾಗುವುದಿಲ್ಲ.

ಸೂ.:– ಅಭ್ಯರ್ಥಿಯು ಶೀಘ್ರಲಿಪಿಗಾರರ ಹಾಗೂ ಬೆರಳಚ್ಚುಗಾರರ ಎರಡೂ ಹುದ್ದೆಗಳಿಗೂ ಅರ್ಜಿ ಸಲ್ಲಿಸ ಬಯಸಿದಲ್ಲಿ ಪ್ರತಿ ಹುದ್ದೆಗೂ ಪ್ರತ್ಯೇಕವಾಗಿ ರ್ಜಿ ಸಲ್ಲಿಸಿ ಶುಲ್ಕ ಪಾವತಿಸತಕ್ಕದ್ದು.

- ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 29– 04–2011.
- ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 28 –05–2011 ಸಂಜೆ 5.30 ಗಂಟೆ ಆಗಿರುತ್ತದೆ.
- ಶುಲ್ಕ ಸಂದಾಯ ಮಾಡಲು ಕೊನೆಯ ದಿನಾಂಕ:' 30–05–2011. ಬ್ಯಾಂಕಿನ ವೇಳೆಯೊಳಗೆ.

ವಿಶೇಷ ಸೂಚನೆ: On-line ಮೂಲಕ ಅರ್ಜಿಯನ್ನು ಭರ್ತಿಮಾಡುವ ಸಂದರ್ಭದಲ್ಲಿ ತಾಂತ್ರಿಕ ತೊಂದರೆ ಅಥವಾ ಸಮಸ್ಯೆ ಎದುರಾದಲ್ಲಿ ಸಹಾಯವಾಣಿ (Help line) 30574913, 30574957, 30574910, 30574959, 30574951 ಅನ್ನು ಸಂಪರ್ಕಿಸಿ ಅಗತ್ಯ ಮಾಹಿತಿ ಪಡೆದು ಅರ್ಜಿ ಸಲ್ಲಿಸಬಹುದು.

ಅರ್ಹತಾ ಷರತ್ತುಗಳು:

ಅ) ಭಾರತೀಯ ನಾಗರೀಕನಾಗಿರತಕ್ಕದ್ದು.

ಆ) ಒಬ್ಬ ಜೀವಂತ ಪತ್ನಿಗಿಂತ ಹೆಚ್ಚು ಮಂದಿ ಪತ್ನಿಯರನ್ನು ಹೊಂದಿರುವ ಪುರುಷ ಅಭ್ಯರ್ಥಿ ಮತ್ತು ಈಗಾಗಲೇ ಇನ್ನೊಬ್ಬ ಹೆಂಡತಿ ಇರುವ ವ್ಯಕ್ತಿಯನ್ನು ಮದುವೆಯಾಗಿರುವ ಮಹಿಳಾ ಅಭ್ಯರ್ಥಿಯು ಸರ್ಕಾರದಿಂದ ಪೂರ್ವಾನುಮತಿಯನ್ನು ಪಡೆಯದೇ ನೇಮಕಾತಿಗೆ ಅರ್ಹರಾಗುವುದಿಲ್ಲ.

ಇ) ಅಭ್ಯರ್ಥಿಗಳು ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯವಂತರಾಗಿರಬೇಕು ಮತ್ತು ಅವರ ನೇಮಕಾತಿಯು ಕರ್ತವ್ಯಗಳ ದಕ್ಷ ನಿರ್ವಹಣೆಗೆ ಆತಂಕವನ್ನುಂಟು ಮಾಡುವ ಸಂಭವ ಇರುವ ಯಾವುದೇ ದೈಹಿಕ ನ್ಯೂನತೆಯಿಂದ ಮುಕ್ತರಾಗಿರಬೇಕು.

5. **ಶೈಕ್ಷಣಿಕ ವಿದ್ಯಾರ್ಹತೆ:–**

ಅ. ಶೀಘ್ರಲಿಪಿಗಾರರ ಹುದ್ದೆಗಳಿಗೆ :

1. ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.
2. ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯವರು ನಡೆಸುವ ಕನ್ನಡ ಸೀನಿಯರ್ ಗ್ರೇಡ್ ಶೀಘ್ರಲಿಪಿ ಹಾಗೂ ಕನ್ನಡ ಸೀನಿಯರ್ ಗ್ರೇಡ್ ಬೆರಳಚ್ಚು ಪರೀಕ್ಷೆ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.

3. ಕನ್ನಡ ಶೀಘ್ರಲಿಪಿ ಪ್ರೊಫಿಷಿಯನ್ಸಿ ಗ್ರೇಡ್ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳಿಗೆ ಅರ್ಹ ಪರೀಕ್ಷೆಗಳಲ್ಲಿ ಪಡೆದ ಶೇಕಡ ಒಟ್ಟು ಅಂಕಗಳಿಗೆ 5% ರಷ್ಟು ಕೃಪಾಂಕ ಸೇರಿಸಲಾಗುವುದು.

ಆ. ಬೆರಳಚ್ಚುಗಾರರ ಹುದ್ದೆಗಳಿಗೆ :

1. ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.
2. ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯವರು ನಡೆಸುವ ಕನ್ನಡ ಸೀನಿಯರ್ ಗ್ರೇಡ್ ಬೆರಳಚ್ಚು ಪರೀಕ್ಷೆ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.

ಸೂಚನೆ:–1. (ಅ) ಮತ್ತು (ಆ) ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ನಿಗದಿಪಡಿಸಿದ **ಕೊನೆಯ ದಿನಾಂಕದಂದು ಈ ಮೇಲಿನ ನಿಗದಿತ ವಿದ್ಯಾರ್ಹತೆಯ ಪರೀಕ್ಷೆ ಬರೆದು / ಹಾಜರಾಗಿ ಫಲಿತಾಂಶಕ್ಕಾಗಿ ಕಾಯುತ್ತಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅರ್ಹರಾಗಿರುವುದಿಲ್ಲ.**

ಅರ್ಜಿಗಳನ್ನು ಭರ್ತಿ ಮಾಡಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಹುದ್ದೆಗಳ ಮುಂದೆ ನಿಗದಿಪಡಿಸಿದ ಕನಿಷ್ಠ ವಿದ್ಯಾರ್ಹತೆಯನ್ನು ಅಭ್ಯರ್ಥಿಗಳು ಹೊಂದಿರಬೇಕು ಹಾಗೂ ಸದರಿ ದಿನಾಂಕಕ್ಕೆ ವಿದ್ಯಾರ್ಹತೆಯ ಪ್ರಮಾಣ ಪತ್ರಗಳನ್ನು ಪಡೆದಿಟ್ಟುಕೊಂಡಿರಬೇಕು.

ಸೂಚನೆ:–2. ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯವರು ನಡೆಸುವ ವಾಣಿಜ್ಯ ಪರೀಕ್ಷೆಗಳ ಕನ್ನಡ ಸೀನಿಯರ್ ಗ್ರೇಡ್ ಶೀಘ್ರಲಿಪಿ ಹಾಗೂ ಕನ್ನಡ ಸೀನಿಯರ್ ಗ್ರೇಡ್ ಬೆರಳಚ್ಚು ವಿದ್ಯಾರ್ಹತೆಯನ್ನೂ ಸಹ ಹೊಂದಿರುವ ಅಭ್ಯರ್ಥಿಗಳು ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ ಕಮರ್ಷಿಯಲ್ ಪ್ರಾಕ್ಟೀಸ್ ಡಿಪ್ಲೋಮೊ ವಿದ್ಯಾರ್ಹತೆಯನ್ನೂ ಸಹ ಹೊಂದಿದ್ದಲ್ಲಿ ಅರ್ಜಿಯನ್ನು ಸಲ್ಲಿಸುವಾಗ ಎರಡೂ ವಿದ್ಯಾರ್ಹತೆಗಳ ಅಂಕಗಳನ್ನು ನಮೂದಿಸಲು ಅವಕಾಶವಿರುವುದಿಲ್ಲ ಹಾಗೂ ಯಾವುದೇ ಹುದ್ದೆಗೂ ಒಂದಕ್ಕಿಂತ ಹೆಚ್ಚು ಅರ್ಜಿಗಳನ್ನು ಸಲ್ಲಿಸುವಂತಿಲ್ಲವಾದ್ದರಿಂದ ವಾಣಿಜ್ಯ ಪರೀಕ್ಷೆ ಹಾಗೂ ಕಮರ್ಷಿಯಲ್ ಪ್ರಾಕ್ಟೀಸ್ ಡಿಪ್ಲೋಮೊ ವಿದ್ಯಾರ್ಹತೆಗಳ ಪೈಕಿ ಯಾವ ವಿದ್ಯಾರ್ಹತೆಯ ಅಂಕಗಳು ತಮಗೆ ಅನುಕೂಲಕರವೋ ಎಂಬುದನ್ನು ತಾವೇ ನಿರ್ಣಯಿಸಿಕೊಂಡು ಆ ವಿದ್ಯಾರ್ಹತೆಯ ಅಂಕಗಳನ್ನು ಸಂಬಂಧಿತ ಅಂಕಣಗಳಲ್ಲಿ ದಾಖಲಿಸಬೇಕು. ಒಮ್ಮೆ ಅಂಕಗಳನ್ನು ಅರ್ಜಿಯಲ್ಲಿ ನಮೂದಿಸಿದ ತರುವಾಯ ಆಯೋಗದಲ್ಲಿ ಅಂಕಗಳ ಬದಲಾವಣೆಗೆ ಅವಕಾಶವಿರುವುದಿಲ್ಲ.

ಸೂಚನೆ:–3. ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯವರು ನಡೆಸುವ ಕನ್ನಡ ಸೀನಿಯರ್ ಗ್ರೇಡ್ ಶೀಘ್ರಲಿಪಿ ಹಾಗೂ ಕನ್ನಡ ಸೀನಿಯರ್ ಗ್ರೇಡ್ ಬೆರಳಚ್ಚು ಪರೀಕ್ಷೆಗೆ ತತ್ಸಮಾನ ವಿದ್ಯಾರ್ಹತೆಗೆ ಸಂಬಂಧಿಸಿದ ವಿದ್ಯಾರ್ಹತೆಯ ವಿವರಗಳನ್ನು **ಅನುಬಂಧ–1**ರಲ್ಲಿ ತೋರಿಸಿದೆ. ಈ ಡಿಪ್ಲೋಮೊ ಪರೀಕ್ಷೆಯ ಸಂಬಂಧಿತ ಸೆಮಿಸ್ಟರ್/ವಾರ್ಷಿಕ ಪರೀಕ್ಷೆಗಳಲ್ಲಿ ಬೆರಳಚ್ಚು/ಶೀಘ್ರಲಿಪಿ ವಿಷಯಗಳಲ್ಲಿ ಪಡೆದ ಅಂಕಗಳನ್ನು ಮಾತ್ರ ನಮೂದಿಸಬೇಕೆ ಹೊರತಾಗಿ ಡಿಪ್ಲೋಮೊ ವಿದ್ಯಾರ್ಹತೆಯ ಇನ್ನಿತರ ವಿಷಯಗಳ ಅಂಕಗಳನ್ನು ನಮೂದಿಸುವಂತಿಲ್ಲ. ಅಂಕಗಳನ್ನು ನಮೂದಿಸುವಾಗ ಅಭ್ಯರ್ಥಿಗಳಿಂದ ಯಾವುದೇ ತಪ್ಪಾದಲ್ಲಿ ಅಭ್ಯರ್ಥಿಗಳೇ ಹೊಣೆಗಾರರಾಗಿರುತ್ತಾರೆ.

6. ಹುದ್ದೆಗಳ ವರ್ಗೀಕರಣ:–

(ಅ) ಶೀಘ್ರಲಿಪಿಗಾರರ ಹುದ್ದೆಗಳಿಗೆ:

ಈ ಹುದ್ದೆಗಳ ವರ್ಗೀಕರಣದ ವಿವರವನ್ನು **ಅನುಬಂಧ–2**ರಲ್ಲಿ ತೋರಿಸಿದೆ.

(ಆ) ಬೆರಳಚ್ಚುಗಾರರ ಹುದ್ದೆಗಳಿಗೆ:

ಈ ಹುದ್ದೆಗಳ ವರ್ಗೀಕರಣದ ವಿವರವನ್ನು **ಅನುಬಂಧ–3**ರಲ್ಲಿ ತೋರಿಸಿದೆ.

ಅನುಬಂಧದಲ್ಲಿ ತೋರಿಸಿರುವ ವಿವಿಧ ನೇಮಕಾತಿ ಪ್ರಾಧಿಕಾರಿಗಳಲ್ಲಿ ಖಾಲಿಯಿರುವ ಶೀಘ್ರಲಿಪಿಗಾರರ ಹಾಗೂ ಬೆರಳಚ್ಚುಗಾರರ ಹುದ್ದೆಗಳ ಸಂಖ್ಯೆ ಮತ್ತು ವರ್ಗೀಕರಣವು ಅನಿವಾರ್ಯ ಸಂದರ್ಭಗಳಲ್ಲಿ ಬದಲಾವಣೆಗೆ ಒಳಪಟ್ಟಿರುತ್ತದೆ, ಹುದ್ದೆಗಳ ಸಂಖ್ಯೆ ಮತ್ತು ವರ್ಗೀಕರಣದಲ್ಲಿ ಬದಲಾವಣೆಯಾದಲ್ಲಿ ಅಂದರೆ ಕಡಿಮೆಯಾದಲ್ಲಿ ತಿದ್ದುಪಡಿ ಮತ್ತು ಹೆಚ್ಚಾದಲ್ಲಿ ಸೇರ್ಪಡೆ ಅಧಿಸೂಚನೆಯ ಮೂಲಕ ಪ್ರಕಟಿಸಲಾಗುವುದು. ಅಂತಿಮವಾಗಿ ಆಯ್ಕೆ ಹಂತಕ್ಕೆ ಬರುವ ಅಭ್ಯರ್ಥಿಗಳಿಗೆ, ಅವರುಗಳು ಇಲಾಖಾ ಆದ್ಯತೆಯನ್ನು ನೀಡುವ ಸಲುವಾಗಿ ಅಂತಹ ಅಭ್ಯರ್ಥಿಗಳಿಗೆ ಮಾತ್ರ ಹುದ್ದೆಗಳ ವರ್ಗೀಕರಣವನ್ನು ಒದಗಿಸಲಾಗುವುದು.

7. ವೇತನ ಶ್ರೇಣಿ :–

ಅ) ಶೀಘ್ರಲಿಪಿಗಾರರ ಹುದ್ದೆಗಳಿಗೆ:

ರೂ. 8000–200–8600–225–9500–250–10500–300–12300–350–14400–400– 14800 (ಸಚಿವಾಲಯದಲ್ಲಿ ಮಾತ್ರ)

ರೂ. 7275–175–7800–200–8600–225–9500–250–10500–300–12300–350–13350

ಆ) ಬೆರಳಚ್ಚುಗಾರರ ಹುದ್ದೆಗಳಿಗೆ:

ರೂ. 5800–100–6000–125–6500–150–7100–175–7800–200–8600–225–9500–250–10500

ಪಿಂಚಣಿ ಸೌಲಭ್ಯ: ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ(ಎಸ್‌ಪಿಎಲ್) 04 ಪಿಇಟಿ 2005, ದಿನಾಂಕ:31.03.2006ರಂತೆ.

8. **ವಯೋಮಿತಿ:–** ಅರ್ಜಿಗಳನ್ನು ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಅಭ್ಯರ್ಥಿಯು

ಅ) ಕನಿಷ್ಠ 18 ವರ್ಷ ವಯಸ್ಸನ್ನು ಪೂರೈಸಿರತಕ್ಕದ್ದು

ಆ) ಗರಿಷ್ಠ ವಯೋಮಿತಿ :

ಸಾಮಾನ್ಯ ವರ್ಗ	35 ವರ್ಷ
2ಎ,2ಬಿ,3ಎ,3ಬಿ	38 ವರ್ಷ
ಪ.ಜಾ/ಪ.ಪಂ/ಪ್ರ-1	40 ವರ್ಷ

ಅಭ್ಯರ್ಥಿಗಳ ಜನ್ಮ ದಿನಾಂಕವನ್ನು ಅವರ ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ವಿದ್ಯಾರ್ಹತೆಯ ಪ್ರಮಾಣ ಪತ್ರ / ವರ್ಗಾವಣೆ ಪ್ರಮಾಣ ಪತ್ರ (ಟಿ.ಸಿ) / ಕುಮ್ಯುಲೇಟಿವ್ ರೆಕಾರ್ಡ್‌ನಲ್ಲಿ ನಮೂದಿಸಿರುವಂತೆ ಪರಿಗಣಿಸಲಾಗುವುದು. ಇವುಗಳನ್ನು ಹೊರತುಪಡಿಸಿ ಇತರೆ ಯಾವುದೇ ದಾಖಲೆಗಳನ್ನು ಪರಿಗಣಿಸಲಾಗುವುದಿಲ್ಲ.

ಈ ಮುಂದಿನ ಸಂದರ್ಭಗಳಲ್ಲಿ ನೇಮಕಾತಿಯ ಗರಿಷ್ಠ ವಯೋಮಿತಿಯನ್ನು ಈ ಕೆಳಗೆ ತಿಳಿಸಿರುವಷ್ಟರ ಮಟ್ಟಿಗೆ ಹೆಚ್ಚಿಸಲಾಗುವುದು.

- ಅಭ್ಯರ್ಥಿಯು ಕರ್ನಾಟಕ ರಾಜ್ಯ ಸರ್ಕಾರದಲ್ಲಿ ಅಥವಾ ಸ್ಥಳೀಯ ಪ್ರಾಧಿಕಾರದಲ್ಲಿ ಅಥವಾ ರಾಜ್ಯ ಅಧಿನಿಯಮ ಅಥವಾ ಕೇಂದ್ರ ಅಧಿನಿಯಮದ ಮೂಲಕ ಸ್ಥಾಪನೆಗೊಂಡು ಕರ್ನಾಟಕ ರಾಜ್ಯ ಸರ್ಕಾರದ ಸ್ವಾಮ್ಯ ಅಥವಾ ನಿಯಂತ್ರಣದಲ್ಲಿರುವ ನಿಗಮದಲ್ಲಿ ಹುದ್ದೆ ಹೊಂದಿರುವ ಅಥವಾ ಹಿಂದೆ ಹೊಂದಿದ್ದಲ್ಲಿ ಗರಿಷ್ಠ ವಯೋಮಿತಿಯನ್ನು ಅವನು/ಅವಳು ಎಷ್ಟು ವರ್ಷಗಳ ಅವಧಿಗೆ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿರುವರೋ ಅಥವಾ ಹಿಂದೆ ಸಲ್ಲಿಸಿದ್ದರೋ ಅಷ್ಟು ವರ್ಷಗಳು ಅಥವಾ 10 ವರ್ಷಗಳ ಅವಧಿ ಅದರಲ್ಲಿ ಯಾವುದು ಕಡಿಮೆಯೋ ಅಷ್ಟು ವರ್ಷಗಳು.
- ಅಭ್ಯರ್ಥಿಯು ಕರ್ನಾಟಕ ರಾಜ್ಯದಲ್ಲಿರುವ ಭಾರತ ಸರ್ಕಾರದ ಜನಗಣತಿ ಸಂಸ್ಥೆಯಲ್ಲಿ ಈಗ ಹುದ್ದೆಯನ್ನು ಹೊಂದಿದ್ದರೆ ಅಥವಾ ಹಿಂದೆ ಹೊಂದಿದ್ದ ಪಕ್ಷದಲ್ಲಿ ಗರಿಷ್ಠ ವಯೋಮಿತಿಯನ್ನು ಅಭ್ಯರ್ಥಿಯು ಎಷ್ಟು ವರ್ಷಗಳ ಅವಧಿಗೆ ಆ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿರುವರೋ ಅಥವಾ ಹಿಂದೆ ಸಲ್ಲಿಸಿದ್ದಾರೋ ಅಷ್ಟು ವರ್ಷಗಳ ಅಥವಾ ಐದು ವರ್ಷಗಳ ಅವಧಿ ಅದರಲ್ಲಿ ಯಾವುದು ಕಡಿಮೆಯೋ ಅಷ್ಟು ವರ್ಷಗಳು.
- ಅಭ್ಯರ್ಥಿಯು ಮಾಜಿ ಸೈನಿಕನಾಗಿದ್ದಲ್ಲಿ ಅವನು ಸಶಸ್ತ್ರದಳಗಳಲ್ಲಿ ಎಷ್ಟು ವರ್ಷ ಸೇವೆ ಸಲ್ಲಿಸಿರುವನೋ ಆ ವರ್ಷಗಳಿಗೆ ಮೂರು ವರ್ಷಗಳನ್ನು ಸೇರಿಸಿದರೆ ಎಷ್ಟು ವರ್ಷಗಳಾಗುವುದೋ ಅಷ್ಟು ವರ್ಷಗಳು.

ವಿವರಣೆ: (ಎ) ಮಾಜಿ ಸೈನಿಕ ಎಂದರೆ ಸಶಸ್ತ್ರದಳಗಳಾದ ನಿಯಮಿತ ಭೂದಳ, ನೌಕಾದಳ ಮತ್ತು ವಾಯುದಳದಲ್ಲಿ ಯಾವುದೇ ಶ್ರೇಣಿಯಲ್ಲಿ (ಯೋಧ ಅಥವಾ ಯೋಧರಲ್ಲದ ಹುದ್ದೆಗಳಲ್ಲಿ) ಸೇವೆ ಸಲ್ಲಿಸಿದ ವ್ಯಕ್ತಿ. ಆದರೆ ಡಿಫೆನ್ಸ್ ಸೆಕ್ಯುರಿಟಿಕೋರ್, ಜನರಲ್ ರಿಸರ್ವ್ ಇಂಜಿನೀಯರಿಂಗ್ ಫೋರ್ಸ್, ಲೋಕಸಹಾಯಕ ಸೇನಾ ಮತ್ತು ಪ್ಯಾರಾ ಮಿಲಿಟರಿ ದಳದಲ್ಲಿ ಸೇವೆ ಸಲ್ಲಿಸಿದ ವ್ಯಕ್ತಿ ಸೇರ್ಪಡೆಯಾಗುವುದಿಲ್ಲ; ಮತ್ತು (ಬಿ) ಕೇಂದ್ರ ಸಶಸ್ತ್ರದಳಗಳಲ್ಲಿ ಸೇವೆ ಸಲ್ಲಿಸುವಾಗ ಮಡಿದ ಅಥವಾ ಶಾಶ್ವತವಾಗಿ ದೈಹಿಕ ವಿಕಲತೆ ಹೊಂದಿದ ವ್ಯಕ್ತಿಗಳ ಕುಟುಂಬದವರು (ಸಂದರ್ಭಾನುಸಾರ ಹೆಂಡತಿ ಅಥವಾ ಗಂಡ ಮತ್ತು ಮಕ್ಕಳು ಮತ್ತು ಮಲಮಕ್ಕಳು) ಮಾಜಿ ಸೈನಿಕ ಮೀಸಲಾತಿಗೆ ಅರ್ಹರಾಗಿರುತ್ತಾರೆ. ಆದರೆ ಅಂತಹವರುಗಳಿಗೆ ವಯೋಮಿತಿ ಸಡಿಲಿಕೆಯನ್ನು ನೀಡಲಾಗುವುದಿಲ್ಲ.

(ಅ) ಮೇಲ್ಕಂಡ ದಳದ ಸೇನೆಯಿಂದ ನಿವೃತ್ತಿ ಹೊಂದಿದ ನಂತರ ನಿವೃತ್ತಿ ವೇತನ ಪಡೆಯುತ್ತಿರುವ

ಅಥವಾ

(ಆ) ವೈದ್ಯಕೀಯ ಕಾರಣಗಳಿಂದ ಮಿಲಿಟರಿ ಸೇವೆಯಿಂದ ಬಿಡುಗಡೆಯಾದ ಅಥವಾ ವ್ಯಕ್ತಿಯಹಿಡಿತಕ್ಕೂ ಮೀರಿದ ಪರಿಸ್ಥಿತಿಗಳಿಂದ ಮತ್ತು ವೈದ್ಯಕೀಯ ಅಥವಾ ಅಸಾಮರ್ಥ್ಯದ ಪಿಂಚಣಿ ಪಡೆದು ಸೇವೆಯಲ್ಲಿ ಬಿಡುಗಡೆಯಾದವನು

ಅಥವಾ

(ಇ) ಸ್ವಂತ ಕೋರಿಕೆ ಹೊರತುಪಡಿಸಿ ಸಿಬ್ಬಂದಿ ಕಡಿತದ ಪರಿಣಾಮದಿಂದ ಅಂತಹ ಸೇನೆಯಿಂದ ಬಿಡುಗಡೆ ಹೊಂದಿದ ವ್ಯಕ್ತಿ.

ಅಥವಾ

(ಈ) ತನ್ನ ಸ್ವಂತ ಕೋರಿಕೆ ಮೇರೆಗೆ ಅಥವಾ ದುರ್ನಡತೆ ಅಥವಾ ಅಸಾಮರ್ಥ್ಯದ ಕಾರಣದಿಂದಾಗಿ ತೆಗೆದು ಹಾಕಿರುವ ಅಥವಾ ಕರ್ತವ್ಯದಿಂದ ವಜಾ ಮಾಡಿದ ವ್ಯಕ್ತಿಗಳನ್ನು ಹೊರತುಪಡಿಸಿ, ನಿರ್ದಿಷ್ಟ ಅವಧಿಯನ್ನು ಪೂರೈಸಿದ ತರುವಾಯ ಬಿಡುಗಡೆ ಹೊಂದಿದ ವ್ಯಕ್ತಿ ಮತ್ತು ಗ್ರಾಚ್ಯುಟಿ ಪಡೆಯುತ್ತಿರುವ ವ್ಯಕ್ತಿ ಮತ್ತು ಪ್ರಾಂತೀಯ ಸೇವೆಯ ಈ ಕೆಳಗೆ ಹೆಸರಿಸಿದ ವರ್ಗದ ಸಿಬ್ಬಂದಿಯವರು.

1. ನಿರಂತರ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ ಪಿಂಚಣಿದಾರರು
2. ಮಿಲಿಟರಿ ಸೇವೆಯಿಂದಾಗಿ ಉಂಟಾದ ದೈಹಿಕ ಅಸಾಮರ್ಥ್ಯತೆ ಹೊಂದಿ ಬಿಡುಗಡೆಯಾದ ವ್ಯಕ್ತಿ.
3. ಗ್ಯಾಲಂಟ್ರಿ ಪ್ರಶಸ್ತಿ ವಿಜೇತರು

ಈ ಮೇಲ್ಕಂಡ ವರ್ಗದ ಅಭ್ಯರ್ಥಿಗಳು ಮಾಜಿ ಸೈನಿಕ ಮೀಸಲಾತಿಗೆ ಅರ್ಹರಿರುತ್ತಾರೆ.

ವಿವರಣೆ: ಕೇಂದ್ರ ಸಶಸ್ತ್ರದಳದ ಸೇವೆಯಲ್ಲಿ ವ್ಯಕ್ತಿಗಳು ಸೇವೆಯಿಂದ ನಿವೃತ್ತಿಹೊಂದಿದ ನಂತರ ಮಾಜಿ ಸೈನಿಕರ ವರ್ಗದಡಿ ಬರುವ ವ್ಯಕ್ತಿಗೆ ಒಪ್ಪಂದವು ಪೂರ್ಣವಾಗಲು ಒಂದು ವರ್ಷಕ್ಕೆ ಮುನ್ನ ಉದ್ಯೋಗಕ್ಕೆ ಅರ್ಜಿ ಹಾಕಿಕೊಳ್ಳಲು ಹಾಗೂ ಅವರಿಗೆ ಮಾಜಿಸೈನಿಕರಿಗೆ ದೊರೆಯುವ ಎಲ್ಲಾ ಸೌಲಭ್ಯಗಳನ್ನು ಹೊಂದಲು ಅನುಮತಿ ನೀಡಲಾಗಿದೆ. ಆದರೆ, ಸಮವಸ್ತ್ರವನ್ನು ತ್ಯಜಿಸಲು ಅನುಮತಿ ನೀಡುವ ವರೆಗೆ ರಾಜ್ಯ ನಾಗರೀಕ ಸೇವೆ ಅಥವಾ ಹುದ್ದೆಗಳಿಗೆ ನೇಮಕ ಹೊಂದುವಂತಿಲ್ಲ.

➢ ಅಭ್ಯರ್ಥಿಯು ನ್ಯಾಷನಲ್ ಕೆಡೆಟ್ ಕೋರ್‌ನಲ್ಲಿ ಪೂರ್ಣ ಕಾಲಿಕ ಪರಿವೀಕ್ಷಕನಾಗಿ ಸೇವೆ ಸಲ್ಲಿಸಿ ಬಿಡುಗಡೆಯಾಗಿರುವ ವ್ಯಕ್ತಿಯಾಗಿದ್ದರೆ ಅಂತಹ ಕ್ಯಾಡೆಟ್ ಪರಿವೀಕ್ಷಕನಾಗಿ ಸೇವೆ ಸಲ್ಲಿಸಿದಷ್ಟು ವರ್ಷಗಳು.

➢ ಅಭ್ಯರ್ಥಿಯು ರಾಜ್ಯ ಸರ್ಕಾರದಿಂದ ಪುರಸ್ಕೃತವಾದ ಗ್ರಾಮೀಣ ಔನ್ನತ್ಯೀಕರಣ ಯೋಜನೆಯ ಮೇರೆಗೆ ನೇಮಕಗೊಂಡು ಗ್ರಾಮಸಮೂಹ ಪರಿಶೀಲಕರಾಗಿ ಈಗ ಕೆಲಸಮಾಡುತ್ತಿದ್ದರೆ. ಅಥವಾ ಹಿಂದೆಯಿದ್ದ ಪಕ್ಷದಲ್ಲಿ ಅಂತಹ ಗ್ರಾಮ ಸಮೂಹ ಪರಿಶೀಲಕರಾಗಿ ಸೇವೆ ಸಲ್ಲಿಸಿದಷ್ಟು ವರ್ಷಗಳು

➢ ಅಭ್ಯರ್ಥಿಯು ವಿಧವೆಯಾಗಿದ್ದಲ್ಲಿ 10 ವರ್ಷಗಳು

➢ ಅಭ್ಯರ್ಥಿಯು ಜೀತಕಾರ್ಮಿಕನಾಗಿದ್ದ ಪಕ್ಷದಲ್ಲಿ 10 ವರ್ಷಗಳು

ಜೀತ ಕಾರ್ಮಿಕನಾಗಿದ್ದ ಅಭ್ಯರ್ಥಿಯು ವಯೋಮಿತಿ ಸಡಿಲಿಕೆ ಪಡೆಯಲು ಸದರಿ ಅಧಿನಿಯಮ ಅಥವಾ 1957ರ ಕರ್ನಾಟಕ ಜೀತಕಾರ್ಮಿಕ ಪದ್ಧತಿ (ರದ್ದಿಯಾತಿ) ಆದೇಶದ ಮೇರೆಗೆ ಜೀತ ಸಾಲವನ್ನು ಸಂದಾಯ ಮಾಡುವ ಹೊಣೆಯಿಂದ ಬಿಡುಗಡೆಯಾಗಿದ್ದಾನೆಂದು ಪ್ರಮಾಣ ಪತ್ರವನ್ನು ಜಿಲ್ಲಾ ಮ್ಯಾಜಿಸ್ಟ್ರೇಟ್ ರಿಂದ ಪಡೆದಿಟ್ಟುಕೊಂಡಿರತಕ್ಕದ್ದು.

➢ ಅಂಗವಿಕಲ ಅಭ್ಯರ್ಥಿಗಳಿಗೆ 10 ವರ್ಷಗಳು.

9. ನೇಮಕಾತಿ ವಿಧಾನ:

(ಶೀಘ್ರಲಿಪಿಗಾರರ ಮತ್ತು ಬೆರಳಚ್ಚುಗಾರರ ನೇಮಕಾತಿ) ನಿಯಮಾವಳಿಗಳು 1983 ಮತ್ತು ಅದಕ್ಕೆ ಕಾಲಕಾಲಕ್ಕೆ ಮಾಡಿರುವ ತಿದ್ದುಪಡಿಗಳನ್ವಯ

ಶೀಘ್ರಲಿಪಿಗಾರರ ಹುದ್ದೆಗಳಿಗೆ:

ಅಭ್ಯರ್ಥಿಯು ಎಸ್.ಎಸ್.ಎಲ್.ಸಿ / ತತ್ಸಮಾನ ಪರೀಕ್ಷೆಯ ಶೇಕಡವಾರು ಅಂಕಗಳು ಹಾಗೂ ಕನ್ನಡ ಶೀಘ್ರಲಿಪಿ (ಸೀನಿಯರ್ ಗ್ರೇಡ್)ಪ್ರೌಢ ದರ್ಜೆಯ ಶೇಕಡವಾರು ಅಂಕಗಳು ಹಾಗೂ ಕನ್ನಡ ಬೆರಳಚ್ಚು ಪ್ರೌಢ ದರ್ಜೆಯ (ಸೀನಿಯರ್) ಶೇಕಡವಾರು ಅಂಕಗಳು ಒಟ್ಟುಗೂಡಿಸಿ ಈ ಅಂಕಗಳ ಜೇಷ್ಠತೆ ಹಾಗೂ ಚಾಲ್ತಿಯಲ್ಲಿರುವ ಮೀಸಲಾತಿ ನಿಯಮಗಳನ್ವಯ ಆಯ್ಕೆ ಮಾಡುವುದು.

ಸೂಚನೆ: ಕನ್ನಡ ಶೀಘ್ರಲಿಪಿ ಪ್ರೊಫಿಷಿಯನ್ಸಿ ಗ್ರೇಡ್ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳಿಗೆ ಅರ್ಹ ಪರೀಕ್ಷೆಗಳಲ್ಲಿ ಪಡೆದ ಶೇಕಡ ಒಟ್ಟು ಅಂಕಗಳಿಗೆ ಶೇಕಡಾ 5 ರಷ್ಟು ಕೃಪಾಂಕ ಸೇರಿಸಲಾಗುವುದು.

ಬೆರಳಚ್ಚುಗಾರರ ಹುದ್ದೆಗಳಿಗೆ:

ಅಭ್ಯರ್ಥಿಯು ಎಸ್.ಎಸ್.ಎಲ್.ಸಿ./ ತತ್ಸಮಾನ ಪರೀಕ್ಷೆಯ ಶೇಕಡವಾರು ಅಂಕಗಳು ಹಾಗೂ ಕನ್ನಡ ಬೆರಳಚ್ಚು ಪ್ರೌಢ ದರ್ಜೆಯ (ಸೀನಿಯರ್ ಗ್ರೇಡ್)ಶೇಕಡವಾರು ಅಂಕಗಳು ಒಟ್ಟುಗೂಡಿಸಿ ಈ ಅಂಕಗಳ ಜೇಷ್ಠತೆ ಹಾಗೂ ಚಾಲ್ತಿಯಲ್ಲಿರುವ ಮೀಸಲಾತಿ ಅನುಸಾರ ಆಯ್ಕೆಮಾಡುವುದು.

10. ಪ್ರಮುಖ ಸೂಚನೆಗಳು:

10.1. ಜಾತಿ ಮೀಸಲಾತಿ ಪ್ರಮಾಣ ಪತ್ರಗಳು:

ಜಾತಿ ಮೀಸಲಾತಿ ಕೋರಬಯಸುವ

➠ ಪ.ಜಾ/ಪ.ಪಂ. ಅಭ್ಯರ್ಥಿಗಳು ನಮೂನೆ 'ಡಿ' ರಲ್ಲಿ

➠ ಪ್ರವರ್ಗ–1ರ ಅಭ್ಯರ್ಥಿಗಳು ನಮೂನೆ 'ಇ' ನಲ್ಲಿ ಹಾಗೂ

➠ 2ಎ, 2ಬಿ, 3ಎ, 3ಬಿ ಅಭ್ಯರ್ಥಿಗಳು ನಮೂನೆ 'ಎಫ್' ನಲ್ಲಿ ಸಂಬಂಧಿತ ತಹಶೀಲ್ದಾರರವರಿಂದ ಪ್ರಮಾಣ ಪತ್ರವನ್ನು ಪಡೆದಿರಬೇಕು. ಈ ಪ್ರಮಾಣ ಪತ್ರವು, ಈ ಹುದ್ದೆಗೆ ಅರ್ಜಿ ಸಲ್ಲಿಸಲು ನಿಗದಿ ಪಡಿಸಿರುವ ಕೊನೆಯ ದಿನಾಂಕದೊಳಗೆ ಪಡೆದಿರಬೇಕು ಹಾಗೂ ಕೊನೆಯ ದಿನಾಂಕದಂದು ಚಾಲ್ತಿಯಲ್ಲಿರಬೇಕು. ಅಂದರೆ, ಹಿಂದುಳಿದ ವರ್ಗಗಳ ಪ್ರ–2ಎ, ಪ್ರ–2ಬಿ, ಪ್ರ–3ಎ ಮತ್ತು ಪ್ರ–3ಬಿ ವರ್ಗದ ಮೀಸಲಾತಿ ಪ್ರಮಾಣ ಪತ್ರಗಳನ್ನು ಪಡೆದ ದಿನಾಂಕದಿಂದ ಅರ್ಜಿಗಳನ್ನು ಸಲ್ಲಿಸಲು ನಿಗದಿ ಪಡಿಸಿದ ಕೊನೆಯ ದಿನಾಂಕದವರೆಗೆ 05 ವರ್ಷಗಳ ಅವಧಿಯಲ್ಲಿರಬೇಕು. ನಿಗದಿ ಪಡಿಸಿದ ಕೊನೆಯ ದಿನಾಂಕದ ನಂತರ ಪಡೆದ ಪ್ರಮಾಣ ಪತ್ರಗಳನ್ನು ಪರಿಗಣಿಸುವುದಿಲ್ಲ. ಈ ಪ್ರಮಾಣ ಪತ್ರಗಳ ನಮೂನೆಗಳನ್ನು ಅಧಿಸೂಚನೆಯ ಕೊನೆಯಲ್ಲಿ ನೀಡಲಾಗಿರುತ್ತದೆ.

10.2. ಗ್ರಾಮೀಣ ಅಭ್ಯರ್ಥಿ:

➠ ಗ್ರಾಮೀಣ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು ಪ್ರಸ್ತುತ ಚಾಲ್ತಿಯಲ್ಲಿರುವ ನಿಯಮಗಳ ರೀತ್ಯಾ ಗ್ರಾಮೀಣ ಮೀಸಲಾತಿಗೆ ಒಳಪಡುವ ಪ್ರದೇಶಗಳಲ್ಲಿ 1 ರಿಂದ 10ನೇ ತರಗತಿಯವರೆಗೆ ಸತತವಾಗಿ ವ್ಯಾಸಂಗ ಮಾಡಿ ಉತ್ತೀರ್ಣರಾಗಿರುವವರು ಈ ಮೀಸಲಾತಿಯನ್ನು ಪಡೆಯಲು ಅರ್ಹರು. ಈ ಪ್ರಮಾಣ ಪತ್ರಗಳು ಅರ್ಜಿ ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಸಿಂಧುವಾಗಿರಬೇಕು ಮತ್ತು ಮೂಲ ದಾಖಲೆಗಳ ಪರಿಶೀಲನೆಯ ಸಮಯದಲ್ಲಿ ಹಾಜರುಪಡಿಸತಕ್ಕದ್ದು.

➠ ಗ್ರಾಮೀಣ ಮೀಸಲಾತಿಯನ್ನು ಕೋರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ–1, 2ಎ, 2ಬಿ, 3ಎ, 3ಬಿ ವರ್ಗಗಳಿಗೆ ಸೇರಿದ ಅಭ್ಯರ್ಥಿಗಳು ನಮೂನೆ 2 ರಲ್ಲಿ ಗ್ರಾಮೀಣ ಮೀಸಲಾತಿ ಪ್ರಮಾಣ ಪತ್ರವನ್ನು ಪಡೆದಿಟ್ಟು ಕೊಂಡಿರತಕ್ಕದ್ದು.

➡ ಗ್ರಾಮೀಣ ಮೀಸಲಾತಿ ಕೋರುವ ಸಾಮಾನ್ಯ ವರ್ಗದ ಅಭ್ಯರ್ಥಿಗಳು ನಮೂನೆ-2ರ ಗ್ರಾಮೀಣ ಮೀಸಲಾತಿ ಪ್ರಮಾಣ ಪತ್ರದ ಜೊತೆಗೆ ನಮೂನೆ-1 ರಲ್ಲಿ ಅವರು ಮೇಲುಸ್ತರಕ್ಕೆ ಸೇರಿಲ್ಲದಿರುವ ಬಗ್ಗೆ ಪ್ರಮಾಣ ಪತ್ರವನ್ನು ಸಂಬಂಧಿಸಿದ ತಹಶೀಲ್ದಾರ್ ರವರಿಂದ ಪಡೆದಿರತಕ್ಕದ್ದು.

➡ ಗ್ರಾಮೀಣ ಮೀಸಲಾತಿ ಕೋರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ-1, 2ಎ, 2ಬಿ, 3ಎ, 3ಬಿ ವರ್ಗಗಳಿಗೆ ಸೇರಿದ ಅಭ್ಯರ್ಥಿ ಗ್ರಾಮೀಣ ಮೀಸಲಾತಿ ಪ್ರಮಾಣ ಪತ್ರಗಳು ತಿರಸ್ಕೃತಗೊಂಡಲ್ಲಿ ಅವರು ಗ್ರಾಮೀಣ ಮೀಸಲಾತಿಗೆ ಅನರ್ಹರಾಗುತ್ತಾರೆ.

ಸೂಚನೆ:– ಗ್ರಾಮೀಣ ಮೀಸಲಾತಿಗೆ ಸಂಬಂಧಿಸಿದಂತೆ ನಮೂನೆ-2ರ ಪ್ರಮಾಣ ಪತ್ರವನ್ನು ಅಭ್ಯರ್ಥಿಗಳು ತಾವು ವ್ಯಾಸಂಗ ಮಾಡಿದ ಶಾಲೆಯ ಮುಖ್ಯೋಪಾಧ್ಯಾಯರಿಂದ ಸಹಿ ಮತ್ತು ಮೊಹರು ಪಡೆದು ಅದಕ್ಕೆ ಸಂಬಂಧಿತ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಮೇಲು ರುಜು ಪಡೆದಿರತಕ್ಕದ್ದು.

10.3. ಕನ್ನಡ ಮಾಧ್ಯಮ ಅಭ್ಯರ್ಥಿ:

ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿಗಳಿಗೆ ಮೀಸಲಿರಿಸಿದ ಹುದ್ದೆಗಳಲ್ಲಿ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು 1ನೇ ತರಗತಿಯಿಂದ 10ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ಸತತವಾಗಿ ವ್ಯಾಸಂಗ ಮಾಡಿರುವ ಬಗ್ಗೆ ಸಂಬಂಧ ಪಟ್ಟ ಶಾಲೆಯ ಮುಖ್ಯೋಪಾಧ್ಯಾಯರ ಸಹಿ ಮತ್ತು ಮೊಹರಿನೊಂದಿಗೆ ಪ್ರಮಾಣ ಪತ್ರವನ್ನು ಪಡೆದಿರಬೇಕು.

10.4. ಅಂಗವಿಕಲ ಅಭ್ಯರ್ಥಿ :

ಸಾಮಾನ್ಯ ನೇಮಕಾತಿ ನಿಯಮ 9(1A)(ii)ರನ್ವಯ ಸರ್ಕಾರವು ಗುರ್ತಿಸಿ ಅಧಿಸೂಚಿಸಿರುವ ಗ್ರೂಪ್ 'ಸಿ' ಹುದ್ದೆಗಳಿಗೆ ಶೇಕಡಾ 5ರಷ್ಟು ಹುದ್ದೆಗಳನ್ನು ಅಂಗವಿಕಲ ಅಭ್ಯರ್ಥಿಗಳಿಗೆ ಮೀಸಲಿಡಬೇಕಾಗಿದೆ. ಈ ನಿಯಮದನ್ವಯ ಸರ್ಕಾರಿ ಅಧಿಸೂಚನೆ ಸಂಖ್ಯೆ ಡಿಪಿಎಆರ್ 52 ಎಸ್ಆರ್ಆರ್ 99, ದಿನಾಂಕ:29-11-2002ರಲ್ಲಿ, ಕ್ರಮ ಸಂಖ್ಯೆ 79ರಲ್ಲಿ ಸರ್ಕಾರದ ಸಚಿವಾಲಯದ ಶೀಘ್ರಲಿಪಿಗಾರರ ಹುದ್ದೆಗಳನ್ನು ಚಲನವಲನ ವೈಕಲ್ಯ ಅಭ್ಯರ್ಥಿಗಳಿಗೆ ಗುರುತಿಸಿ ಅಧಿಸೂಚಿಸಿರುವುದರಿಂದ, ಈಗ ಅಧಿಸೂಚಿಸಿರುವ ಸಚಿವಾಲಯದ ಶೀಘ್ರಲಿಪಿಗಾರರ ಹುದ್ದೆಗಳಲ್ಲಿ ಮೀಸಲಿರುವ 05 ಅಂಗವಿಕಲ ಹುದ್ದೆಗಳಿಗೆ ಮತ್ತು ಭಾಷಾಂತರ ಇಲಾಖೆಯಲ್ಲಿನ ಶೀಘ್ರಲಿಪಿಗಾರರ ಹುದ್ದೆಗಳಲ್ಲಿ ಮೀಸಲಿರುವ 01 ಅಂಗವಿಕಲ ಹುದ್ದೆಗಳಿಗೆ ಕೇವಲ ಚಲನವಲನ ವೈಕಲ್ಯವುಳ್ಳ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸಬಹುದಾಗಿದೆ. ಆದರೆ ಮುಂದೆ ಇತರೆ ಇಲಾಖೆಗಳಿಂದ ಶೀಘ್ರಲಿಪಿಗಾರರ ಹಾಗೂ ಬೆರಳಚ್ಚುಗಾರರ ಹುದ್ದೆಗಳು ನೇಮಕಾತಿಗಾಗಿ ಸ್ವೀಕೃತಗೊಳ್ಳುವ ಸಾಧ್ಯತೆ ಇರುವುದರಿಂದ ದಿನಾಂಕ: 29-11-2002 ಅಧಿಸೂಚನೆಯಲ್ಲಿ ಗುರುತಿಸಲಾದ ಇಲಾಖೆಗಳು/ಅಂಗವಿಕಲತೆಯ ಅಭ್ಯರ್ಥಿಗಳು ಮಾತ್ರ ಈ ಮೀಸಲಾತಿ ಕೋರಬಹುದು. ಈ ಹುದ್ದೆಗಳಿಗೆ ಅಂಧ/ದೃಷ್ಟಿಮಾಂದ್ಯ/ಮಾನಸಿಕ ಅಸ್ವಸ್ಥ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ.

ಅಂಗವಿಕಲರಿಗೆ ಮೀಸಲಿರಿಸಿದ ಹುದ್ದೆಗಳನ್ನು ಕೋರುವ ಅಭ್ಯರ್ಥಿಗಳು ವೈದ್ಯಕೀಯ ಪ್ರಮಾಣ ಪತ್ರವನ್ನು ದಿನಾಂಕ: 19.11.2005ರ ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ:ಸಿಆಸುಇ 115 ಸೆನೆನಿ 2005ರಲ್ಲಿ ನಿಗದಿಪಡಿಸಿದ ನಮೂನೆಯಲ್ಲಿ, ಅಂಗವಿಕಲತೆಯ ಬಗ್ಗೆ ಜಿಲ್ಲಾಮಟ್ಟದ ವೈದ್ಯಕೀಯ ಮಂಡಳಿಯಿಂದ ನೀಡಲಾಗುವ ಪ್ರಮಾಣ ಪತ್ರವನ್ನು ಪಡೆದಿಟ್ಟುಕೊಂಡಿರತಕ್ಕದ್ದು. ಇತರೆ ಯಾವುದೇ ನಮೂನೆಯಲ್ಲಿ ಅಂಗವಿಕಲತೆಯ ಬಗ್ಗೆ ಪಡೆಯಲಾಗಿರುವ ಪ್ರಮಾಣ ಪತ್ರಗಳನ್ನು ಪರಿಗಣಿಸುವುದಿಲ್ಲ.

10.5 ಯೋಜನಾ ನಿರಾಶ್ರಿತ ಅಭ್ಯರ್ಥಿ :

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 23 ಸೆನೆನಿ 99, ದಿನಾಂಕ: 23-11-2000ರನ್ವಯ ಯೋಜನೆಗಳಿಂದ ನಿರ್ವಸಿತರಾದ (ಈ ನಿಯಮಗಳು ಜಾರಿಯಾಗುವ 20 ವರ್ಷಕ್ಕೆ ಮುನ್ನ ನಿರ್ವಸಿತರಾದ ಕುಟುಂಬದ ಅಭ್ಯರ್ಥಿಗಳು ಈ ಮೀಸಲಾತಿಗೆ ಅನ್ವಯವಾಗುವುದಿಲ್ಲ) ಕುಟುಂಬದ ಅಭ್ಯರ್ಥಿಗಳಿಗೆ ಮೀಸಲಿರಿಸಿದ ಹುದ್ದೆಗಳನ್ನು ಕೋರುವ ಅಭ್ಯರ್ಥಿಗಳು ಸಂಬಂಧಿಸಿದ ತಹಶೀಲ್ದಾರ್ ರವರಿಂದ ನಿಗದಿತ ನಮೂನೆಯಲ್ಲಿ ಪ್ರಮಾಣ ಪತ್ರವನ್ನು ಪಡೆದಿರಬೇಕು.

ಸೂಚನೆ:– 1) ಈ ಮೇಲಿನ ಎಲ್ಲಾ ಪ್ರಮಾಣ ಪತ್ರಗಳು ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದೊಳಗೆ ಪಡೆದಿರಬೇಕು ಹಾಗೂ ಕೊನೆಯ ದಿನಾಂಕದಂದು ಚಾಲ್ತಿಯಲ್ಲಿರಬೇಕು.

2) ಈ ಮೇಲೆ ನಮೂದಿಸಿರುವ ಎಲ್ಲಾ ಮೀಸಲಾತಿ ಪ್ರಮಾಣ ಪತ್ರಗಳ ನಮೂನೆಗಳನ್ನು ಅಧಿಸೂಚನೆಯ ಕೊನೆಯಲ್ಲಿ ನೀಡಲಾಗಿರುತ್ತದೆ.

11. ಅಭ್ಯರ್ಥಿಗಳು ON-LINE ಮೂಲಕ ಅರ್ಜಿ ಸಲ್ಲಿಸುವುದರಿಂದ ಯಾವುದೇ ಪ್ರಮಾಣ ಪತ್ರಗಳನ್ನು ಅರ್ಜಿಯೊಂದಿಗೆ Upload ಮಾಡಲು ಅವಕಾಶ ಇರುವುದಿಲ್ಲ. ಆದರೆ ಈ ಕೆಳಕಂಡ ಪ್ರಮಾಣ ಪತ್ರಗಳನ್ನು/ದಾಖಲಾತಿಗಳನ್ನು ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದೊಳಗೆ ಅಂದರೆ, ದಿನಾಂಕ: 28-05-2011ರ ಒಳಗೆ ಪಡೆದಿರಬೇಕು ಇಲ್ಲವೇ ಸಿಂಧುವಾಗಿರಬೇಕು, ಹಾಗೂ ಆಯೋಗವು ಪರಿಶೀಲನೆಗಾಗಿ ಹಾಜರುಪಡಿಸಲು ಸೂಚಿಸಿದಾಗ ಅರ್ಜಿಯಲ್ಲಿ ನಮೂದಿಸಿರುವ ಮೀಸಲಾತಿಯ ಪ್ರಮಾಣ ಪತ್ರಗಳ ಮೂಲ ಪ್ರತಿಗಳನ್ನು ತಪ್ಪದೇ ಹಾಜರುಪಡಿಸತಕ್ಕದ್ದು, ತಪ್ಪಿದಲ್ಲಿ ಕೆಳಕಂಡಂತೆ ಕ್ರಮ ಕೈಗೊಳ್ಳಲಾಗುವುದು.

1) ಕಡ್ಡಾಯವಾಗಿ ಹಾಜರು ಪಡಿಸಬೇಕಾದ ವಿದ್ಯಾರ್ಹತೆ/ ಜನ್ಮ ದಿನಾಂಕ ಪ್ರಮಾಣ ಪತ್ರಗಳನ್ನು ಹಾಜರುಪಡಿಸದಿದ್ದಲ್ಲಿ ಅಭ್ಯರ್ಥಿಯ ಅಭ್ಯರ್ಥಿತ್ವವನ್ನು ರದ್ದುಪಡಿಸಲಾಗುವುದು.

2) ವಿವಿಧ ಮೀಸಲಾತಿ ಕೋರಿ ಹಾಜರುಪಡಿಸಬೇಕಾದ ಪ್ರಮಾಣ ಪತ್ರಗಳನ್ನು ಹಾಜರುಪಡಿಸದಿದ್ದಲ್ಲಿ ಆ ಮೀಸಲಾತಿಯನ್ನು ರದ್ದುಪಡಿಸಿ ಸಾಮಾನ್ಯ ಅರ್ಹತೆಯಲ್ಲಿ ಅರ್ಹತೆಯನ್ನು ಹೊಂದಿದ್ದಲ್ಲಿ ಮಾತ್ರ, ಸಾಮಾನ್ಯ ಅರ್ಹತೆಯ ಅಭ್ಯರ್ಥಿಯೆಂದು ಪರಿಗಣಿಸಲಾಗುವುದು.

12. ಅನ್ವಯಿಸುವ ಮೀಸಲಾತಿ ಹಾಗೂ ವಯೋಮಿತಿ ರಿಯಾಯಿತಿ ಕೋರಿದ್ದಲ್ಲಿ, ಮೂಲ ದಾಖಲಾತಿಗಳ ಪರಿಶೀಲನಾ ಸಮಯದಲ್ಲಿ ಹಾಜರುಪಡಿಸಬೇಕಾದ ಪ್ರಮಾಣ ಪತ್ರಗಳು :

1. ಸೈನಿಕ ಸೇವೆಯಿಂದ ಬಿಡುಗಡೆಯಾದ/ಮುಕ್ತಿಹೊಂದಿದ ಬಗೆಗಿನ ಪ್ರಮಾಣ ಪತ್ರ

   ಟಿಪ್ಪಣಿ: ಮಾಜಿ ಸೈನಿಕ ಮೀಸಲಾತಿ ಕೋರುವ ಅಭ್ಯರ್ಥಿಗಳು ನಿಯಮಾನುಸಾರ ಆ ಮೀಸಲಾತಿಗೆ ಅರ್ಹರೆ? ಎಂಬುದನ್ನು ಹತ್ತಿರದ ಜಿಲ್ಲಾ ಸೈನಿಕ ಬೋರ್ಡ್‌ನಿಂದ ತಿಳಿದುಕೊಂಡು ಮೀಸಲಾತಿಯನ್ನು ಕೋರುವುದು ಸೂಕ್ತ.
2. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ-1, ಪ್ರವರ್ಗ-2ಎ, ಪ್ರವರ್ಗ-2ಬಿ, ಪ್ರವರ್ಗ-3ಎ, ಪ್ರವರ್ಗ-3ಬಿ ಮೀಸಲಾತಿ ಅಭ್ಯರ್ಥಿಗಳು ನಮೂನೆ ಡಿ/ಇ/ಎಫ್ ನಲ್ಲಿ ತಹಶೀಲ್ದಾರ್‌ರವರಿಂದ ಪಡೆದಿರುವ ಪ್ರಮಾಣ ಪತ್ರ.
3. ಸೇವೆಯಲ್ಲಿದ್ದ/ಸೇವೆಯಲ್ಲಿರುವ ಅಭ್ಯರ್ಥಿಗಳು ಅವರು ಸೇವೆಯಲ್ಲಿರುವ/ಸೇವೆಯಲ್ಲಿದ್ದ ಬಗ್ಗೆ ಅರ್ಜಿಯಲ್ಲಿನ ನಿಗದಿತ ಅಂಕಣವನ್ನು ಅಗತ್ಯ ಮಾಹಿತಿಯೊಂದಿಗೆ ತುಂಬತಕ್ಕದ್ದು, ಹಾಗೂ ಅವರ ಸೇವಾಪ್ರಮಾಣಪತ್ರ ಮತ್ತು ಸದರಿ ಹುದ್ದೆಗೆ ಅರ್ಜಿ ಸಲ್ಲಿಸುವ ಬಗ್ಗೆ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ('No Objection' Certificate)/ಸೇವಾ ಪ್ರಮಾಣ ಪತ್ರವನ್ನು ಸಂಬಂಧಿತ ನೇಮಕಾತಿ ಪ್ರಾಧಿಕಾರದಿಂದ ಅರ್ಜಿಗಳನ್ನು ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಪಡೆದಿಟ್ಟುಕೊಂಡಿರಬೇಕು.
4. ಗ್ರಾಮೀಣ ಮೀಸಲಾತಿ ಪ್ರಮಾಣ ಪತ್ರ ನಮೂನೆ-1 ಮತ್ತು 2 ರಲ್ಲಿ
5. ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಪ್ರಮಾಣ ಪತ್ರ
6. ಅಂಗವಿಕಲ ಅಭ್ಯರ್ಥಿಗಳು ನಿಗದಿಪಡಿಸಿದ ನಮೂನೆಯಲ್ಲಿ ಪಡೆದ ವೈದ್ಯಕೀಯ ಪ್ರಮಾಣ ಪತ್ರ.
7. ಯೋಜನಾ ನಿರಾಶ್ರಿತ ಅಭ್ಯರ್ಥಿಗಳು, ವಿಧವೆಯರು, ಜೀತ ಕಾರ್ಮಿಕರು, ಗ್ರಾಮ ಸಮೂಹ ಪರಿಶೀಲಕರು ಮತ್ತು ಕ್ಯಾಡೆಟ್ ಪರಿವೀಕ್ಷಕರು ಇವರುಗಳು ಸಕ್ಷಮ ಪ್ರಾಧಿಕಾರದಿಂದ ಪಡೆದ ಪ್ರಮಾಣಪತ್ರ.

ಈ ಮೇಲಿನ ಅರ್ಹತೆ, ಮೀಸಲಾತಿ ಇತ್ಯಾದಿಗಳನ್ನು ಆಯೋಗವು ಕೂಲಂಕಷವಾಗಿ ಪರಿಶೀಲಿಸಿದ ನಂತರವೇ ಅಭ್ಯರ್ಥಿಗಳನ್ನು ಜೇಷ್ಠತೆ ಮತ್ತು ಮೀಸಲಾತಿ ಆಧಾರದ ಮೇಲೆ ಆಯ್ಕೆ ಪ್ರಕ್ರಿಯೆಗೆ ಪರಿಗಣಿಸಲಾಗುವುದು.

13. ಪ್ರಮುಖ ಸೂಚನೆಗಳು:

1. ಅಭ್ಯರ್ಥಿಗಳು ON-LINE ಅರ್ಜಿಗಳಲ್ಲಿ ನೀಡುವ ಮಾಹಿತಿಗಳ ಆಧಾರದ ಮೇಲೆ ಅವರುಗಳು ನೇಮಕಾತಿಗೆ ಅರ್ಹರೆ ಎಂಬುದನ್ನು ಆಯೋಗವು ಪರಿಶೀಲಿಸಿ ಮೇಲು ನೋಟಕ್ಕೆ ಅರ್ಹರೆಂದು ಕಂಡುಬಂದ ಅಭ್ಯರ್ಥಿಗಳಿಗೆ ಮಾತ್ರ ನೇಮಕಾತಿ ಪ್ರಕ್ರಿಯೆಗೆ ಪರಿಗಣಿಸಲಾಗುವುದು. ಆದ್ದರಿಂದ ನಿಗದಿಪಡಿಸಿರುವ ವಯೋಮಿತಿ, ವಿದ್ಯಾರ್ಹತೆ, ಮೀಸಲಾತಿ ಇತ್ಯಾದಿಗಳಿಗೆ ಅನುಗುಣವಾಗಿ ಅರ್ಜಿಯಲ್ಲಿ ಸರಿಯಾದ ಮಾಹಿತಿ ನೀಡುವುದು ಅಭ್ಯರ್ಥಿಗಳ ಜವಾಬ್ದಾರಿಯಾಗಿರುತ್ತದೆ.
2. ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಅಭ್ಯರ್ಥಿಯು ಅರ್ಜಿಯಲ್ಲಿ ನಮೂದಿಸುವ ಮೀಸಲಾತಿ, ಜನ್ಮ ದಿನಾಂಕ, ವಿದ್ಯಾರ್ಹತೆ, ಹಾಗೂ ವಯೋಮಿತಿ ಸಡಿಲಿಕೆ, ಇತ್ಯಾದಿ ವಿವರಗಳನ್ನು ಮಾತ್ರ ಗಣನೆಗೆ ತೆಗೆದುಕೊಳ್ಳಲಾಗುವುದು ಹಾಗೂ ಈ ಬಗ್ಗೆ ಆನಂತರದಲ್ಲಿ ಬದಲಾವಣೆ ಕುರಿತಂತೆ ಸಲ್ಲಿಸುವ ಯಾವುದೇ ಕೋರಿಕೆ ಪತ್ರಗಳನ್ನು ಪುರಸ್ಕರಿಸಲಾಗುವುದಿಲ್ಲ.
3. ನೇಮಕಾತಿ ಪ್ರಕ್ರಿಯೆಯ ಯಾವುದೇ ಹಂತದಲ್ಲಿ ವಿಳಾಸ ಬದಲಾವಣೆಯಾಗಿದ್ದಲ್ಲಿ ಅಭ್ಯರ್ಥಿಗಳು ಲಿಖಿತ ಮೂಲಕ ಆಯೋಗದ ಗಮನಕ್ಕೆ ತರತಕ್ಕದ್ದು. ಈ ವಿಳಾಸ ಬದಲಾವಣೆಯನ್ನು ಪರಿಗಣಿಸಲು ಆಯೋಗವು ಪ್ರಯತ್ನಿಸುವುದು. ಆದಾಗ್ಯೂ ಈ ವಿಚಾರದಲ್ಲಿ ಆಯೋಗವು ಯಾವುದೇ ಜವಾಬ್ದಾರಿಯನ್ನು ವಹಿಸಿಕೊಳ್ಳುವುದಿಲ್ಲ. ಈ ಬಗ್ಗೆ ಅಭ್ಯರ್ಥಿಗಳು ಎಚ್ಚರ ವಹಿಸತಕ್ಕದ್ದು.

14 ಅರ್ಜಿಯಲ್ಲಿ ಮೀಸಲಾತಿಗೆ ಸಂಬಂಧಿಸಿದ ಅಂಕಣದಲ್ಲಿ ಉಪಯೋಗಿಸಿದ ಪದಗಳ ಅರ್ಥವನ್ನು ಈ ಕೆಳಕಂಡಂತೆ ಅರ್ಥೈಸಿಕೊಳ್ಳಬೇಕು:-

ಸಾ.ಅ	ಸಾಮಾನ್ಯ ಅರ್ಹತೆ	GM	General Merit
ಪ.ಜಾ	ಪರಿಶಿಷ್ಟ ಜಾತಿ	SC	Scheduled Caste
ಪ.ಪಂ	ಪರಿಶಿಷ್ಟ ಪಂಗಡ	ST	Scheduled Tribe
ಪ್ರ-1	ಪ್ರವರ್ಗ-1	Cat – 1	Category – I
2ಎ	ಪ್ರವರ್ಗ-2ಎ	2A	Category – 2A
2ಬಿ	ಪ್ರವರ್ಗ-2ಬಿ	2B	Category – 2B
3ಎ	ಪ್ರವರ್ಗ-3ಎ	3A	Category – 3A
3ಬಿ	ಪ್ರವರ್ಗ-3ಬಿ	3B	Category – 3B
ಮಾ.ಸೈ	ಮಾಜಿ ಸೈನಿಕ	Ex-MP	Ex-Military Person
ಗ್ರಾಮೀಣ	ಗ್ರಾಮೀಣ ಅಭ್ಯರ್ಥಿ	Rural	Rural Candidate
ಕ.ಮಾ.ಅ	ಕನ್ನಡ ಮಾಧ್ಯಮ ಅಭ್ಯರ್ಥಿ	KMS	Kannada Medium Student
ಯೋ.ಅ	ಯೋಜನಾ ನಿರಾಶ್ರಿತ ಅಭ್ಯರ್ಥಿ	PDP	Project Displaced Person
ಅಂ.ವಿ.	ಅಂಗವಿಕಲ	PH	Physically Handicapped Person

15. ಆಯೋಗದೊಡನೆ ಪತ್ರ ವ್ಯವಹಾರ:

ಆಯೋಗವು ಅಭ್ಯರ್ಥಿತ್ವದ ವಿಚಾರದಲ್ಲಿ ಅಭ್ಯರ್ಥಿಗಳೊಂದಿಗೆ ಯಾವುದೇ ಪತ್ರ ವ್ಯವಹಾರವನ್ನು ನಡೆಸುವುದಿಲ್ಲ. ಆದಾಗ್ಯೂ ಅರ್ಜಿ ಸಲ್ಲಿಸುವಾಗ ಏನಾದರೂ ಸಮಸ್ಯೆ ಉಂಟಾದಲ್ಲಿ, ಸಹಾಯವಾಣಿ (HELP LINE) ಸಂಪರ್ಕಿಸತಕ್ಕದ್ದು. ಅಭ್ಯರ್ಥಿಯು ಮಾಹಿತಿಗಾಗಿ ಸಂಪರ್ಕಿಸುವ ಸಮಯದಲ್ಲಿ ಈ ಹುದ್ದೆಗಳಿಗೆ ಸಲ್ಲಿಸಿದ ಅರ್ಜಿಯ ಕ್ರಮಸಂಖ್ಯೆ, ಜನ್ಮ ದಿನಾಂಕ, ಇತ್ಯಾದಿ ವಿವರಗಳನ್ನು ನೀಡತಕ್ಕದ್ದು.

16. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆಗಳು:

ಕೇಂದ್ರ ಕಛೇರಿಯ ಮಾಹಿತಿ ಕೇಂದ್ರ	:	080-30574957
ಪ್ರಾಂತೀಯ ಕಛೇರಿ ಮೈಸೂರು	:	0821-2545956
ಪ್ರಾಂತೀಯ ಕಛೇರಿ ಬೆಳಗಾವಿ	:	0831-2475345
ಪ್ರಾಂತೀಯ ಕಛೇರಿ ಗುಲ್ಬರ್ಗಾ	:	08472-227944
ಪ್ರಾಂತೀಯ ಕಛೇರಿ ಶಿವಮೊಗ್ಗ	:	08182-228099
ಸಹಾಯವಾಣಿ (Help Line)	:	

17. ದುರ್ನಡತೆ :

ಒಬ್ಬ ಅಭ್ಯರ್ಥಿಯು ನಕಲಿ ವ್ಯಕ್ತಿಯಾಗಿರುವನೆಂದು ಅಥವಾ ಖೋಟಾ ದಸ್ತಾವೇಜು ಅಥವಾ ತಿದ್ದಲಾದ ದಸ್ತಾವೇಜುಗಳನ್ನು ಹೊಂದಿರುವನೆಂದು ಅಥವಾ ತಪ್ಪು ಅಥವಾ ಸುಳ್ಳು ಹೇಳಿಕೆ ನೀಡಿರುವನೆಂದು ಅಥವಾ ವಾಸ್ತವಿಕ ಮಾಹಿತಿಯನ್ನು ಮರೆ ಮಾಚಿರುವನೆಂದು ಅಥವಾ ನೇಮಕಾತಿ ಉದ್ದೇಶಗಳಿಗಾಗಿ ನಡೆಸಲಾದ ವಾಖಿಲಾತಿಗಳ ಪರಿಶೀಲನಾ ಸಮಯದಲ್ಲಿ ಅನುಚಿತ ಮಾರ್ಗವನ್ನು ಅನುಸರಿಸುತ್ತಿರುವನೆಂದು ಅಥವಾ ತಪ್ಪಿತಸ್ಥನೆಂದು ಕಂಡುಬಂದಲ್ಲಿ ಹಾಗೂ ಆಯೋಗದಿಂದ ನೀಡಲಾದ ಯಾವುದೇ ಸೂಚನೆಗಳನ್ನು ಉಲ್ಲಂಘಿಸುತ್ತಿರುವನೆಂದು ಅಥವಾ ಅವನು ನೇಮಕಾತಿಯ ಸಂಬಂಧದಲ್ಲಿ ಯಾವುದೇ ಇತರೆ ಅಕ್ರಮ ಮತ್ತು ಅನುಚಿತ ಮಾರ್ಗವನ್ನು ಅವಲಂಬಿಸಿರುವನೆಂದು, ಕಂಡುಬಂದಲ್ಲಿ ಅಭ್ಯರ್ಥಿಯು ಸ್ವತಃ ಕ್ರಿಮಿನಲ್ ವ್ಯವಹರಣೆಗಳಿಗೆ ಮತ್ತು ಶಿಸ್ತು ಕ್ರಮಕ್ಕೆ ಒಳಪಡುವುದಲ್ಲದೆ, ಹುದ್ದೆಯ ಆಯ್ಕೆಯಿಂದ ಅಭ್ಯರ್ಥಿತ್ವವನ್ನು ರದ್ದುಪಡಿಸಲಾಗುವುದು.

ಡಿ.ಎಸ್. ವಿಶ್ವನಾಥ್
ಕಾರ್ಯದರ್ಶಿ,
ಕರ್ನಾಟಕ ಲೋಕಸೇವಾ ಆಯೋಗ.

ಅನುಬಂಧ-1

ಸರ್ಕಾರದ ಆದೇಶ ಸಂಖ್ಯೆ: ಡಿಇ 26 ಪಾಪಾಸೇ 88, ದಿನಾಂಕ 2-3-1988.

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಸಂದರ್ಭದಲ್ಲಿ ದಿನಾಂಕ 13-5-02ರ ಸಂಖ್ಯೆ: ಇಡಿ 99 ಟಿಪಿಇ 80ರ ಆದೇಶಕ್ಕೆ ಮುಂದುವರೆಸುತ್ತಾ, ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸುತ್ತಿರುವ ಕಮರ್ಷಿಯಲ್ ಪ್ರಾಕ್ಟೀಸ್ ಡಿಪ್ಲೋಮಾ ಪರೀಕ್ಷೆ (ಹೊಸ ಪಠ್ಯಕ್ರಮ) ಯನ್ನು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸುತ್ತಿರುವ ಕಿರಿಯ ಮತ್ತು ಪ್ರೌಢ ದರ್ಜೆ ಬೆರಳಚ್ಚು ಮತ್ತು ಶೀಘ್ರಲಿಪಿ ಪರೀಕ್ಷೆಗಳಿಗೆ ತತ್ಸಮಾನವೆಂದು ಈ ಕೆಳಕಂಡಂತೆ ಆದೇಶಿಸಲಾಗಿದೆ:

ಕ್ರಮ ಸಂಖ್ಯೆ	ವಿದ್ಯಾರ್ಹತೆ	ಕಾಲಂ 2ರಲ್ಲಿನ ವಿದ್ಯಾರ್ಹತೆ ಇದಕ್ಕೆ ಸಮ
1.	ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿಯ ಕಮರ್ಷಿಯಲ್ ಪ್ರಾಕ್ಟೀಸ್ (ಹೊಸ ಪಠ್ಯ ಕ್ರಮ) ನ 2ನೇ ವರ್ಷದ ಡಿಪ್ಲೋಮಾದಲ್ಲಿ ಕನ್ನಡ ಬೆರಳಚ್ಚು ವಿಷಯದಲ್ಲಿ ಉತ್ತೀರ್ಣತೆ	ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ಕಿರಿಯ ದರ್ಜೆಯ ಕನ್ನಡ ಬೆರಳಚ್ಚು ಪರೀಕ್ಷೆಯಲ್ಲಿ ಉತ್ತೀರ್ಣತೆಗೆ ಸಮ
2.	ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿಯ ಕಮರ್ಷಿಯಲ್ ಪ್ರಾಕ್ಟೀಸ್ (ಹೊಸ ಪಠ್ಯ ಕ್ರಮ) ನ 2ನೇ ವರ್ಷದ ಡಿಪ್ಲೋಮಾದಲ್ಲಿ ಕನ್ನಡ ಶೀಘ್ರಲಿಪಿ ವಿಷಯದಲ್ಲಿ ಉತ್ತೀರ್ಣತೆ	ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ಕಿರಿಯ ದರ್ಜೆಯ ಕನ್ನಡ ಶೀಘ್ರಲಿಪಿ ಪರೀಕ್ಷೆಯಲ್ಲಿ ಉತ್ತೀರ್ಣತೆಗೆ ಸಮ
3.	ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿಯ ಕಮರ್ಷಿಯಲ್ ಪ್ರಾಕ್ಟೀಸ್ (ಹೊಸ ಪಠ್ಯ ಕ್ರಮ) ನ 3ನೇ ವರ್ಷದ ಡಿಪ್ಲೋಮಾದಲ್ಲಿ ಕನ್ನಡ ಬೆರಳಚ್ಚು ವಿಷಯದಲ್ಲಿ ಉತ್ತೀರ್ಣತೆ	ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ಪ್ರೌಢ ದರ್ಜೆಯ ಕನ್ನಡ ಬೆರಳಚ್ಚು ಪರೀಕ್ಷೆಯಲ್ಲಿ ಉತ್ತೀರ್ಣತೆಗೆ ಸಮ
4.	ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿಯ ಕಮರ್ಷಿಯಲ್ ಪ್ರಾಕ್ಟೀಸ್ (ಹೊಸ ಪಠ್ಯ ಕ್ರಮ) ನ 3ನೇ ವರ್ಷದ ಡಿಪ್ಲೋಮಾದಲ್ಲಿ ಕನ್ನಡ ಶೀಘ್ರಲಿಪಿ ವಿಷಯದಲ್ಲಿ ಉತ್ತೀರ್ಣತೆ	ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ಪ್ರೌಢ ದರ್ಜೆಯ ಕನ್ನಡ ಶೀಘ್ರಲಿಪಿ ಪರೀಕ್ಷೆಯಲ್ಲಿ ಉತ್ತೀರ್ಣತೆಗೆ ಸಮ

ದಿನಾಂಕ: 16-07-1974ರ ಸಂಖ್ಯೆ: ಇಡಿ 2 ಡಿಟಿಇ 74ರ ಆದೇಶವನ್ನು ರದ್ದುಪಡಿಸಲಾಗಿದೆ.

ಈ ಆದೇಶದಲ್ಲಿನ ತತ್ಸಮಾನ ವಿದ್ಯಾರ್ಹತೆಗಳು ದಿನಾಂಕ: 06-04-1987ರಿಂದಲೇ ಜಾರಿಗೆ ಬರುತ್ತದೆ.

ಕರ್ನಾಟಕ ರಾಜ್ಯ ಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಲೀಲಾ ಜಾರ್ಜ್

ಸರ್ಕಾರದ ಅಧೀನ ಕಾರ್ಯದರ್ಶಿ, ಶಿಕ್ಷಣ ಇಲಾಖೆ.

ಸರ್ಕಾರದ ಆದೇಶ ಸಂಖ್ಯೆ: ಇಡಿ 174 ಟಿಪಿಇ 2005, ಬೆಂಗಳೂರು, ದಿನಾಂಕ: 09ನೇ ನವೆಂಬರ್ 2006

ತಾಂತ್ರಿಕ ಶಿಕ್ಷಣ ನಿರ್ದೇಶಕರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರವು ದಿನಾಂಕ: 02.03.1988 ಸಂಖ್ಯೆ: ಇಡಿ 26 ತಾಪಾಸೇ ೮೮ರ ಆದೇಶವನ್ನು ಮುಂದುವರೆಸುತ್ತಾ, ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸುತ್ತಿರುವ ಕಮರ್ಷಿಯಲ್ ಪ್ರಾಕ್ಟೀಸ್ ಡಿಪ್ಲೊಮೊ ಪರೀಕ್ಷೆಗಳ ಕನ್ನಡ ಬೆರಳಚ್ಚು ಮತ್ತು ಶೀಘ್ರಲಿಪಿ ವಿಷಯಗಳ ಪರೀಕ್ಷೆಗಳ ಮಾರ್ಪಾಡನ್ನು ಈ ಕೆಳಕಂಡಂತೆ ಮಾಡಲಾಗಿದ್ದು ಇದನ್ನು ನೇಮಕಾತಿಗಳಿಗಾಗಿ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ ಕನ್ನಡ ಬೆರಳಚ್ಚು ಮತ್ತು ಶೀಘ್ರಲಿಪಿ ಪರೀಕ್ಷೆಗಳ ತತ್ಸಮಾನತೆಗೆ ಪರಿಗಣಿಸಬೇಕಾಗುತ್ತದೆ ಎಂದು ಈ ಕೆಳಕಂಡಂತೆ ಆದೇಶಿಸಲಾಗಿದೆ.

ಕ್ರಮ ಸಂಖ್ಯೆ:	ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ ಪರೀಕ್ಷೆಗಳ ತೇರ್ಗಡೆ	ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ ಪರೀಕ್ಷೆಗಳಿಗೆ ಅನ್ವಯವಾಗುವಂತೆ ತತ್ಸಮಾನತೆ
1	ಕಮರ್ಷಿಯಲ್ ಪ್ರಾಕ್ಟೀಸ್‌ನ 2ನೇ ಸೆಮಿಸ್ಟರ್ ಕನ್ನಡ ಬೆರಳಚ್ಚು ತೇರ್ಗಡೆ	ವಾಣಿಜ್ಯ ಪರೀಕ್ಷೆಗಳ ಪ್ರಥಮ ದರ್ಜೆ ಕನ್ನಡ ಬೆರಳಚ್ಚು (ಜೂನಿಯರ್ ಗ್ರೇಡ್)
2	ಸಿ.ಪಿ 3ನೇ ಮತ್ತು 4ನೇ ಸೆಮಿಸ್ಟರ್ ಕನ್ನಡ ಶೀಘ್ರಲಿಪಿ ತೇರ್ಗಡೆ	ವಾಣಿಜ್ಯ ಪರೀಕ್ಷೆಗಳ ಶೀಘ್ರಲಿಪಿ ಪ್ರಥಮ ದರ್ಜೆ ಕನ್ನಡ (ಜೂನಿಯರ್ ಗ್ರೇಡ್)
3	ಸಿ.ಪಿ 4ನೇ ಸೆಮಿಸ್ಟರ್ ಬೆರಳಚ್ಚು ತೇರ್ಗಡೆ	ವಾಣಿಜ್ಯ ಪರೀಕ್ಷೆಗಳ ಬೆರಳಚ್ಚು ಪ್ರೌಢ ದರ್ಜೆ ಕನ್ನಡ (ಸೀನಿಯರ್ ಗ್ರೇಡ್)
4	ಸಿ.ಪಿ 5ನೇ ಮತ್ತು 6ನೇ ಸೆಮಿಸ್ಟರ್ ಶೀಘ್ರಲಿಪಿ ತೇರ್ಗಡೆ	ವಾಣಿಜ್ಯ ಪರೀಕ್ಷೆಗಳ ಶೀಘ್ರಲಿಪಿ ಪ್ರೌಢ ದರ್ಜೆ ಕನ್ನಡ (ಸೀನಿಯರ್ ಗ್ರೇಡ್)

1999-2000ನೇ ಸಾಲಿನಿಂದ ಶೈಕ್ಷಣಿಕವಾಗಿ ಸ್ವಾಯತ್ತತೆ ಪಡೆದ ಈ ಕೆಳಕಂಡ (ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನದಲ್ಲಿರುವ ಸರ್ಕಾರಿ ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ ಸಿ.ಪಿ ಡಿಪ್ಲೋಮಾದ ಕನ್ನಡ ಬೆರಳಚ್ಚು ಹಾಗೂ ಶೀಘ್ರಲಿಪಿ ವಿಷಯಗಳಿಗೆ ಸಂಬಂಧಿಸಿದಂತೆ ನಡೆಸಲಾದ ಪರೀಕ್ಷೆಗಳು ಹಾಗೂ ಕನ್ನಡ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ಸದರಿ ವಿಷಯಗಳ ತತ್ಸಮಾನತೆ ವಿವರ ಈ ಕೆಳಕಂಡಂತಿದೆ.

(ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಬೆಂಗಳೂರು 1999-2000ದಿಂದ ಸ್ವಾಯತ್ತತೆ ಪಡೆದಿದೆ)

ಕ್ರಮ ಸಂಖ್ಯೆ	ಕಮರ್ಷಿಯಲ್ ಪ್ರಾಕ್ಟೀಸ್‌ನ ಡಿಪ್ಲೊಮೊ	ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ ಪರೀಕ್ಷೆಗಳಿಗೆ ತತ್ಸಮಾನತೆ
1	ಬೆರಳಚ್ಚು - 3ನೇ ಮತ್ತು 4ನೇ ಸೆಮಿಸ್ಟರ್ ತೇರ್ಗಡೆ	ವಾಣಿಜ್ಯ ಪರೀಕ್ಷೆಗಳ ಬೆರಳಚ್ಚು ಪ್ರಥಮ ದರ್ಜೆಗೆ (ಜೂನಿಯರ್ ಗ್ರೇಡ್) ತತ್ಸಮಾನ
2	ಶೀಘ್ರಲಿಪಿ- 3ನೇ ಮತ್ತು 4ನೇ ಸೆಮಿಸ್ಟರ್ ತೇರ್ಗಡೆ	ವಾಣಿಜ್ಯ ಪರೀಕ್ಷೆಗಳ ಶೀಘ್ರಲಿಪಿ ಪ್ರಥಮ ದರ್ಜೆಗೆ (ಜೂನಿಯರ್ ಗ್ರೇಡ್) ತತ್ಸಮಾನ
3	ಬೆರಳಚ್ಚು - 5ನೇ ಮತ್ತು 6ನೇ ಸೆಮಿಸ್ಟರ್ ತೇರ್ಗಡೆ	ವಾಣಿಜ್ಯ ಪರೀಕ್ಷೆಗಳ ಬೆರಳಚ್ಚು ಪ್ರೌಢ ದರ್ಜೆಗೆ (ಸೀನಿಯರ್ ಗ್ರೇಡ್) ತತ್ಸಮಾನ
4	ಶೀಘ್ರಲಿಪಿ- 5ನೇ ಮತ್ತು 6ನೇ ಸೆಮಿಸ್ಟರ್ ತೇರ್ಗಡೆ	ವಾಣಿಜ್ಯ ಪರೀಕ್ಷೆಗಳ ಶೀಘ್ರಲಿಪಿ ಪ್ರೌಢ ದರ್ಜೆಗೆ (ಸೀನಿಯರ್ ಗ್ರೇಡ್) ತತ್ಸಮಾನ

ಸೂಚನೆ: 1999-2000ದಿಂದ ಇಲ್ಲಿಯವರೆಗೆ ಸದರಿ ವಿಷಯಗಳ ಪಠ್ಯಕ್ರಮದಲ್ಲಿ ಬದಲಾವಣೆ ಇರುವುದಿಲ್ಲ.

ಸಿ.ಪಿ.ಸಿ ಸರ್ಕಾರಿ ಪಾಲಿಟೆಕ್ನಿಕ್, ಮೈಸೂರು (1999-2000ದವರೆಗೆ)

ಕ್ರಮ ಸಂಖ್ಯೆ:	ಕಮರ್ಷಿಯಲ್ ಪ್ರಾಕ್ಟೀಸ್‌ನ ಡಿಪ್ಲೊಮೊ	ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ ಪರೀಕ್ಷೆಗಳಿಗೆ ತತ್ಸಮಾನತೆ
1	4ನೇ ಸೆಮಿಸ್ಟರ್ ಬೆರಳಚ್ಚು ತೇರ್ಗಡೆ	ಬೆರಳಚ್ಚು ಪ್ರಥಮ ದರ್ಜೆಗೆ ತತ್ಸಮಾನ
2	4ನೇ ಸೆಮಿಸ್ಟರ್ ಶೀಘ್ರಲಿಪಿ ತೇರ್ಗಡೆ	ಶೀಘ್ರಲಿಪಿ ಪ್ರಥಮ ದರ್ಜೆಗೆ ತತ್ಸಮಾನ
3	5ನೇ ಸೆಮಿಸ್ಟರ್ ಬೆರಳಚ್ಚು ತೇರ್ಗಡೆ	ವಾಣಿಜ್ಯ ಪರೀಕ್ಷೆಗಳ ಬೆರಳಚ್ಚು ಪ್ರೌಢ ದರ್ಜೆಗೆ ತತ್ಸಮಾನ
4	6ನೇ ಸೆಮಿಸ್ಟರ್ ಶೀಘ್ರಲಿಪಿ ತೇರ್ಗಡೆ	ವಾಣಿಜ್ಯ ಪರೀಕ್ಷೆಗಳ ಶೀಘ್ರಲಿಪಿ ಪ್ರೌಢ ದರ್ಜೆಗೆ ತತ್ಸಮಾನ

ಸೂಚನೆ:– ಈ ಸಂಸ್ಥೆಯ 2003–04ನೇ ಶೈಕ್ಷಣಿಕ ಸಾಲಿನಿಂದ ಕಂಡಿಕೆ (1)ರ ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿಯ ಪಠ್ಯಕ್ರಮದ ಅನುಸಾರ ಪರೀಕ್ಷೆಗಳನ್ನು ನಡೆಸುತ್ತಿದ್ದು ಸದರಿ ಕಂಡಿಕೆಯನ್ನು ಕಂಡಿಕೆ (1) ಪರಿಗಣಿಸಿರುವುದು.

ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಹುಬ್ಬಳ್ಳಿ

ಕ್ರಮ ಸಂಖ್ಯೆ	ಕಮರ್ಷಿಯಲ್ ಪ್ರಾಕ್ಟೀಸ್‌ನ ಡಿಪ್ಲೊಮೊ	ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ ಪರೀಕ್ಷೆಗಳಿಗೆ ತತ್ಸಮಾನತೆ
1	3ನೇ ಮತ್ತು 4ನೇ ಸೆಮಿಸ್ಟರ್ ಬೆರಳಚ್ಚು ಮತ್ತು ಶೀಘ್ರಲಿಪಿ ತೇರ್ಗಡೆ	ವಾಣಿಜ್ಯ ಪರೀಕ್ಷೆಗಳ ಬೆರಳಚ್ಚು ಮತ್ತು ಶೀಘ್ರಲಿಪಿ ಪ್ರಥಮ ದರ್ಜೆಗೆ ತತ್ಸಮಾನ
2	5ನೇ ಮತ್ತು 6ನೇ ಸೆಮಿಸ್ಟರ್ ಬೆರಳಚ್ಚು ಮತ್ತು ಶೀಘ್ರಲಿಪಿ ತೇರ್ಗಡೆ	ವಾಣಿಜ್ಯ ಪರೀಕ್ಷೆಗಳ ಬೆರಳಚ್ಚು ಮತ್ತು ಶೀಘ್ರಲಿಪಿ ಪ್ರೌಢ ದರ್ಜೆಗೆ ತತ್ಸಮಾನ

ಸೂಚನೆ:– 1999–2000ನೇ ಶೈಕ್ಷಣಿಕ ಸ್ವಾಯತ್ತತೆ ಪಡೆದ ಈ ಸಂಸ್ಥೆಯು ಸದರಿ ವಿಷಯಗಳು ಪಠ್ಯಕ್ರಮದಲ್ಲಿ ಇಲ್ಲಿಯವರೆವಿಗೂ ಯಾವುದೇ ಬದಲಾವಣೆ ಇರುವುದಿಲ್ಲ.

ಬಿ.ವಿ.ವಿ.ಎಸ್ ಪಾಲಿಟೆಕ್ನಿಕ್, ಬಾಗಲಕೋಟೆ (1999–2000ದಿಂದ 2002ರವರೆಗೆ)

ಕ್ರಮ ಸಂಖ್ಯೆ	ಕಮರ್ಷಿಯಲ್ ಪ್ರಾಕ್ಟೀಸ್‌ನ ಡಿಪ್ಲೊಮೊ	ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ ಪರೀಕ್ಷೆಗಳಿಗೆ ತತ್ಸಮಾನತೆ
1	5ನೇ ಮತ್ತು 6ನೇ ಸೆಮಿಸ್ಟರ್ ಬೆರಳಚ್ಚು ಮತ್ತು ಶೀಘ್ರಲಿಪಿ ತೇರ್ಗಡೆ	ವಾಣಿಜ್ಯ ಪರೀಕ್ಷೆಗಳ ಬೆರಳಚ್ಚು ಮತ್ತು ಶೀಘ್ರಲಿಪಿ ಪ್ರೌಢ ದರ್ಜೆಗೆ ತತ್ಸಮಾನ

ಕರ್ನಾಟಕ ರಾಜ್ಯ ಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎಂ.ಪಿ.ಮಂಜುನಾಥ್

ಸರ್ಕಾರದ ಅಧೀನ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ತಾಂತ್ರಿಕ ಶಿಕ್ಷಣ)

ಅನುಬಂಧ–2

ಶೀಘ್ರಲಿಪಿಗಾರರ ಹುದ್ದೆಗಳ ವರ್ಗೀಕರಣ

1. ಕರ್ನಾಟಕ ಸರ್ಕಾರ ಸಚಿವಾಲಯ, ಹುದ್ದೆಗಳ ಸಂಖ್ಯೆ:50								
ಮೀಸಲಾತಿ	**ಇತರೆ**	**ಮಹಿಳೆ**	**ಗ್ರಾಮೀಣ**	**ಮಾ.ಸೈ.**	**ಕ.ಮಾ.ಅ**	**ಯೋ.ಅ**	**ಅಂ.ವಿ**	**ಒಟ್ಟು**
ಪ.ಜಾ.	1	2	2	1	1	–	–	7
ಪ.ಪಂ.	–	–	1	–	–	–	–	1
ಪ್ರವರ್ಗ–1	–	–	1	–	–	–	1	2
ಪ್ರವರ್ಗ–2(ಎ)	2	2	2	1	1	–	–	8
ಪ್ರವರ್ಗ–2(ಬಿ)	–	–	1	–	–	–	1	2
ಪ್ರವರ್ಗ–3(ಎ)	–	1	1	–	–	–	–	2
ಪ್ರವರ್ಗ–3(ಬಿ)	–	1	1	–	–	–	1	3
ಸಾ.ಅ.	5	8	6	2	1	1	2	25
ಒಟ್ಟು	**8**	**14**	**15**	**4**	**3**	**1**	**5**	**50**
ಅಂಗವಿಕಲರಿಗೆ ಮೀಸಲಿರುವ ಹುದ್ದೆಗಳನ್ನು ಸರ್ಕಾರದ ಆದೇಶ ಸಂಖ್ಯೆ: ಡಿಪಿಎಆರ್ 52 ಎಸ್‌ಆರ್‌ಆರ್ 99, ದಿ: 29–11–2002ರನ್ವಯ ಚಲನವಲನ ವೈಕಲ್ಯವುಳ್ಳ (Locomotor disability) ಅಭ್ಯರ್ಥಿಗಳಿಗೆ ಮೀಸಲಿರಿಸಲಾಗಿದೆ.								

2. ಭಾಷಾಂತರ ನಿರ್ದೇಶನಾಲಯ ಹುದ್ದೆಗಳ ಸಂಖ್ಯೆ:02								
ಮೀಸಲಾತಿ	**ಇತರೆ**	**ಮಹಿಳೆ**	**ಗ್ರಾಮೀಣ**	**ಮಾ.ಸೈ.**	**ಕ.ಮಾ.ಅ**	**ಯೋ.ಅ**	**ಅಂ.ವಿ**	**ಒಟ್ಟು**
ಪ್ರ–2(ಎ)	1	–	–	–	–	–	–	1
ಸಾ.ಅ.	–	–	–	–	–	–	1	1
ಒಟ್ಟು	**1**	–	–	–	–	–	**1**	**2**
ಅಂಗವಿಕಲರಿಗೆ ಮೀಸಲಿರುವ ಹುದ್ದೆಯನ್ನು ಸರ್ಕಾರದ ಆದೇಶ ಸಂಖ್ಯೆ: ಡಿಪಿಎಆರ್ 52 ಎಸ್‌ಆರ್‌ಆರ್ 99, ದಿ: 29–11–2002ರನ್ವಯ ಚಲನವಲನ ವೈಕಲ್ಯವುಳ್ಳ (Locomotor disability) ಅಭ್ಯರ್ಥಿಗೆ ಮೀಸಲಿರಿಸಲಾಗಿದೆ.								

3. ಸಾರಿಗೆ ಇಲಾಖೆ, ಹುದ್ದೆಗಳ ಸಂಖ್ಯೆ: 08								
ಮೀಸಲಾತಿ	ಇತರೆ	ಮಹಿಳೆ	ಗ್ರಾಮೀಣ	ಮಾ.ಸೈ.	ಕ.ಮಾ.ಅ	ಯೋ.ಅ	ಅಂ.ವಿ	ಒಟ್ಟು
ಪ.ಜಾ.	–	1	1	–	–	–	–	2
ಪ್ರ.–2(ಎ)	–	1	–	–	–	–	–	1
ಪ್ರ.–2(ಬಿ)	1	–	–	–	–	–	–	1
ಸಾ.ಅ.	1	2	1	–	–	–	–	4
ಒಟ್ಟು	**2**	**4**	**2**	–	–	–	–	**8**

4. ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣ, ಹುದ್ದೆಗಳ ಸಂಖ್ಯೆ: 05								
ಮೀಸಲಾತಿ	ಇತರೆ	ಮಹಿಳೆ	ಗ್ರಾಮೀಣ	ಮಾ.ಸೈ.	ಕ.ಮಾ.ಅ	ಯೋ.ಅ	ಅಂ.ವಿ	ಒಟ್ಟು
ಪ್ರ.–2(ಎ)	–	1	–	–	–	–	–	1
ಪ್ರ.–2(ಬಿ)	1	–	–	–	–	–	–	1
ಸಾ.ಅ.	1	1	1	–	–	–	–	3
ಒಟ್ಟು	**2**	**2**	**1**	–	–	–	–	**5**

5.ಆಯುಷ್ ಇಲಾಖೆ, ಹುದ್ದೆಗಳ ಸಂಖ್ಯೆ:02								
ಮೀಸಲಾತಿ	ಇತರೆ	ಮಹಿಳೆ	ಗ್ರಾಮೀಣ	ಮಾ.ಸೈ.	ಕ.ಮಾ.ಅ	ಯೋ.ಅ	ಅಂ.ವಿ	ಒಟ್ಟು
ಪ.ಜಾ.	1	–	–	–	–	–	–	1
ಸಾ.ಅ.	1	–	–	–	–	–	–	1
ಒಟ್ಟು	**2**	–	–	–	–	–	–	**2**

ಅನುಬಂಧ–3

ಬೆರಳಚ್ಚುಗಾರರ ಹುದ್ದೆಗಳ ವರ್ಗೀಕರಣ

1. ಕರ್ನಾಟಕ ಸರ್ಕಾರದ ಸಚಿವಾಲಯ, ಹುದ್ದೆಗಳ ಸಂಖ್ಯೆ: 150

ಮೀಸಲಾತಿ	ಇತರೆ	ಮಹಿಳೆ	ಗ್ರಾಮೀಣ	ಮಾ.ಸೈ	ಕ.ಮಾ.ಅ	ಯೋ.ಅ	ಅಂ.ವಿ	ಒಟ್ಟು
ಪ.ಜಾ	6	7	5	3	1	1	–	23
ಪ.ಪಂ	1	2	1	–	1	–	–	5
ಪ್ರ–1	2	2	1	1	–	–	–	6
ಪ್ರ–2(ಎ)	6	7	6	2	1	1	–	23
ಪ್ರ–2(ಬಿ)	–	2	2	–	1	1	–	6
ಪ್ರ–3(ಎ)	–	1	2	–	1	1	–	5
ಪ್ರ–3(ಬಿ)	2	2	1	1	–	1	–	7
ಸಾ.ಅ	20	22	18	8	3	4	–	75
ಒಟ್ಟು	**37**	**45**	**36**	**15**	**8**	**9**	–	**150**
ಸರ್ಕಾರದ ಆದೇಶ ಸಂಖ್ಯೆ: ಡಿಪಿಎಆರ್ 52 ಎಸ್ಆರ್ಆರ್ 99, ದಿ: 29–11–2002ರಲ್ಲಿ ಯಾವುದೇ ಅಂಗವೈಕಲ್ಯವುಳ್ಳ ಅಭ್ಯರ್ಥಿಗಳನ್ನು ಈ ಇಲಾಖೆಗೆ ಗುರುತಿಸಿರುವುದಿಲ್ಲ.								

2. ರಾಜ್ಯಲೆಕ್ಕ ಪತ್ರ ಇಲಾಖೆ, ಹುದ್ದೆಗಳ ಸಂಖ್ಯೆ:07

ಮೀಸಲಾತಿ	ಇತರೆ	ಮಹಿಳೆ	ಗ್ರಾಮೀಣ	ಮಾ.ಸೈ	ಕ.ಮಾ.ಅ	ಯೋ.ಅ	ಅಂ.ವಿ	ಒಟ್ಟು
ಪ.ಜಾ	–	–	1	–		–	–	1
